ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 7 ಶನಿವಾರ 2026

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 289 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಮೈಸೂರು ಮಿತ್ರ ಶನಿವಾರ 7 ಫೆಬ್ರವರಿ 2026

ಇಂದು ಮಕ್ಕಳ ನಾಟಕ ಪ್ರದರ್ಶನ

ಮೈಸೂರು, ಫೆ.6– ಅದಮ್ಯ ರಂಗ ಶಾಲೆಯ ವತಿಯಿಂದ 'ಕಣ್ಕಟ್ ನಗರ' ಎಂಬ ಮಕ್ಕಳ ನಾಟಕ ಪ್ರದರ್ಶನವು ಫೆ.7 ರಂದು ಸಂಜೆ 6 ಗಂಟೆಗೆ ನಗರದ ರಂಗಾಯಣದ ಆವರಣದಲ್ಲಿರುವ ಶ್ರೀರಂಗ ಸಭಾಂಗಣದಲ್ಲಿ ನಡೆಯಲಿದೆ ಎಂದು ರಂಗಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಚಂದ್ರು ಮಂಡ್ಯ ತಿಳಿಸಿದ್ದಾರೆ.

ಮಕ್ಕಳ ನಾಟಕ ಪ್ರದರ್ಶನಕ್ಕೆ ಮುಖ್ಯಮಂತ್ರಿಗಳ ಚಿನ್ನದ ಪದಕ ಪುರಸ್ಕೃತ ನಿವೃತ್ತ ಪೊಲೀಸ್ ಉಪಾಧೀಕ್ಷಕ (ಡಿವೈ.ಎಸ್.ಪಿ.) ಶಾಂತಮಲ್ಲಪ್ಪ ಚಾಲನೆ ನೀಡಲಿದ್ದು, ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಪಿ.ಪ್ರಶಾಂತ್‌ಗೌಡ ಅಧ್ಯಕ್ಷತೆ ವಹಿಸುವರು. ಅದಮ್ಯ ರಂಗಶಾಲೆಯ ಗೌರವ ಕಾರ್ಯದರ್ಶಿ ಹಾಗೂ ಸಾಹಿತಿ ಟಿ. ಸತೀಶ್ ಜವರೇಗೌಡ ಆಶಯ ನುಡಿಗಳನ್ನಾಡುವರು. ಮುಖ್ಯ ಅತಿಥಿಯಾಗಿ ವಿ.ಪಿ. ಪಬ್ಲಿಕ್ ಸ್ಕೂಲ್‌ನ ಕಾರ್ಯದರ್ಶಿ ರವಿಕುಮಾರ್ ಬೆಕ್ಯಾ ಪಾಲ್ಗೊಳ್ಳುವರು.

ಬಳಿಕ ರಂಗಕರ್ಮಿ ಉಮಾಶ್ರೀ ಜಿ. ಕೂಡ್ಲಿಗಿ ನಿರ್ದೇಶನದಲ್ಲಿ ಅದಮ್ಯ ರಂಗಶಾಲೆಯ ವಾರಾಂತ್ಯ ರಂಗ ತರಬೇತಿ ಶಿಬಿರದ ಮಕ್ಕಳು ಅಭಿನಯಿಸಿರುವ 'ಕಣ್ಕಟ್ ನಗರ' ಮಕ್ಕಳ ನಾಟಕ ಪ್ರದರ್ಶನ ನಡೆಯಲಿದೆ. ನಾಟಕಕ್ಕೆ 100 ರೂಪಾಯಿ ಪ್ರವೇಶ ಧರವಿದೆ. ಮಕ್ಕಳು ಮತ್ತು ಅವರ ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ನಾಟಕ ವೀಕ್ಷಿಸಿ ಪ್ರೋತ್ಸಾಹ ನೀಡಬೇಕೆಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ 8660103141 ಸಂಪರ್ಕಿಸಬಹುದು.

ಬೃಹತ್ ಮೈಸೂರು ನಿರ್ಧಾರದಿಂದ ಹಿಂದೆ ಸರಿಯಲು ಆಗ್ರಹ

ಮೈಸೂರು, ಫೆ.6(ಎಂಟಿವೈ)– ರಿಯಲ್ ಎಸ್ಟೇಟ್ ಹಾಗೂ ಭೂ ಮಾಫಿಯಾಗಳೊಂದಿಗೆ ಸ್ಥಳೀಯ ಶಾಸಕರ ಒತ್ತಡಕ್ಕೆ ಮಣಿದು ಬೃಹತ್ ಮೈಸೂರು ಮಾಡಲು ಹೊರಟಿರುವ ನಿರ್ಧಾರದಿಂದ ಹಿಂದೆ ಸರಿಯಬೇಕು ಎಂದು ಜನಾಂದೋಲನ ಮಹಾ ಮೈತ್ರಿ ಸಂಚಾಲಕ ಉಗ್ರ ನರಸಿಂಹೇಗೌಡ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಮೈಸೂರು ಮಹಾನಗರ ಪಾಲಿಕೆಯನ್ನು ಬೃಹತ್ ಮೈಸೂರು ಮಾಡಲು ಮುಂದಾಗಿದೆ. ಮೈಸೂರು ಮಹಾನಗರ ಪಾಲಿಕೆಯಿಂದ ಎಲ್ಲಾ ಬಡಾವಣೆಗಳಿಗೆ ಶುದ್ಧ ಕುಡಿಯುವ ನೀರು, ಶಿಕ್ಷಣ, ಆರೋಗ್ಯ ಸೌಲಭ್ಯ ಒದಗಿಸಲು ಇದುವರೆಗೂ ಸಾಧ್ಯವಾಗಿಲ್ಲ. ಆದರೂ, ಬೃಹತ್ ಮೈಸೂರು ಮಾಡಲು ಮುಂದಾಗಿರುವುದು ಖಂಡನೀಯ. ಬೃಹತ್ ಮೈಸೂರು ರಚನೆಗೆ ಆಕ್ಷೇಪವಿದ್ದರೆ ಫೆ.8ರೊಳಗೆ ಸಲ್ಲಿಸುವಂತೆ ಸರ್ಕಾರ ಕಾಲಾವಕಾಶ ನೀಡಿದೆ. ಬೃಹತ್ ಮೈಸೂರು ಮಾಡುವ ಹುನ್ನಾರದ ಹಿಂದೆ ಭೂ ಮಾಫಿಯಾ ಕೈವಾಡವಿರುವ ಶಂಕೆಯಿದೆ. ಇದರಿಂದ ಜನರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ. ರಿಯಲ್ ಎಸ್ಟೇಟ್ ಮಾಫಿಯಾಗಳಿಗೆ, ನೂರಾರು ಎಕರೆ ಭೂಮಿ ಹೊಂದಿರುವ ರಾಜಕಾರಣಿಗಳಿಗೆ ನೆರವಾಗುತ್ತದೆ ಎಂದು ದೂರಿದರು.


ಪ್ರಸ್ತುತ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿ 87 ಚದರ ಕಿಲೋ ಮೀಟರ್ ಇದೆ. ಇದನ್ನು 341 ಚದರ ಕಿಮೀಗೆ ವಿಸ್ತರಿಸಿ ಬೃಹತ್ ಪಾಲಿಕೆ ರಚಿಸಲು ಯೋಜನೆ ಸಿದ್ಧಪಡಿಸಲಾಗಿದೆ. ಈ ಹಿಂದೆಯೇ 2030ರ ವೇಳೆಗೆ ಮೈಸೂರು ಹೇಗಿರಬೇಕೆಂಬ ಯೋಜನೆ ಇತ್ತು. ಅದನ್ನು ಬದಿಗಿರಿಸಿ ಈಗ ಬೃಹತ್ ಮೈಸೂರು ಪಾಲಿಕೆ ರಚನೆಗೆ ಮುಂದಾಗಿದ್ದಾರೆ. ಇವರೇನು ವ್ಯವಸ್ಥಿತ ಮೈಸೂರು ರಚನೆಗೆ ಕಾರಣರಾದ ನಾಲ್ವಡಿ ಅವರಿಗಿಂತ ಮೇಧಾವಿಗಳೇ ಎಂದು ಪ್ರಶ್ನಿಸಿದರು.

ಎಂಡಿಎಯಲ್ಲಿ ಭ್ರಷ್ಟರಿದ್ದಾರೆ: ಎಂಡಿಎನಲ್ಲಿ ಬಹಳಷ್ಟು ಮಂದಿ ಅಧಿಕಾರಿಗಳು ಹಲವಾರು ವರ್ಷಗಳಿಂದ ಅಲ್ಲಿಯೇ ತಳವೂರಿ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಇದೇ ವೇಳೆ ರಾಜ್ಯ ಸರ್ಕಾರ ಸರ್ಕಾರಿ ಶಾಲೆಗಳನ್ನು ಮುಚ್ಚಿ ಮ್ಯಾಗ್ನೆಟ್ ಹೆಸರಿನಲ್ಲಿ ಕೆಪಿಎಸ್ ಶಾಲೆ ತೆರೆಯಲು ಮುಂದಾಗಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್‌ಗೆ ಸುಮಾರು 2500 ಕೋಟಿ ಸಾಲಕ್ಕೆ ಕೈಚಾಚಿದೆ. ಮೈಸೂರು ಮಹಾ ನಗರ ಪಾಲಿಕೆಯಲ್ಲಿಯೂ ಹಣವಿಲ್ಲ. ಹೀಗಾಗಿ ಸುಮಾರು 5 ಸಾವಿರ ಕೋಟಿ ರೂ. ಬೇಡುವ ಬೃಹತ್ ಮಹಾನಗರ ಪಾಲಿಕೆ ರಚನೆ ಮಾಡಿದಲ್ಲಿ ನಿರ್ವಹಿಸಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಈಗಿನ ಪಾಲಿಕೆ ವ್ಯಾಪ್ತಿಯ ಕೆರೆ ಕಟ್ಟೆ ಸಂರಕ್ಷಣೆಯೇ ಆಗಿಲ್ಲ, ಕುಡಿಯಲು ಯೋಗ್ಯವಾದ, ಜೀವಪರ ನದಿ ಮೂಲಕ ನೀರು ನೀಡುತ್ತಿಲ್ಲ. ಹೀಗಿರುವಾಗ ಬೃಹತ್ ಮೈಸೂರು ಮಹಾನಗರ ಪಾಲಿಕೆ ರಚನೆ ಮೂಲಕ ಮೈಸೂರನ್ನು ರೋಗಗ್ರಸ್ಥ ಮಾಡಲು ಹೊರಟಿದ್ದಾರೆ. ನಮಗೆ ಸುಂದರವಾದ, ಜೀವಿಸಲು ಯೋಗ್ಯವಾದ ರೀತಿ ಮೈಸೂರು ಇರಬೇಕು. ಈ ನಿಟ್ಟಿನಲ್ಲಿ ಸರ್ಕಾರ ಗಮನ ಹರಿಸಿ ಬೃಹತ್ ಮೈಸೂರು ಮಹಾ ನಗರ ಪಾಲಿಕೆ ರಚನೆ ನಿರ್ಧಾರ ಕೈಬಿಡಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಜನಾಂದೋಲನ ಮಹಾಮೈತ್ರಿ ಪದಾಧಿಕಾರಿಗಳಾದ ಚಂದ್ರಶೇಖರ ಮೇಟಿ, ಅಭಿರುಚಿ ಗಣೇಶ್ ಇದ್ದರು.

ಸಹಾಯ ಧನ ಯೋಜನೆಯಡಿ ಕಾಶಿಯಾತ್ರೆ



ಮೈಸೂರು, ಫೆ.6(ಎಂಟಿವೈ)– ರಾಜ್ಯ ಸರ್ಕಾರ ಕಾಶಿ ಯಾತ್ರೆ ಕೈಗೊಳ್ಳುವವರಿಗಾಗಿ ಆರ್ಥಿಕ ನೆರವು ನೀಡುವ ಯೋಜನೆ ಜಾರಿಗೊಳಿಸಿದ್ದು, ಆ ಯೋಜನೆಯಡಿ ಆಸಕ್ತರನ್ನು ಕಾಶಿಯಾತ್ರೆಗೆ ಕರೆ ದೊಯ್ಯುವ ಪ್ರವಾಸ ಆಯೋಜಿಸಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಅಭಿವೃದ್ಧಿ ಪರಿಷತ್ ಖಜಾಂಚಿ ಬಿ.ಮಂಜುಳಾ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಅಭಿವೃದ್ಧಿ ಪರಿಷತ್ ಟ್ರಸ್ಟ್ ಈಗಾಗಲೇ 600ಕ್ಕೂ ಹೆಚ್ಚು ಮಂದಿಯನ್ನು ಕಾಶಿ ಯಾತ್ರೆಗೆ ಸುರಕ್ಷಿತವಾಗಿ ಕರೆದುಕೊಂಡು ಬಂದಿದೆ. ರಾಜ್ಯ ಸರ್ಕಾರ ಕಾಶಿಯಾತ್ರೆಗೆ ಹೋಗುವ ಒಬ್ಬರಿಗೆ 5 ಸಾವಿರ ರೂ. ಸಹಾಯಧನ ನೀಡಲಿದೆ. ಪ್ರವಾಸಕ್ಕೆ 5–6 ದಿನ ಬೇಕಾಗಲಿದ್ದು, 6 ಸಾವಿರ ರೂ. ಸಂಗ್ರಹಿಸಲಾಗುತ್ತದೆ. ಕಾಶಿಗೆ ಹೋದ ಬಳಿಕ ಸರ್ಕಾರ ನಿಗಧಿ ಪಡಿಸಿದ ಸ್ಥಳದಲ್ಲಿ ಜಿಪಿಎಸ್ ಫೋಟೊದೊಂದಿಗೆ ಆನ್‌ಲೈನ್‌ನಲ್ಲಿ ಅಗತ್ಯ ದಾಖಲೆ ಅಪ್ಲೋಡ್ ಮಾಡಿದರೆ, ಕೆಲವೇ ದಿನದಲ್ಲಿ ಸರ್ಕಾರದಿಂದ 5 ಸಾವಿರ ರೂ. ಸಹಾಯಧನವನ್ನು ನೇರವಾಗಿ ಯಾತ್ರಾರ್ಥಿಗಳ ಖಾತೆಗೆ ಜಮೆಯಾಗಲಿದೆ. ಈ ಯಾತ್ರೆಯಲ್ಲಿ ಪಾಲ್ಗೊಳ್ಳುವವರಿಗೆ ನಿತ್ಯ ಮೂರು ಲೀಟರ್ ನೀರು, ಬೆಳಗಿನ ಉಪಹಾರ, ಟೀ ಅಥವಾ ಕಾಫಿ, ಮಧ್ಯಾಹ್ನದ ಊಟ, ಸಂಜೆ ಸ್ನ್ಯಾಕ್ಸ್, ರಾತ್ರಿ ತಿಂಡಿ, ಊಟ, ಪ್ರೇಕ್ಷಣೀಯ ಸ್ಥಳ ಮತ್ತು ದೇವಾಲಯ ದರ್ಶನ, ಸಾಮಾನ್ಯ ಕೊಠಡಿ, ವಾಹನ ಪ್ರಯಾಣ, ಯಾತ್ರಿಕರಿಗೆ ಟೋಪಿ, ಕನ್ನಡ ಮಾತನಾಡುವ ಮಾರ್ಗದರ್ಶಿ, ಪ್ರಯಾಣ ವಿಮೆ ಸೌಲಭ್ಯವಿರಲಿದೆ. ಮಾಹಿತಿಗೆ ಮೊ.ಸಂ.9964683183, 8147823336 ಸಂಪರ್ಕಿಸುವಂತೆ ಕೋರಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಅಭಿವೃದ್ಧಿ ಪರಿಷತ್ ಪದಾಧಿಕಾರಿಗಳಾದ ಶ್ರೀನಿವಾಸ ಕುಮಾರ್, ಸಿಂಧುವಳ್ಳಿ ಶಿವಕುಮಾರ್, ರಾಜೇಶ್ ಇದ್ದರು.

ಹಿರಿಯ ಪತ್ರಕರ್ತ 'ಬ್ರದರ್' ಶ್ರೀನಿವಾಸನ್ ನಿಧನ

ಮೈಸೂರು, ಫೆ.6–ಮಾಧ್ಯಮ ವಲಯದಲ್ಲಿ ಬ್ರದರ್ ಎಂದೇ ಚಿರಪರಿಚಿತರಾಗಿದ್ದ ಹಿರಿಯ ಪತ್ರಕರ್ತ ಕೆ.ವಿ.ಶ್ರೀನಿವಾಸನ್(81) ಶುಕ್ರವಾರ ಸಂಜೆ ಹುಣಸೂರು ಸಮೀಪದ ಕಲ್ಲುಣಿಕೆ ಗ್ರಾಮದ ತಮ್ಮ ನಿವಾಸದಲ್ಲಿ ನಿಧನರಾದರು.



ಅವಿವಾಹಿತರಾಗಿದ್ದ ಅವರು ಕೆಲವು ದಿನಗಳಿಂದ ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದು, ನಗರದ ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ನಿನ್ನೆ ಆಸ್ಪತ್ರೆಯಿಂದ ಬಿಡುಗಡೆ ಹೊಂದಿ ಸ್ವಗ್ರಾಮಕ್ಕೆ ತೆರಳಿದ್ದರು.

ಎಂಎ ಪತ್ರಿಕೋದ್ಯಮ ಹಾಗೂ ಎಲ್‌ಎಲ್‌ಬಿ ಪದವಿ ಪಡೆದುಕೊಂಡಿದ್ದ ಅವರು, ಭಾರತೀಯ ಹಾಗೂ ಪಾಶ್ಚಾತ್ಯ ತತ್ವಶಾಸ್ತ್ರದ ಸರ್ಟಿಫಿಕೇಟ್ ಕೋರ್ಸ್ ಮಾಡಿದ್ದರು. ಗಾಂಧಿ ತತ್ವದಲ್ಲಿ ಅಪಾರ ಒಲವನ್ನು ಹೊಂದಿದ್ದ ಶ್ರೀನಿವಾಸನ್ ಗಾಂಧಿ ಅಧ್ಯಯನದಲ್ಲಿ ಡಿಪ್ಲೊಮಾ ಪದವಿ ಪಡೆದಿದ್ದರು. 'ಪತ್ರಿಕೋದ್ಯಮಿಯಾಗಿ ಗಾಂಧೀಜಿ' ಮತ್ತು 'ಸಹ ಬರಹಗಾರರ ಜಾಹೀರಾತು' ಕೃತಿಗಳನ್ನು ಬರೆದಿದ್ದಾರೆ.

ಗಾಂಧಿವಾದಿಯಾಗಿದ್ದ ಶ್ರೀನಿವಾಸನ್ ಅವರು ಪತ್ರಿಕೋದ್ಯಮದಲ್ಲಿ ತಮ್ಮ ಸರಳ ನಡೆ, ನುಡಿ ಪ್ರಾಮಾಣಿಕತೆ, ವೃತ್ತಿ ಬದ್ದತೆಗೆ ಹೆಸರಾಗಿದ್ದರು. ಆಕಾಶವಾಣಿ ವರದಿಗಾರರಾಗಿ 1986ರ ಅಕ್ಟೋಬರ್‌ನಿಂದ 2007ರ ಡಿಸೆಂಬರ್‌ವರೆಗೆ 20 ವರ್ಷಕ್ಕೂ ಅಧಿಕ ಕಾಲ ಸುದೀರ್ಘ ಸೇವೆ ಸಲ್ಲಿಸಿದ್ದರು. ಅದಕ್ಕೆ ಮೊದಲು ಮೈಸೂರಿನ ಹಲವಾರು ದಿನಪತ್ರಿಕೆಗಳಲ್ಲಿ ವರದಿಗಾರರಾಗಿ, ಉಪ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದರು. ಶ್ರೀನಿವಾಸನ್‌ರವರಿಗೆ ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಶಸ್ತಿ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ಹಿರಿಯ ಪತ್ರಕರ್ತ ಪ್ರಶಸ್ತಿ, ಎಂ. ವೆಂಕಟಕೃಷ್ಣಯ್ಯ (ತಾತಯ್ಯ) ಪ್ರಶಸ್ತಿ, 2010ರಲ್ಲಿ ಪಿರಿಯಾಪಟ್ಟಣದಲ್ಲಿ ನಡೆದ 10ನೇ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗಿತ್ತು. 2014ರಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪುರಸ್ಕೃತರಾಗಿದ್ದರು.

ಶನಿವಾರ ಬೆಳಿಗ್ಗೆ ಕಲ್ಲುಣಿಕೆ ಗ್ರಾಮದಲ್ಲಿನ ಅವರ ಫಾರ್ಮ್‌ಹೌಸ್‌ನಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಗುತ್ತಿದ್ದು, ಮಧ್ಯಾಹ್ನ 1 ಗಂಟೆಗೆ ಹುಣಸೂರಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗೆ ಚನ್ನಪಟ್ಟಣ ತಹಶೀಲ್ದಾರ್ ಪರಿಶ್ರಮ

ಟಿವಿಗಳ ಕೇಬಲ್ ಸಂಪರ್ಕ ಕಡಿತ; ಮೊಬೈಲ್ ಬಳಸದಂತೆ ವಿದ್ಯಾರ್ಥಿಗಳಿಗೆ ತಾಕೀತು

● ಪ್ರತಿದಿನ ಗ್ರಾಮಗಳಿಗೆ ಭೇಟಿ, ಪೋಷಕರ ಸಭೆ ● ವಾರಕ್ಕೊಮ್ಮೆ ವಿದ್ಯಾರ್ಥಿಗಳಿಗೆ ಟೆಸ್ಟ್ ● ಶಾಲೆಗಳಿಗೆ ಮೂಲ ಸೌಕರ್ಯ ಕಲ್ಪಿಸುವ ಕಾರ್ಯ ಪ್ರಗತಿ ● ನೈಸರ್ಗಿಕ ಕೃಷಿ ಬಗ್ಗೆ ಮಕ್ಕಳಲ್ಲಿ ಅರಿವು



ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳಿಗೆ ಟಿಪ್ಸ್ ನೀಡುತ್ತಿರುವ ಚನ್ನಪಟ್ಟಣ ತಹಶೀಲ್ದಾರ್ ಬಿ.ಎನ್.ಗಿರೀಶ್.

ಮೈಸೂರು, ಫೆ.6(ಬಿಎಲ್‌ಯು)– ತಹಶೀಲ್ದಾರ್‌ಗಳು ತಮ್ಮ ಕಂದಾಯ ಇಲಾಖಾ ವ್ಯಾಪ್ತಿಯ ಕೆಲಸದಲ್ಲಿ ಬ್ಯುಸಿಯಾಗಿರುತ್ತಾರೆ. ಅದು ಬಿಟ್ಟು ಬೇರೆ ಇಲಾಖೆ ಕಡೆ ಗಮನ ನೀಡುವುದು ತೀರಾ ಕಡಿಮೆ. ಆದರೆ ಚನ್ನಪಟ್ಟಣದ ತಹಶೀಲ್ದಾರ್ ಬಿ.ಎನ್. ಗಿರೀಶ್, ತಮ್ಮ ಇಲಾಖೆ ಮಾತ್ರ ವಲ್ಲದೆ ಶಿಕ್ಷಣ ಇಲಾಖೆಯಲ್ಲಿ ಮಹತ್ತರ ಸುಧಾರಣೆ ತರಲು, ಅದರಲ್ಲೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅಚ್ಚರಿ ಫಲಿತಾಂಶ ತರುವ ನಿಟ್ಟಿನಲ್ಲಿ ತಾವೇ ಖುದ್ದು ಫೀಲ್ಡ್‌ಗೆ ಇಳಿದಿದ್ದಾರೆ.

ಗಿರೀಶ್, ಮೈಸೂರಿನಲ್ಲಿ ಕೂಡ ತಹಶೀಲ್ದಾರ್ ಆಗಿ ಕೆಲಸ ನಿರ್ವಹಿಸಿದ್ದವರು. ಈಗ ಚನ್ನಪಟ್ಟಣದ ತಹಶೀಲ್ದಾರ್ ಆಗಿದ್ದಾರೆ. ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶತಾಯ ಗತಾಯ ಶೇಕಡ 100 ರಷ್ಟು ಫಲಿತಾಂಶ ತರಬೇಕೆಂದು ಟೊಂಕ ಕಟ್ಟಿ ನಿಂತಿದ್ದಾರೆ.

ಉತ್ತರ ಕರ್ನಾಟಕದ ಹಲವು ತಾಲೂಕುಗಳಂತೆ ಚನ್ನಪಟ್ಟಣ ಹಿಂದುಳಿದಿಲ್ಲ. ರಾಜಧಾನಿ ಬೆಂಗಳೂರಿಗೆ ಅಂಚಲ್ಲೇ ಇರುವ ಈ ತಾಲೂಕು, ಹೆಚ್ಚು ಅಭಿವೃದ್ಧಿಯಾಗಿದೆ. ಇಲ್ಲಿ ಹಲವು ಕೈಗಾರಿಕೆಗಳಿದ್ದು, ತಾಲೂಕು ಕೇಂದ್ರ ಬೆಳವಣಿಗೆ ಸಾಧಿಸಿದೆ.

ಆದರೆ ಎಸ್‌ಎಸ್‌ಎಲ್‌ಸಿ ಫಲಿತಾಂಶ ಮಾತ್ರ ಶೇಕಡ 60ಕ್ಕಿಂತ ಹೆಚ್ಚು ದಾಟುತ್ತಿಲ್ಲ. ಖಾಸಗಿ ಕಾನ್ವೆಂಟ್‌ಗಳು, ಸಮರ್ಪಕ ಮೂಲ ಸೌಕರ್ಯವಿರುವ ಸರ್ಕಾರಿ ಶಾಲೆಗಳಿದ್ದರೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ನಿರೀಕ್ಷಿತ ಸಾಧನೆ ಸಾಧ್ಯವಾಗುತ್ತಿಲ್ಲ. ಎಲ್ಲಾ ಸೌಲಭ್ಯಗಳಿದ್ದರೂ ಸಾವಿರಾರು ಮಕ್ಕಳು ಜಸ್ಟ್ ಪಾಸ್ ಕೂಡ ಆಗುತ್ತಿಲ್ಲ.

ಹಾಗಾಗಿ ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ತರಲು ತಹಶೀಲ್ದಾರ್ ಗಿರೀಶ್ ಶಪಥ ಮಾಡಿದ್ದಾರೆ. ತಮ್ಮ ಕರ್ತವ್ಯದ ಸಮಯ ಮುಗಿದ ನಂತರ ಪ್ರತಿ ದಿನ ಒಂದೊಂದು ಗ್ರಾಮಕ್ಕೆ ಭೇಟಿ ನೀಡಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಹಾಗೂ ಪೋಷಕರ ಸಭೆ ನಡೆಸುತ್ತಿದ್ದಾರೆ.

ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಟಿವಿ ನೋಡುತ್ತಾ ಅಮೂಲ್ಯ ಸಮಯ ಹಾಳು ಮಾಡಬಾರದು, ಮೊಬೈಲ್‌ನಲ್ಲಿ ತಲೀನರಾಗಿ ಕಾಲಹರಣ ಮಾಡಿಕೊಳ್ಳಬಾರದು ಎಂದು ಟಿಪ್ಸ್ ನೀಡುತ್ತಿದ್ದಾರೆ.

ಪೂರ್ವ ತಯಾರಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಹಾಗೂ ಜಸ್ಟ್ ಪಾಸ್ ಆದ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಪ್ರತ್ಯೇಕ ಸ್ಪೆಷಲ್ ಕ್ಲಾಸ್‌ಗಳನ್ನು ನಡೆಸುತ್ತಿದ್ದಾರೆ. ಅನುಭವಸ್ಥ ಶಿಕ್ಷಕರು ಮಕ್ಕಳಿಗೆ ಅರ್ಥವಾಗುವಂತೆ ಪಾಠ ಮಾಡುತ್ತಿದ್ದಾರೆ. ಪೋಷಕರಿಗೆ ಎಂತಹ ಕೆಲಸದ ಒತ್ತಡವಿದ್ದರೂ ಮಕ್ಕಳ ಓದಿನ ಬಗ್ಗೆ ಮುತುವರ್ಜಿ ವಹಿಸಬೇಕು ಎಂದು ಗಿರೀಶ್ ಸಲಹೆ ನೀಡುತ್ತಿದ್ದಾರೆ.

ಲ್ಯಾಂಡ್ ರೇಟ್ ದುಬಾರಿ, ಎಜುಕೇಷನ್ ರೇಟ್ ಅಷ್ಟಕ್ಕಷ್ಟೆ !

ರಾಜಧಾನಿ ಬೆಂಗಳೂರಿಗೆ ಸನಿಹದಲ್ಲಿರುವ ಚನ್ನಪಟ್ಟಣದಲ್ಲಿ ಲ್ಯಾಂಡ್ ರೇಟ್ ದುಬಾರಿ, ಆದರೆ ಎಜುಕೇಷನ್ ರೇಟ್ ಮಾತ್ರ ಕಳಪೆಯಾಗಿದೆ

ನಾನು ಮೈಸೂರಿನಲ್ಲಿ ಕೂಡ ತಹಶೀಲ್ದಾರ್ ಆಗಿ ಕೆಲಸ ನಿರ್ವಹಿಸಿದ್ದೇನೆ. ಈಗ ಚನ್ನಪಟ್ಟಣದಲ್ಲಿ ಕಳೆದ 7 ತಿಂಗಳಿನಿಂದ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಕಳೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇಕಡ 60ಕ್ಕಿಂತ ಕಡಿಮೆ ಫಲಿತಾಂಶ ಬಂದಿತ್ತು. ಇದು ನನ್ನ ಗಮನ ಸೆಳೆಯಿತು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಪ್ರತಿಯೊಬ್ಬ ವಿದ್ಯಾರ್ಥಿಗೆ ಟರ್ನಿಂಗ್ ಪಾಯಿಂಟ್ ಆಗಿರುತ್ತದೆ. ಇಲ್ಲಿ ತೇರ್ಗಡೆಯಾದರೆ ಉಳಿದಂತೆ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿಯಲ್ಲಿ ಪಾಸ್ ಆಗುವುದು ಸುಲಭಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮಕ್ಕಳು ಉತ್ತಮ ಅಂಕ ಗಳಿಸಲು ಯೋಜನೆ ರೂಪಿಸಿದೆ.

ಈ ಸಂಬಂಧ ಶಾಲೆಗಳ ಮುಖ್ಯೋಪಾಧ್ಯಾಯರ ಸಭೆ ನಡೆಸಿದಾಗ, ಶಾಲೆಗಳಿಗೆ ಮೂಲ ಸೌಕರ್ಯ ಇಲ್ಲದಿರುವುದು ಸೇರಿದಂತೆ ಹಲವು ಸಮಸ್ಯೆ ಅವಲತ್ತುಕೊಂಡರು.

ಈ ಸಂಬಂಧ ಮೊದಲು ಶಾಲೆಗಳ ಸ್ಥಿತಿಗತಿ ಸುಧಾರಣೆ ಮಾಡಬೇಕೆಂದು ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಗ್ರಾಮ ಪಂಚಾಯಿತಿಗಳು ಪಿಡಿಒಗಳ ಸಭೆ ಕರೆದೆ. 15ನೇ ಹಣಕಾಸು ಆಯೋಗದಿಂದ ಬಂದಿರುವ ಅನುದಾನವನ್ನು ಶೌಚಾಲಯ ನಿರ್ಮಾಣ ಸೇರಿದಂತೆ ಶಾಲೆಗಳಲ್ಲಿ ಮೂಲ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಂಡೆ.

ಅಲ್ಲದೆ ಗ್ರಾಮದ ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ದಾನಿಗಳಿಂದ ಶಾಲೆಗಳಿಗೆ ಸುಣ್ಣ ಬಣ್ಣ ಹೊಡೆಸುತ್ತಿದ್ದೇನೆ. ಚನ್ನಪಟ್ಟಣದ ಓಲ್ಡ್ ಡೇರಾ ಶಾಲೆಯಲ್ಲಿ ಈ ಕಾರ್ಯ ಮುಂದುವರೆಯುತ್ತಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ನೀಡಿ ಟಿವಿ ಕೇಬಲ್ ಸಂಪರ್ಕ ಕಡಿತಗೊಳಿಸಿದ್ದೇನೆ. ಮೊಬೈಲ್ ಬಳಸದಂತೆ ತಾಕೀತು ಮಾಡಿದ್ದೇನೆ. ಪ್ರತಿ ವಾರ ವಿದ್ಯಾರ್ಥಿಗಳು ಟೆಸ್ಟ್ ಬರೆಯುವ ವ್ಯವಸ್ಥೆ ಮಾಡಿದ್ದೇನೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದು ಬದುಕಿನಲ್ಲಿ ಎಷ್ಟು ಮುಖ್ಯವೆಂದು ಮನವರಿಕೆ ಮಾಡಿದ್ದೇವೆ.

ಇಷ್ಟೆಲ್ಲಾ ಸುಧಾರಣೆ ತಂದರೂ ಅನುತೀರ್ಣರಾದವರು ಕೃಷಿ ಕ್ಷೇತ್ರದಲ್ಲಿ ಯಶಸ್ವಿಯಾಗಲೆಂದು ಶಾಲೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ನೈಸರ್ಗಿಕ ಕೃಷಿ ಬಗ್ಗೆ ಅರಿವು ಮೂಡಿಸುತ್ತಿದ್ದೇವೆ. ನೈಸರ್ಗಿಕ ಕೃಷಿ ಪದ್ಧತಿಯಲ್ಲಿ ಶಾಲೆಯಲ್ಲಿ ಬೆಳೆದ ತರಕಾರಿಯನ್ನು ಮಧ್ಯಾಹ್ನದ ಬಿಸಿಯೂಟಕ್ಕೆ ಬಳಸಿಕೊಳ್ಳುವಂತೆ ಸೂಚಿಸಿದ್ದೇನೆ.

ಒಟ್ಟಾರೆ ಈ ಬಾರಿಯ ಎಸ್‌ಎಸ್‌ಎಲ್ ಸಿ ಪರೀಕ್ಷೆಯಲ್ಲಿ ಶೇಕಡ 100 ರಷ್ಟು ಫಲಿತಾಂಶ ತರುವ ನಿಟ್ಟಿನಲ್ಲಿ ಹಲವು ಸುಧಾರಣೆ ತರುತ್ತಿದ್ದೇನೆ.

– ಬಿ.ಎನ್.ಗಿರೀಶ್, ತಹಶೀಲ್ದಾರ್, ಚನ್ನಪಟ್ಟಣ

ಮಂಚೇಗೌಡನಕೊಪ್ಪಲಿನಲ್ಲಿ ಜಾತ್ರಾ ಮಹೋತ್ಸವ

ಮೈಸೂರು: ಮೈಸೂರಿನ ಮಂಚೇಗೌಡನಕೊಪ್ಪಲಿನಲ್ಲಿರುವ ಶ್ರೀ ಘನ ನೀಲಿ ಸಿದ್ದಪ್ಪಾಜಿ ಸ್ವಾಮಿ ದೇವಸ್ಥಾನದ 5ನೇ ವರ್ಷದ ಜಾತ್ರಾ ಮಹೋತ್ಸವವು ಫೆ.8 ರಿಂದ 10 ರವರೆಗೆ ನಡೆಯಲಿದೆ. ಫೆ.8ರಂದು ಗಣಪತಿ ಹೋಮ, ಫೆ.9 ರಂದು ಬೆಳ್ಳಿ ಕಂಡಾಯ ಹಾಗೂ ಬಸವಣ್ಣನ ಮೆರವಣಿಗೆ, ಪ್ರಸಾದ ವಿನಿಯೋಗ, ರಾತ್ರಿ 9 ಗಂಟೆಗೆ ಶಿವಕುಮಾರ ಶಾಸ್ತ್ರಿ ತಂಡದಿಂದ ಸಿದ್ದಪ್ಪಾಜಿ ಹರಿಕಥೆ, ಫೆ.10 ರಂದು ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ದೇವಸ್ಥಾನದ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಸುಯೋಗ್ ಆಸ್ಪತ್ರೆಯಲ್ಲಿ ಪುಸ್ತಕದ ಮನೆ ಅಂಕೇಗೌಡರಿಗೆ ಸನ್ಮಾನ



ಸುಯೋಗ್ ಆಸ್ಪತ್ರೆಯಲ್ಲಿ ಪದ್ಮಶ್ರೀ ಪುರಸ್ಕೃತ ಅಂಕೇಗೌಡರನ್ನು ಸನ್ಮಾನಿಸಲಾಯಿತು.

ಮೈಸೂರು, ಫೆ.6– ಸಮಾಜಕ್ಕೆ ಅನುಕೂಲವಾಗಲೆಂದು ತಾವು ಪುಸ್ತಕದ ಮನೆಯನ್ನು ಸ್ಥಾಪಿಸಿದ್ದು, ಈಗಾಗಲೇ ಸುಮಾರು 30 ಲಕ್ಷ ಪುಸ್ತಕಗಳನ್ನು ಸಂಗ್ರಹಿಸಿದ್ದೇನೆ. ಸಂಶೋಧಕರು ಹಾಗೂ ಪುಸ್ತಕ ಪ್ರೇಮಿಗಳಿಗೆ ಅತ್ಯುಪಯುಕ್ತವಾಗಿದ್ದು, ಇದರ ಪ್ರಯೋಜನವನ್ನು ಪ್ರತಿಯೊಬ್ಬರು ಪಡೆದುಕೊಳ್ಳಬೇಕೆಂದು ಪದ್ಮಶ್ರೀ ಪುರಸ್ಕೃತ ಅಂಕೇಗೌಡರು ಮನವಿ ಮಾಡಿದರು.

ಅವರು ಸುಯೋಗ್ ಆಸ್ಪತ್ರೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಆಯೋಜಿಸಿದ್ದ ಮನೆಗೊಂದು ಗ್ರಂಥಾಲಯ ಅನುಷ್ಠಾನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ತಮ್ಮ ವೇತನದ ಮುಕ್ಕಾಲು ಭಾಗವನ್ನು ಪುಸ್ತಕ ಖರೀದಿಗೆ ಮೀಸಲಿಟ್ಟಿದ್ದು, ಇದರಲ್ಲಿ ತಮ್ಮ ಯಾವುದೇ ಸ್ವಾರ್ಥವಿಲ್ಲ. ವಿದ್ಯಾರ್ಥಿ ದೆಸೆಯಿಂದಲೇ ಗ್ರಂಥಾಲಯ ಮಾಡಬೇಕೆಂಬ ಮಹದಾಸೆಯಿದ್ದು, ಅದರ ಸಾಕಾರ ರೂಪವೇ ತಾವು ಪಾಂಡವಪುರದಲ್ಲಿ ನಿರ್ಮಿಸಿರುವ ಅಂಕೇಗೌಡರ ಪುಸ್ತಕದ ಮನೆಯಾಗಿದೆ. ತಾವು ಸಣ್ಣವರಿದ್ದಾಗ ಪುಸ್ತಕ ಖರೀದಿಸಿ ಓದುವುದೇ ಕಷ್ಟಕರವಾಗಿದ್ದು, ಮುಂದಿನ ಪೀಳಿಗೆಗೆ ಈ ಸಮಸ್ಯೆ ಬರಬಾರದೆಂಬ ಉದ್ದೇಶದಿಂದ ತಾವು ಈ ಪ್ರಯತ್ನಕ್ಕೆ ಮುಂದಾಗಿದ್ದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಸುಯೋಗ್ ಆಸ್ಪತ್ರೆ ಅಧ್ಯಕ್ಷರಾದ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ಸಮಾಜಕ್ಕೆ ಅತ್ಯಮೂಲ್ಯ ಕೊಡುಗೆ ನೀಡಿರುವ ಅಂಕೇಗೌಡರು, ಸಮಾಜದ ಬಹು ದೊಡ್ಡ ಆಸ್ತಿಯಾಗಿದ್ದಾರೆ ಎಂದು ಬಣ್ಣಿಸಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಗ್ರಂಥಾಲಯ ಉದ್ಘಾಟಿಸಿದರು. ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಿತಿ ಸಂಚಾಲಕ ಎಂ.ಚಂದ್ರಶೇಖರ್ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ ಮೈಸೂರು ಕೃಷ್ಣಮೂರ್ತಿ ಪುಸ್ತಕ ಸಂಸ್ಕೃತಿ ಕುರಿತು ಉಪನ್ಯಾಸ ನೀಡಿದರು.

ಇದೇ ಸಂದರ್ಭ ಸುಯೋಗ್ ಆಸ್ಪತ್ರೆಯಲ್ಲಿ ಗ್ರಂಥಾಲಯ ಸ್ಥಾಪಿಸಿ ಜ್ಞಾನ ಸಂವರ್ಧನೆಗೆ ಮುಂದಾಗಿರುವ ಡಾ. ಎಸ್.ಪಿ.ಯೋಗಣ್ಣ ಹಾಗೂ ಶ್ರೀಮತಿ ಸುಧಾ ಯೋಗಣ್ಣ ದಂಪತಿಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಪ್ರಮಾಣಪತ್ರ ನೀಡಿ, ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಾಹಿತಿ ದೇವರಾಜು ಪಿ.ಚಿಕ್ಕಹಳ್ಳಿ ಆಶಯ ನುಡಿಗಳನ್ನಾಡಿದರು. ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ ವಂದಿಸಿದರು.

ಫೆ.9ರಿಂದ ಉಚಿತ ದಂತ ತಪಾಸಣಾ ಶಿಬಿರ

ಮೈಸೂರು, ಫೆ.06– ಮೈಸೂರಿನ ಬನ್ನಿಮಂಟಪದಲ್ಲಿರುವ ಜೆಎಸ್‌ಎಸ್ ದಂತ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ ಫೆ.9 ರಿಂದ 17 ರವರೆಗೆ ಉಚಿತ ದಂತ ತಪಾಸಣೆ ಮತ್ತು ದಂತ ಸ್ವಚ್ಛತಾ ಶಿಬಿರವನ್ನು ಆಯೋಜಿಸಲಾಗಿದೆ.

ಜೆಎಸ್‌ಎಸ್ ದಂತ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವಿಭಾಗ ಸಂಖ್ಯೆ 9ರ ಪಿರಿಯೊಡೊಂಟಾಲಜಿ (ಒಸಡು ಶಾಸ್ತ್ರ) ವಿಭಾಗದಲ್ಲಿ ಶಿಬಿರವು ನಡೆಯಲಿದೆ. ಹೆಚ್ಚಿನ ಮಾಹಿತಿಗೆ ದೂ.ಸಂಖ್ಯೆ 0821–2548349 ಮೂಲಕ ಸಂಪರ್ಕಿಸಬಹುದು ಎಂದು ಪಿರಿಯೊಡೊಂಟಾಲಜಿ ವಿಭಾಗದ ಡಾ.ಸುಮನ್ ಬಸವರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.2.2026 ಶನಿವಾರ, ಮಳೆ ನಕ್ಷತ್ರ: ಧನಿಷ್ಠ 6.02.2026 ರಿಂದ 18.02.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೈಗ್ರೇನ್ ಹಾಗೂ ಕಣ್ಣು–ಮೂಗಿನ ಅಲರ್ಜಿ ಚಿಕಿತ್ಸಾ ಶಿಬಿರ, ಪಾರ್ಕಿನ್‌ಸನ್ಸ್ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ, ಬೆಳಗ್ಗೆ 9.30 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಮಕ್ಕಳಲ್ಲಿ ಕಂಡುಬರುವ ಸೆರೆಬ್ರಲ್ ಪಾಲ್ಸಿ ಹಾಗೂ ಕುಂಠಿತ ಬೆಳವಣಿಗೆ ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ಗಂಟೆಯಿಂದ.

■ **ಸುಯೋಗ್ ಆಸ್ಪತ್ರೆ :** ಉಚಿತ ಹೃದ್ರೋಗ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣ ನಗರ, ಬೆಳಗ್ಗೆ 10 ರಿಂದ.

■ **ಮೈಸೂರು ವಿವಿ ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ :** ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮ, ಅಧ್ಯಕ್ಷತೆ : ಮೈಸೂರು ವಿವಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ. ಎಸ್.ಆರ್. ನಿರಂಜನ, ಉಪಸ್ಥಿತರು : ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಬಿ. ಸಣ್ಣಪ್ಪ ಪ್ರೊ. ಎಂ.ಎನ್. ಅನಿಲ್ ಕುಮಾರ್, ಸ್ಥಳ: ವಿಚಾರ ಸಂಕಿರಣ ಕೊಠಡಿ, ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಬೆಳಗ್ಗೆ 10ಕ್ಕೆ.

■ **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ಸಾಂಸ್ಕೃತಿಕ ಸಮಿತಿ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಪ್ರೊ. ಕೆ.ಬಿ. ಪ್ರವೀಣ್, ಮುಖ್ಯ ಅತಿಥಿಗಳು : ಕಲಾವಿದ ಡಾ. ಅಮ್ಮ ರಾಮಚಂದ್ರ, ಅಧ್ಯಕ್ಷತೆ : ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಪ್ರಿನ್ಸಿಪಾಲ್ ಡಾ. ಮಹೇಶ ದಳಪತಿ, ಸ್ಥಳ: ಶ್ರೀ ನಟರಾಜ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಓಟಿಕೇರ್ ಆಸ್ಪತ್ರೆ :** ಉಚಿತ ಕಿವಿ ಪರೀಕ್ಷೆ, ಸ್ಥಳ: ಓಟಿಕೇರ್ ಆಸ್ಪತ್ರೆ, ಅಗ್ರಹಾರ, ಬೆಳಗ್ಗೆ 11 ರಿಂದ.

■ **ಜೆಎಸ್‌ಎಸ್ ಮಹಿಳಾ ಕಾಲೇಜು :** ಸ್ಟೇಟ್ ಲೆವೆಲ್ ಮ್ಯಾನ್.ಕಾಮ್ ಫೆಸ್ಟ್ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಮೈಸೂರು ವಿವಿ ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್. ರೇಖಾ, ಮುಖ್ಯ ಅತಿಥಿಗಳು : ಬ್ಯಾಂಕ್ ಆಫ್ ಬರೋಡಾ ಡೆಪ್ಯೂಟಿ ರೀಜನಲ್ ಹೆಡ್ ವಿದ್ಯಾಸಾಗರ್ ಮರಾಲ, ಮೇರಾ ಇವೆಂಟ್ಸ್ ಸಂಸ್ಥಾಪಕರಾದ ಶ್ರೀಮತಿ ಮೇಘನಾ ರವಿಕುಮಾರ್, ಕಾಲೇಜು ಪ್ರಿನ್ಸಿಪಾಲ್ ಡಾ. ರೇಚಣ್ಣ, ಸ್ಥಳ: ಜೆಎಸ್‌ಎಸ್ ಮಹಿಳಾ ಕಾಲೇಜು, ಸಂಜೆ 4ಕ್ಕೆ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 918, ಕಥೆ ಹೇಳುವವರು: ಶ್ರೀಮತಿ ಸುನೀತ ಬೆಟ್ಕೆರೂರ್, ನಿವೃತ್ತ ಶಿಕ್ಷಕರು ಹಾಗೂ ಸಂದರ್ಶಕ ಶಿಕ್ಷಕರು, ವನಿತಾ ಸದನ, ಮೈಸೂರು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ 5.30 ರವರೆಗೆ

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಮಧ್ವ–ಪುರಂದರ ನಮನ, 'ಪದ್ಮಪುರಾಣ ಮತ್ತು ಅಗ್ನಿಪುರಾಣ' ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾ ಧ್ವನಿ– ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ. ಕೂಡ್ಲಿ ಗುರುರಾಜ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರೀ ಹಾಗೂ ಶಾಂತಲಾ ವಟ್ಟಂ, ವ್ಯಾಖ್ಯಾನ–ಡಾ. ಜಿ. ಆರ್. ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಯುವವಾಣಿ – ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ. ಯು. ಸಿ. ಪರೀಕ್ಷಾ ಸಿದ್ಧತಾ ಸರಣಿ ಕಾರ್ಯಕ್ರಮ ವಿಷಯ–ರಾಜ್ಯಶಾಸ್ತ್ರ (Political Sceince), ಭಾಗವಹಿಸುವವರು–ಮೈಸೂರಿನ ವಾಣಿ ವಿಲಾಸ ಅರಸು ಬಾಲಕಿಯರ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಹೇಮಲತಾ ಟಿ.ಕೆ., ಪ್ರಸ್ತುತಿ–ದಿಗ್ವಿಜಯ್ .ಬಿ, 9.15 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ. ಎಸ್. ಶೀಲಾ–ಹಾಡುಗಾರಿಕೆ, ಸ್ವಾತಿ ತಿರುನಾಳ್ ರವರ ರಚನೆಗಳು, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ–ವೈಶಾಲಿಯ ನಗರವಧು, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ:ಕಿಸಾನ್ ವಾಣಿ ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ –ಮಳವಳ್ಳಿ ತಾಲ್ಲೂಕು, ಕಸಬಾ ಹೋಬಳಿ, ರಾವಣಿ ಗ್ರಾಮದ ಕೃಷಿಕ ದಂಪತಿ ಮಹದೇವು ಮತ್ತು ರತ್ನಮ್ಮ, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

■ **ಗಾನ ಚಂದನ ಕಲಾ ಬಳಗ :** ಡಾ. ವಿಷ್ಣುವರ್ಧನ್‌ರವರ 75ನೇ ಹುಟ್ಟುಹಬ್ಬದ ಅಂಗವಾಗಿ ವಿಷ್ಣು ಗಾನ ಅಮೃತಪಾನ ಮಧುರ ಗೀತೆಗಳ ಕಾರ್ಯಕ್ರಮ, ಸ್ಥಳ: ನಾದ ಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ರಂಗಾಂತರಂಗ ಮೈಸೂರು :** ಸಂಜೆ 5.30ಕ್ಕೆ ರಂಗಾಂತರಂಗ ಮಕ್ಕಳ ನಾಟಕೋತ್ಸವ, ಉದ್ಘಾಟನೆ : ಹಿರಿಯ ಕಲಾವಿದ ಮೈಮ್ ರಮೇಶ್, ಅಧ್ಯಕ್ಷತೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರಾಸ್ತಾವಿಕ ನುಡಿ : ಲೇಖಕ ನಾ. ದಿವಾಕರ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಪತ್ರಕರ್ತ ಎಂ.ಆರ್. ಸತ್ಯನಾರಾಯಣ, ಮಹಾರಾಣಿ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ.ಎಸ್. ಅನಿತಾ, ಶ್ರೀ ಕಾವೇರಿ ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಡಾ.ಸಿ.ಇ. ಸುಬ್ರಮಣ್ಯ, ರಂಗಾಂತರಂಗ ಸಂಸ್ಥಾಪಕ ಕೆ.ಎಂ. ಕೀರ್ತಿರಾಜ್, ಸಂಜೆ 6ಕ್ಕೆ ಹುಲಿ ಬೇಟೆಯ ಹಿಂದೆ... ಮುಂದೆ... ನಾಟಕ ಪ್ರದರ್ಶನ, ರಚನೆ : ಮೂರ್ತಿದೇರಾಜ್, ನಿರ್ದೇಶನ : ಎಸ್. ಶ್ರೀಕಾಂತ್, ಸ್ಥಳ: ಕಿರು ರಂಗ ಮಂದಿರ.

■ **ಆಯಾಮ ಅಕಾಡೆಮಿ :** ಆಯಾಮೋತ್ಸವ–2026, ಸಂಗೀತ–ನೃತ್ಯ–ನಾಟಕಗಳ ಉತ್ಸವ, ಸಂಜೆ 5.30 ರಿಂದ ಆಯಾಮ ಅಕಾಡೆಮಿ ವಿದ್ಯಾರ್ಥಿಗಳಿಂದ ನಿನಾದ ಸಮೂಹ ಗಾಯನ, ಉಪಸ್ಥಿತರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ಎಚ್. ರಾಜೇಶ್, ಆಯಾಮ ಅಕಾಡೆಮಿ ನಿರ್ದೇಶಕರಾದ ಡಾ. ಎಸ್.ವಿ. ಶಾಂಭವಿಸ್ವಾಮಿ, ಸಂಜೆ 7.30 ರಿಂದ ದೇಸೀ ವೈಭವ, ಜನಪದ ನೃತ್ಯ ಸಂಗಮ, ನಿರ್ದೇಶನ : ಡಾ. ಶಾಂಭವಿಸ್ವಾಮಿ ಎಸ್.ವಿ., ಸ್ಥಳ: ಕಲಾಮಂದಿರ.

■ **ಅದಮ್ಯ ರಂಗಶಾಲೆ :** ಕಣ್ಕಟ್ ನಗರ ನಾಟಕ ಪ್ರದರ್ಶನ, ಚಾಲನೆ : ನಿವೃತ್ತ ಪೊಲೀಸ್ ಉಪಾಧೀಕ್ಷಕ ಶಾಂತಮಲ್ಲಪ್ಪ, ಅಧ್ಯಕ್ಷತೆ : ಪಾಲಿಕೆ ಮಾಜಿ ಸದಸ್ಯ ಪಿ. ಪ್ರಶಾಂತ್‌ಗೌಡ, ಆಶಯ ನುಡಿ : ಸಾಹಿತಿ ಟಿ. ಸತೀಶ್ ಜವರೇಗೌಡ, ವಿ.ಕೆ. ಪಬ್ಲಿಕ್ ಸ್ಕೂಲ್ ಕಾರ್ಯದರ್ಶಿ ರವಿಕುಮಾರ್ ಬೆಕ್ಯಾ, ಸ್ಥಳ: ಶ್ರೀರಂಗ ಸಭಾಂಗಣ, ರಂಗಾಯಣ ಆವರಣ, ಸಂಜೆ 6ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಫೆಬ್ರವರಿ 7 ಶನಿವಾರ 2026
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
46
ಸಂಪುಟ: 46 | ಸಂಚಿಕೆ: 289 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4


3ನೇ ಡೇಟ್ ಮಿಸ್ ಆಗಲ್ಲ; ಡಿಕೆಶಿ ಸಿಎಂ ಆಗೇ ಆಗ್ತಾರೆ...

ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಅತೀವ ವಿಶ್ವಾಸ

ಮೈಸೂರು, ಫೆ.6– ಐದು ವರ್ಷ ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿರಲು ಹೈಕಮಾಂಡ್ ಗ್ರೀನ್ ಸಿಗ್ನಲ್ ನೀಡಿದೆ ಎಂದಿರುವ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ವಿರುದ್ಧ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಬಲಿಗರು ತಿರುಗಿಬಿದ್ದಿದ್ದಾರೆ.

ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಇದಕ್ಕೆಲ್ಲಾ ನಾವು ಸರಿಯಾದ ಉತ್ತರವನ್ನೇ ಕೊಡುತ್ತೇವೆ. ಡಿ.ಕೆ.ಶಿವಕುಮಾರ್ ಸಿಎಂ ಆಗಬೇಕು. ಆಗಿಯೇ ಆಗುತ್ತಾರೆ. ಇದೇ ಅವಧಿಯಲ್ಲಿ ಅವರು ಸಿಎಂ ಆಗುತ್ತಾರೆ. ನಾನು ಜ.6 ಮತ್ತು ಜ.9 ಎಂದು ಎರಡು ಡೇಟ್ ಕೊಟ್ಟಿದ್ದೆ. ಈ ಎರಡು ಡೇಟ್ ಫೇಲ್ ಆಗಿವೆ. 3ನೇ ಡೇಟ್ ನಾವೇ ಶೀಘ್ರದಲ್ಲಿ ಕೊಡುತ್ತೇವೆ. ಅದು ಫೇಲ್ ಆಗಲು ಸಾಧ್ಯವೇ ಇಲ್ಲ ಎಂದು ಕಡ್ಡಿ ಮುರಿದಂತೆ ಹೇಳಿದ್ದಾರೆ.

ನಾವೆಲ್ಲರೂ ಡಿ.ಕೆ.ಶಿವಕುಮಾರ್ ಅವರ ಬೆಂಬಲಕ್ಕೆ ನಿಂತಿದ್ದೇವೆ. 80ರಿಂದ 90 ಶಾಸಕರು ಅವರು ಸಿಎಂ ಆಗುವ ಒಲವು ತೋರಿದ್ದಾರೆ. ಡಿಕೆಶಿ ಅವರನ್ನು ನಾವು ಮುಖ್ಯಮಂತ್ರಿಯಾಗಿ ನೋಡಬೇಕು. ಮುಖ್ಯಮಂತ್ರಿಯಾಗಿ ಅವರು ಒಳ್ಳೆಯ ಆಡಳಿತ ನೀಡುತ್ತಾರೆ ಎನ್ನುವ ನಿರೀಕ್ಷೆಯಲ್ಲಿದ್ದೇವೆ. ಅತೀ ಶೀಘ್ರದಲ್ಲಿ ಡಿ.ಕೆ.ಶಿವಕುಮಾರ್ ಅವರು ಸಿಎಂ ಆಗುತ್ತಾರೆ ಎಂದು ಹೇಳಬಲ್ಲೆ ಎಂದಿದ್ದಾರೆ.



ಇಕ್ಬಾಲ್ ಹುಸೇನ್

ಮಗನಿಗೆ ಶಿಸ್ತಿನ ಪಾಠ ಮಾಡಲಿ: ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ರಾಜು ಪತ್ರಿಕಾ ಹೇಳಿಕೆ ಮೂಲಕ ಯತೀಂದ್ರಗೆ ಟಾಂಗ್ ನೀಡಿದ್ದು, ಯತೀಂದ್ರ ಮಾತನಾಡುತ್ತಿರುವುದನ್ನು ನೋಡಿದರೆ ಅವರೇ ಸೂಪರ್ ಹೈ ಕಮಾಂಡ್ ಆಗಿದ್ದಾರೆ ಅನ್ನಿಸುತ್ತಿದೆ. ಯತೀಂದ್ರ ಈಗಾಗಲೇ 2–3 ಬಾರಿ ಈ ರೀತಿಯ ಹೇಳಿಕೆ ಕೊಟ್ಟಿದ್ದಾರೆ. ಆದರೆ ಹೈ ಕಮಾಂಡ್ ಆಗಲೀ, ಮುಖ್ಯಮಂತ್ರಿ ಸಿದ್ದರಾಮಯ್ಯನವರಾಗಲೀ ಅವರ ಬಾಯಿ ಮುಚ್ಚಿಸುವ ಕೆಲಸ ಮಾಡುತ್ತಿಲ್ಲ. ಶಿಸ್ತು ಉಲ್ಲಂಘನೆಯ ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮೇಲೆ ತುಂಬಾ ಗೌರವವಿದೆ. ಉತ್ತಮ ಆಡಳಿತ ನಡೆಸುತ್ತಿದ್ದಾರೆ. ಆದರೆ ನಮ್ಮ ಜಿಲ್ಲೆಯ ನಾಯಕ ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿಯಾಗಿ ಉತ್ತಮ ಕೆಲಸ ಮಾಡುತ್ತಿದ್ದು, ಪಕ್ಷದ ಅಧ್ಯಕ್ಷರಾಗಿ 2023ರ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಿದ್ದಾರೆ. ಹೀಗಾಗಿ ಅವರು ಮುಖ್ಯಮಂತ್ರಿಯಾಗಬೇಕು ಎಂಬುದು ಕಾರ್ಯಕರ್ತರ ಆಸೆಯಾಗಿದೆ. ಹೈಕಮಾಂಡ್ ಆದಷ್ಟು ಬೇಗನೇ ಒಂದು ನಿರ್ಧಾರಕ್ಕೆ ಬರಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ■10ನೇ ಪುಟಕ್ಕೆ


ಐದೂ ವರ್ಷ ಸಿದ್ದರಾಮಯ್ಯನವರೇ ಸಿಎಂ ಆಗಿರ್ತಾರೆ...



ಇಂದು ಮೈಸೂರಲ್ಲಿ ಡಾ. ಯತೀಂದ್ರ, ರಾಜ್ಯದಲ್ಲಿ ಸಿಎಂ ಬದಲಾವಣೆಯ ಯಾವುದೇ ಚರ್ಚೆ ನಡೆಯುತ್ತಿಲ್ಲ. ಹೈಕಮಾಂಡ್ ಸಿಗ್ನಲ್ ಕ್ಲಿಯರ್ ಆಗಿದ್ದು, ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿಗಳಾಗಿ ಮುಂದು ವರೆಯುತ್ತಾರೆ ಎಂಬ ನಂಬಿಕೆ ಇದೆ. ಸಿಎಂ ಬದಲಾವಣೆ ಚರ್ಚೆ ಮಾಧ್ಯಮಗಳಲ್ಲಷ್ಟೇ ನಡೆಯುತ್ತಿದ್ದು, ನಾಯಕತ್ವ ಬದಲಾವಣೆಯ ಯಾವುದೇ ಚರ್ಚೆ ನಡೆಯುತ್ತಿಲ್ಲ. ಪಕ್ಷದ ಹೈಕಮಾಂಡ್ ಬಾಯಿ ಬಿಟ್ಟು ಹೇಳದಿದ್ದರೂ ಸಿಗ್ನಲ್ ಕ್ಲಿಯರ್ ಆಗಿದೆ ಎಂದಿದ್ದರು.

ಯತೀಂದ್ರನೇ ನಮಗೆ ಹೈಕಮಾಂಡ್!

ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಯತೀಂದ್ರನೇ ನಮಗೆ ಹೈಕಮಾಂಡ್. ಅವರು ಹೇಳಿದಂತೆ ಕೇಳೋಣ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವ್ಯಂಗ್ಯವಾಡಿದ್ದಾರೆ. ನಮ್ಮ ತಂದೆಯೇ ಐದು ವರ್ಷ ಮುಖ್ಯಮಂತ್ರಿಯಾಗಿ



ಅಧಿಕಾರದಲ್ಲಿ ಇರುತ್ತಾರೆ. ಅವರ ಬದಲಾವಣೆ ಇಲ್ಲ ಎಂಬುದಾಗಿ ವರಿಷ್ಠರು ಸಿಗ್ನಲ್ ನೀಡಿದ್ದಾರೆ ಎಂಬ ಹೇಳಿಕೆಗೆ ಶಿವಕುಮಾರ್ ಈ ರೀತಿ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ. ಇನ್ನು ಮುಂದೆ ಅವರೇ ನಮ್ಮ ಹೈಕಮಾಂಡ್, ಅವರು ಹೇಳಿದಂತೆಯೇ ಕೇಳೋಣ ಬಿಡಿ ಎಂದು ಕುಟುಕಿದರು. ತಮ್ಮ ಆಪ್ತ ಶಾಸಕ ಶಿವಗಂಗಾ ಬಸವರಾಜ್ ಹೇಳಿಕೆ ಬಗ್ಗೆ ಚರ್ಚಿಸಲು ಇಚ್ಛಿಸದ ಶಿವಕುಮಾರ್, ಶಿವಗಂಗಾ, ಯತೀಂದ್ರ ಹೇಳಿದ್ದಕ್ಕೆಲ್ಲಾ ಪ್ರತಿಕ್ರಿಯಿಸಲಾಗದು ಎಂದರು.

ಪರೀಕ್ಷಾ ಪೇ ಚರ್ಚಾ 2026

ಅಗ್ಗದಲ್ಲಿ ಡೇಟಾ ಸಿಗುತ್ತೆ ಅಂತ ಇಂಟರ್ನೆಟ್‌ನಲ್ಲೇ ಮುಳುಗಬೇಡಿ

ವಿದ್ಯಾರ್ಥಿಗಳಿಗೆ ಪ್ರಧಾನಿ ಮೋದಿ ಕಿವಿಮಾತು




ನವದೆಹಲಿ: ದೇಶದಲ್ಲಿ ಇಂದು ಡೇಟಾ ಅಗ್ಗದ ದರದಲ್ಲಿ ಸಿಗುತ್ತಿದೆ ಎಂಬ ಕಾರಣಕ್ಕೆ ವಿದ್ಯಾರ್ಥಿಗಳು ಇಂಟರ್ನೆಟ್‌ನಲ್ಲಿ ಸಮಯ ವ್ಯರ್ಥ ಮಾಡಬೇಡಿ, ನಿಮ್ಮ ಜೀವನ ಮತ್ತು ಶೈಕ್ಷಣಿಕ ಕೌಶಲ್ಯಗಳನ್ನು ಹೆಚ್ಚಿಸಿಕೊಳ್ಳುವತ್ತ ಗಮನಹರಿಸಿ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ್ದಾರೆ.

ಶಿಕ್ಷಣವು ಮಕ್ಕಳಿಗೆ ಹೊರೆ ಎನಿಸಬಾರದು, ಅರೆಮನಸ್ಸಿನಿಂದ ಕಲಿತರೆ ವಿದ್ಯೆ ತಲೆಗೆ ಹತ್ತುವುದಿಲ್ಲ, ಆಸಕ್ತಿಯಿಲ್ಲದಿದ್ದರೆ ಶಿಕ್ಷಣವು ಜೀವನವನ್ನು ಯಶಸ್ವಿಗೊಳಿಸುವುದಿಲ್ಲವಾದ್ದರಿಂದ ಎಲ್ಲರೂ ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು ಎಂದು ಅವರು 'ಪರೀಕ್ಷಾ ಪೆ ಚರ್ಚಾ 2026'ನ ಒಂಬತ್ತನೇ ಆವೃತ್ತಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುತ್ತಾ ಸಲಹೆ ನೀಡಿದರು.

ಇಂದು ದೆಹಲಿಯ ತಮ್ಮ ನಿವಾಸದಲ್ಲಿ ದೇಶದ ಹಲವು ರಾಜ್ಯಗಳಿಂದ ಬಂದ ಆಯ್ದ ವಿದ್ಯಾರ್ಥಿಗಳೊಂದಿಗೆ ಪರೀಕ್ಷಾ ಪೆ ಚರ್ಚಾ ಕಾರ್ಯಕ್ರಮದಲ್ಲಿ ಮೋದಿ ಭಾಗವಹಿಸಿದ್ದರು. ನಮ್ಮ ಗುರಿ ತಲುಪಬಹುದಾದದ್ದಾಗಿ ರಬೇಕು. ಹಾಗೆಂದು ಸುಲಭವಾಗಿ ಸಾಧಿಸಲಾಗದಂತಿರಬೇಕು. ಮನಸ್ಸನ್ನು ಪಳಗಿಸಿ, ಮನಸ್ಸಿನ ಜೊತೆ ಸಂಪರ್ಕ ಹೊಂದಿ, ನೀವು ಅಧ್ಯಯನ ಮಾಡಲು ಅಗತ್ಯವಿರುವ ವಿಷಯಗಳನ್ನು ಇಟ್ಟುಕೊಳ್ಳಿ. ಆಗ ನೀವು ಯಾವಾಗಲೂ ಯಶಸ್ಸನ್ನು ಕಾಣುವಿರಿ ಎಂದರು.

ಮೋಜಿಗಾಗಿ ಸಮಯ ವ್ಯರ್ಥ ಮಾಡಬೇಡಿ: ನಿಮಗೆ ಮೊಬೈಲ್‌ನಲ್ಲಿ ಗೇಮ್ಸ್ ಆಡಲು ಖುಷಿಯಾಗಬಹುದು. ಆದರೆ ಈಗ ಪರೀಕ್ಷಾ ಸಮಯ, ಅಗ್ಗದ ದರದಲ್ಲಿ ಡೇಟಾ ಸಿಗುತ್ತದೆ ಎಂಬ ಕಾರಣಕ್ಕೆ ಸಮಯ ಕಳೆಯಲು ಅದರಲ್ಲಿ ತೊಡಗಿಕೊಳ್ಳಬೇಡಿ. ಮೋಜಿಗಾಗಿ ಅದನ್ನು ಮಾಡಬೇಡಿ. ಹಣಕ್ಕಾಗಿ ಆನ್‌ಲೈನ್ ಗೇಮ್ಸ್‌ನಲ್ಲಿ ತೊಡಗಿಸಿಕೊಳ್ಳುವವರು ಹಾಳಾಗುತ್ತಾರೆ. ನಾವು ದೇಶದಲ್ಲಿ ಜೂಜಾಟವನ್ನು ಪ್ರೋತ್ಸಾಹಿಸುವುದಿಲ್ಲ. ನಾನು ಆನ್‌ಲೈನ್ ಜೂಜಾಟದ ವಿರುದ್ಧ ಕಾನೂನು ಮಾಡಿದ್ದೇನೆ ಎಂದು ಮಕ್ಕಳಿಗೆ ಕಿವಿಮಾತು ಹೇಳಿದರು. ನಾನು ಈ ದೇಶದ ಪ್ರಧಾನಿ. ಜನರು ನನಗೆ ವಿಭಿನ್ನ ರೀತಿಯಲ್ಲಿ ಕೆಲಸ ಮಾಡಲು ಹೇಳುತ್ತಾರೆ. ■10ನೇ ಪುಟಕ್ಕೆ



ಮನರೇಗಾ ರದ್ದುಪಡಿಸಿದ ಕೇಂದ್ರವನ್ನು ವಿರೋಧಿಸಿ

ರೈತರಿಗೆ ಸಿಎಂ ಸಿದ್ದರಾಮಯ್ಯ ಕರೆ

ಬೆಂಗಳೂರು, ಫೆ.6(ಕೆಎಂಶಿ)– ಮನರೇಗಾ ರದ್ದುಪಡಿಸಿ ವಿಬಿ–ಜಿ–ರಾಮ್–ಜಿ ಕಾಯ್ದೆ ಜಾರಿಗೊಳಿಸಿದ ಕೇಂದ್ರ ಸರ್ಕಾರದ ಕುತಂತ್ರವನ್ನು ರಾಜ್ಯದ ರೈತರು ಒಕ್ಕೊರಲಿನಿಂದ ವಿರೋಧಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದ್ದಾರೆ.

ಅಂತರರಾಷ್ಟ್ರೀಯ ವಾಣಿಜ್ಯ ಮೇಳ–2026 ಉತ್ಪಾದನೋತ್ತರ ಕೃಷಿ–ರೈತರ ಸಬಲೀಕರಣ ಹಾಗೂ ರಾಜ್ಯಮಟ್ಟದ ಕೃಷಿ ಪಂಡಿತ ಪ್ರಶಸ್ತಿ ಪ್ರದಾನ ಸಮಾರಂಭ ಉದ್ದೇಶಿಸಿ ಮಾತನಾಡಿದ ಅವರು, ಪ್ರಧಾನಿ ಡಾ.ಮನಮೋಹನ್ ಸಿಂಗ್ ಸರ್ಕಾರ ಮನರೇಗಾ ಯೋಜನೆ ಜಾರಿಗೊಳಿಸಿತ್ತು ಎಂದರು. ಮಹಿಳೆಯರು, ಆದಿವಾಸಿಗಳು, ಕಾರ್ಮಿಕರಿಗೆ ಉದ್ಯೋಗ ನೀಡುವ ಉತ್ತಮ ಯೋಜನೆ ಇದಾಗಿದೆ, ಗ್ರಾಮಸಭೆಗಳಲ್ಲಿ ಕಾಮಗಾರಿಗಳ ನಿರ್ಧಾರ ಆಗುತ್ತಿತ್ತು. ಈಗ ಕೇಂದ್ರ ಸರ್ಕಾರದ ಕೈಯಲ್ಲಿದೆ, ಕೇಂದ್ರ ನಿರ್ಧರಿಸಿದಂತೆ ಕಾಮಗಾರಿ, ಅನುದಾನ ನೀಡಲಾಗುತ್ತದೆ.

ರೈತರೆಲ್ಲ ಸೇರಿ, ಮನರೇಗಾ ಯೋಜನೆ ಮರುಸ್ಥಾಪನೆ ಹಾಗೂ ವಿಬಿ–ಜಿ–ರಾಮ್–ಜಿ ತಿರಸ್ಕರಿಸಬೇಕು. ಮನರೇಗಾ ಅಡಿ ಕಾರ್ಮಿಕರ ವೇತನವನ್ನು ಕೇಂದ್ರವೇ ಭರಿಸುತ್ತಿತ್ತು. ಆದರೆ ಈಗ ಕೇಂದ್ರ ಶೇ.60 ಅನುದಾನ ನೀಡುತ್ತಿದ್ದು, ರಾಜ್ಯ ಸರ್ಕಾರಗಳು ಶೇ.40 ರಷ್ಟು ಭರಿಸಬೇಕಿದೆ. ಈ ಹಿಂದೆ 100 ಕೆಲಸದ ದಿನಗಳನ್ನು ಖಾತ್ರಿಪಡಿಸುತ್ತಿತ್ತು. ರಾಜ್ಯ ಸರ್ಕಾರಗಳ ಅಂಗೀಕಾರ ಇಲ್ಲದೇ, ಮನರೇಗಾ ರದ್ದುಪಡಿಸಿ ■10ನೇ ಪುಟಕ್ಕೆ

ಇಸ್ಲಾಮಾಬಾದ್ ಮಸೀದಿಯಲ್ಲಿ ಆತ್ಮಾಹುತಿ ದಾಳಿ; 69 ಸಾವು

169ಕ್ಕೂ ಹೆಚ್ಚು ಮಂದಿಗೆ ಗಾಯ

ಇಸ್ಲಾಮಾಬಾದ್ (ಪಾಕಿಸ್ತಾನ): ಮಾಡಿದ್ದುಣ್ಣೋ ಮಹಾರಾಯ ಎಂಬ ಗಾದೆ ಮಾತಿನಂತೆ, ದಶಕಗಳಿಂದ ಉಗ್ರವಾದವನ್ನು ಪೋಷಿಸಿ ನೆರೆಯ ರಾಷ್ಟ್ರಗಳಿಗೆ ರಫ್ತು ಮಾಡುತ್ತಿದ್ದ ಪಾಕಿಸ್ತಾನ ಇಂದು ಅದೇ ಉಗ್ರವಾದದ ಕೆನ್ನಾಲಿಗೆಗೆ ಸಿಲುಕಿ ನಲುಗುತ್ತಿದೆ. ಒಂದೆಡೆ ಬಲೂಚ್ ಪ್ರತ್ಯೇಕವಾದಿ ಸಂಘಟನೆಗಳು, ಮತ್ತೊಂದೆಡೆ ತೆಹ್ರೀಕ್–ಎ–ತಾಲಿಬಾನ್ ಸಂಘಟನೆಯು ಮುನೀರನ ಸೈನ್ಯವನ್ನು ಬೆಂಬಿಡದೆ ಕಾಡುತ್ತಿದೆ. ಇದರ ನಡುವೆ, ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ನ ಮಸೀದಿಯಲ್ಲಿಯೂ ಭಾರಿ ಸ್ಫೋಟ ನಡೆದಿದೆ. ಇನ್ನು, ಈ ದಾಳಿಯಲ್ಲಿ ಇದುವರೆಗೂ ಕನಿಷ್ಠ 69 ಜನರು ಸಾವಿಗೀಡಾಗಿದ್ದು, 169 ಜನರು ಗಂಭೀರ ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ಇಸ್ಲಾಮಾಬಾದ್‌ನ ಐಷಾರಾಮಿ ಪ್ರದೇಶದಲ್ಲಿರುವ ಶಿಯಾ ಸಮುದಾಯದ ಮಸೀದಿಯನ್ನು ಗುರಿಯಾಗಿಸಿಕೊಂಡು ■10ನೇ ಪುಟಕ್ಕೆ

ಮ್ಯೂಲ್ ಅಕೌಂಟ್ ಸೈಬರ್ ದಂಧೆ

ರಾಜ್ಯಾದ್ಯಂತ ಏಕಕಾಲಕ್ಕೆ ಸಿಐಡಿ ದಾಳಿ; 13 ಮಂದಿ ಬಂಧನ

ಬೆಂಗಳೂರು: ರಾಜ್ಯದಲ್ಲಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವ ಬೆನ್ನಲ್ಲೇ ಮ್ಯೂಲ್ ಅಕೌಂಟ್‌ಗಳ ಮೂಲಕ ನಡೆಯುತ್ತಿದ್ದ ಭಾರೀ ಸೈಬರ್ ವಂಚನೆ ದಂಧೆಯನ್ನ ಸಿಐಡಿ ವಿಭಾಗ ಭೇದಿಸಿದೆ.



ಏಕಕಾಲಕ್ಕೆ ನೂರಾರು ಕಡೆ ದಾಳಿ ನಡೆಸಿದ್ದ ಸಿಐಡಿ ತಂಡಗಳು, ಅಕ್ರಮಕ್ಕಾಗಿ ಬಳಸಲಾಗುತ್ತಿದ್ದ 40 ಸಾವಿರಕ್ಕೂ ಹೆಚ್ಚು ಮ್ಯೂಲ್ ಅಕೌಂಟ್‌ಗಳನ್ನ ಪತ್ತೆ ಹಚ್ಚಿದೆ. ರಾಜ್ಯಾದ್ಯಂತ 100ಕ್ಕೂ ಹೆಚ್ಚು ಕಡೆ ಏಕಕಾಲದಲ್ಲಿ ದಾಳಿ ನಡೆಸಿದ ಸಿಐಡಿ ತಂಡ, ಪ್ರಕರಣದ ಪ್ರಮುಖ 13 ಮಾಸ್ಟರ್ ಮೈಂಡ್‌ಗಳನ್ನು ಬಂಧಿಸಿದೆ.

ಅಮಾಯಕರ ಬ್ಯಾಂಕ್ ಖಾತೆ, ಎಟಿಎಂ ಕಾರ್ಡ್ ಹಾಗೂ ಖಾತೆ ವಿವರಗಳನ್ನು ಹಣಕ್ಕಾಗಿ ಸಂಗ್ರಹಿಸಿ ಸೈಬರ್ ವಂಚಕರಿಗೆ ನೀಡಲಾಗುತ್ತಿತ್ತು ಎಂದು ಸಿಐಡಿ ತಂಡ ತನಿಖೆ ವೇಳೆ ಬಹಿರಂಗಪಡಿಸಿದೆ.

ಮ್ಯೂಲ್ ಅಕೌಂಟ್‌ಗಳ ಮೂಲಕ ಆನ್‌ಲೈನ್ ವಂಚನೆ ನಡೆಸಿ ಹಣ ವರ್ಗಾವಣೆ ಹಾಗೂ ಎಟಿಎಂ ಮೂಲಕ ಹಣ ವಿತ್‌ಡ್ರಾ ಮಾಡಲಾಗುತ್ತಿತ್ತು. ಖಾತೆ ವಿವರ ನೀಡಿದ ಅಮಾಯಕರಿಗೆ ವಂಚನೆಯ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ ಎಂದು ತಿಳಿದುಬಂದಿದೆ. ತನಿಖೆಯ ವೇಳೆ ಸುಮಾರು 40 ಸಾವಿರಕ್ಕೂ ಹೆಚ್ಚು ಮ್ಯೂಲ್ ಅಕೌಂಟ್‌ಗಳು ಬಳಕೆಯಲ್ಲಿರುವುದು ಪತ್ತೆಯಾಗಿದೆ.

ನೈಜ ಬ್ಯಾಂಕ್ ಖಾತೆದಾರರ ವಿಚಾರಣೆ: ಮೇಲಾಧಿಕಾರಿಗಳ ಸೂಚನೆಯಂತೆ, ಬೆಂಗಳೂರು, ಚಿತ್ರದುರ್ಗ, ಗದಗ, ಕೊಪ್ಪಳ, ಧಾರವಾಡ ಸೇರಿದಂತೆ ■10ನೇ ಪುಟಕ್ಕೆ

ಬಿಡುಗಡೆಯಾಗದ ಬಾಕಿ ಬಿಲ್

ಮೂಲ ಸೌಕರ್ಯ ಕಾಮಗಾರಿ ಸ್ಥಗಿತಕ್ಕೆ ಗುತ್ತಿಗೆದಾರರ ನಿರ್ಧಾರ

ಬೆಂಗಳೂರು: ರಾಜ್ಯ ಬಜೆಟ್ ಮಂಡನೆಗೆ ಒಂದು ದಿನ ಮೊದಲು (ಬಹುಶಃ ಮಾರ್ಚ್ 6 ರಂದು) ಬಾಕಿ ಹಣವನ್ನು ಪಾವತಿಸುವಲ್ಲಿನ ವಿಳಂಬವನ್ನು ವಿರೋಧಿಸಿ ಕರ್ನಾಟಕದಾದ್ಯಂತ ಎಲ್ಲಾ ಮೂಲಸೌಕರ್ಯ ಯೋಜನೆಗಳ ಕೆಲಸವನ್ನು ಸ್ಥಗಿತಗೊಳಿಸುವುದಾಗಿ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ ಬೆದರಿಕೆ ಹಾಕಿದೆ.

ಕೆಎಸ್‌ಸಿಎ ಪ್ರಧಾನ ಕಾರ್ಯದರ್ಶಿ ಜಿ.ಎಂ. ನಂದಕುಮಾರ್ ಮಾತನಾಡಿ ನೀರಾವರಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ವಸತಿ ಮಂಡಳಿ, ವಕ್ಫ್ ಮಂಡಳಿ, ಕೊಳಚೆ ಅಭಿವೃದ್ಧಿ ಮಂಡಳಿ, ನಗರಾಭಿವೃದ್ಧಿ ಇಲಾಖೆ ಮತ್ತು ಜಲಸಂಪನ್ಮೂಲ ಇಲಾಖೆ ಸೇರಿದಂತೆ ಎಂಟು ಪ್ರಮುಖ ಇಲಾಖೆಗಳು ಸುಮಾರು 37,370.76 ಕೋಟಿ ರೂ.ಗಳ ಬಿಲ್‌ಗಳನ್ನು ಕ್ಲಿಯರ್ ಮಾಡಿಲ್ಲ. 2021–22, 2022–23 ಮತ್ತು 2023–24ರ ಬಿಲ್ ಗಳನ್ನು ತೆರವುಗೊಳಿಸಲಾಗಿಲ್ಲ. ಜಲಸಂಪನ್ಮೂಲ ಇಲಾಖೆಯು 13,000 ಕೋಟಿ ರೂ.ಗಳ ಬಿಲ್‌ಗಳನ್ನು ಪಾವತಿಸಬೇಕಾಗಿದೆ. ಈ ಬಿಲ್‌ಗಳನ್ನು ಕ್ಲಿಯರ್ ಮಾಡಲು ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ, ನಾವು ಎಲ್ಲಾ ಮೂಲ ಸೌಕರ್ಯ ಯೋಜನೆಗಳ ಕೆಲಸವನ್ನು ಸ್ಥಗಿತಗೊಳಿಸುತ್ತೇವೆ. ಈ ಇಲಾಖೆಗಳು ಮತ್ತು ಸರ್ಕಾರಕ್ಕೆ ಒಂದು ತಿಂಗಳ ಕಾಲಾವಕಾಶ ನೀಡಲಾಗುವುದು. ಇಲ್ಲದಿದ್ದರೆ, ಮಾರ್ಚ್ 5 ರಿಂದ ಎಲ್ಲಾ ಮೂಲ ಸೌಕರ್ಯ ಯೋಜನೆಗಳ ಕೆಲಸವನ್ನು ನಿಲ್ಲಿಸಲಾಗುವುದು ಎಂದು ಹೇಳಿದರು.

ಈ ಹಿಂದೆ, ಸರ್ಕಾರವು ಪ್ರಮುಖ ಹಬ್ಬಗಳ ಸಮಯದಲ್ಲಿ ಗುತ್ತಿಗೆದಾರರ ಬಿಲ್‌ಗಳನ್ನು ಕ್ಲಿಯರ್ ಮಾಡುತ್ತಿತ್ತು. ಈ ವರ್ಷ ನಮಗೆ ಏನನ್ನೂ ಪಾವತಿಸಲಿಲ್ಲ. ರಾಜ್ಯಾದ್ಯಂತ ಗುತ್ತಿಗೆದಾರರು ಮರುಪಾವತಿಸಲು ಬ್ಯಾಂಕ್ ಸಾಲಗಳನ್ನು ಹೊಂದಿದ್ದಾರೆ. ಬ್ಯಾಂಕುಗಳಿಂದ ಸಾಲ ಪಡೆಯುವ ಏಕೈಕ ಆಯ್ಕೆಯನ್ನೂ ಸಹ ನಮ್ಮಿಂದ ಕಸಿದುಕೊಳ್ಳಲಾಗಿದೆ ಎಂದು ಆರೋಪಿಸಿದ್ದಾರೆ.

ಈ ಹಿಂದೆ, ಸರ್ಕಾರದಲ್ಲಿರುವವರು ಬಾಕಿ ಬಿಲ್‌ಗಳನ್ನು ತೆರವುಗೊಳಿಸಲು ಕಮಿಷನ್ ಕೋರಿದ್ದಾರೆ ಎಂದು ಸಂಘವು ಆರೋಪಿಸಿದೆ. ಸಿಎಂ ಸಿದ್ದರಾಮಯ್ಯ ನಿರ್ದೇಶನದ ಹೊರತಾಗಿಯೂ ಪ್ಯಾಕೇಜ್ ಗುತ್ತಿಗೆ ಕೆಲಸಗಳನ್ನು ನೀಡುತ್ತಿಲ್ಲ ಎಂದು ಅದು ಆರೋಪಿಸಿದೆ. ವಿವಿಧ ಇಲಾಖೆಗಳ ಮುಖ್ಯಸ್ಥರು ಮತ್ತು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಈ ವಿಷಯದಲ್ಲಿ ಮೌನವಾಗಿದ್ದಾರೆ ಎಂದು ದೂರಿದ್ದಾರೆ.

ಭಾರತ ಮುಡಿಗೆ ಯುವ ವಿಶ್ವಕಪ್ ಮುಕುಟ

- 100 ರನ್‌ಗಳಿಂದ ಇಂಗ್ಲೆಂಡ್ ಮಣಿಸಿದ ಭಾರತ
- ವೈಭವ್ ಸೂರ್ಯವಂಶಿ ಭರ್ಜರಿ ಶತಕ
- ಅಂಬರೀಶ್‌ಗೆ 3 ವಿಕೆಟ್
- ಆರನೇ ಬಾರಿಗೆ ಅಂಡರ್–19 ಏಕದಿನ ವಿಶ್ವಕಪ್ ಗೆದ್ದ ಭಾರತ



ಟ್ರೋಫಿಯೊಂದಿಗೆ ಟೀಂ ಇಂಡಿಯಾ ಆಟಗಾರರ ಸಂಭ್ರಮ.

ಹರಾರೆ, ಫೆ.6(ವಿವಿಹೆಚ್)– ಹರಾರೆ ಕ್ರೀಡಾಂಗಣದಲ್ಲಿ ನಡೆದ ಅಂಡರ್ 19 ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಭಾರತ, ಇಂಗ್ಲೆಂಡ್ ವಿರುದ್ಧ 100 ರನ್‌ಗಳ ಭರ್ಜರಿ ಜಯ ಸಾಧಿಸುವ ಮೂಲಕ ಆರನೇ ಬಾರಿಗೆ ಟ್ರೋಫಿಯನ್ನು ಎತ್ತಿಹಿಡಿದಿದೆ.

ಈ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ಬ್ಯಾಟಿಂಗ್ ಆರಿಸಿಕೊಂಡು ವೈಭವ್ ಸೂರ್ಯವಂಶಿ ದಾಖಲೆಯ ಶತಕದ ನೆರವಿನಿಂದ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ ಬರೋಬ್ಬರಿ 411 ರನ್ ಕಲೆಹಾಕಿ ಇಂಗ್ಲೆಂಡ್‌ಗೆ 412 ರನ್‌ಗಳ ಕಠಿಣ ಗುರಿಯನ್ನು ನೀಡಿತು. ಈ ಗುರಿಯನ್ನು ತಲುಪುವಲ್ಲಿ ಸುಸ್ತಾದ ಇಂಗ್ಲೆಂಡ್ 40.2 ಓವರ್‌ಗಳಲ್ಲಿ 311 ರನ್‌ಗೆ ಆಲ್‌ಔಟ್ ಆಗಿದೆ.

ಭಾರತದ ಇನ್ನಿಂಗ್ಸ್: ಸೆಮಿಫೈನಲ್ ಪಂದ್ಯದಲ್ಲಿ ಶತಕ ಬಾರಿಸಿದ್ದ ಆರನ್ ಜಾರ್ಜ್ ಕೇವಲ 9 ರನ್‌ಗೆ ವಿಕೆಟ್ ಒಪ್ಪಿಸಿದರು. ಹೀಗೆ ಆರಂಭಿಕ ಆಘಾತ ಕಂಡ ಭಾರತಕ್ಕೆ ಮತ್ತೋರ್ವ ಆರಂಭಿಕ ಆಟಗಾರ ವೈಭವ್ ಸೂರ್ಯವಂಶಿ ಅಬ್ಬರಿಸಿ ■10ನೇ ಪುಟಕ್ಕೆ



ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದ ವೈಭವ್ ಸೂರ್ಯವಂಶಿ.

ಯುವ ವಿಶ್ವಕಪ್‌ನ ಪ್ರಮುಖ ಅಂಶಗಳು

ಫೈನಲ್ಸ್ ಪಂದ್ಯದ ಪಂದ್ಯಶ್ರೇಷ್ಠ: ವೈಭವ್ ಸೂರ್ಯವಂಶಿ
ಸರಣಿ ಶ್ರೇಷ್ಠ: ವೈಭವ್ ಸೂರ್ಯವಂಶಿ
ಟೂರ್ನಿಯಲ್ಲಿ ಅತೀ ಹೆಚ್ಚು ರನ್: ಬೆನ್ ಮೇಯಸ್ (444 ರನ್)
ಟೂರ್ನಿಯಲ್ಲಿ ಅತೀ ಹೆಚ್ಚು ವಿಕೆಟ್: ಮ್ಯಾನಿ ಲಮ್ಸ್‌ಡೆನ್ (16 ವಿಕೆಟ್)
ಪಂದ್ಯವೊಂದರಲ್ಲಿ ವೈಯಕ್ತಿಕ ಗರಿಷ್ಠ ರನ್: ವಿರಾನ್ ಚಾಮುದಿತಾ (192 ರನ್)
ಪಂದ್ಯವೊಂದರಲ್ಲಿ ವೈಯಕ್ತಿಕ ಗರಿಷ್ಠ ವಿಕೆಟ್: ಶಕ್ವಾನ್ ಬೆಲ್ಲೆ (40ಕ್ಕೆ6)
ಟೂರ್ನಿಯಲ್ಲಿ ಅತೀ ಹೆಚ್ಚು ಶತಕ: ಫೈಸಾಲ್ ಸಿನೋಜಡ, ವಿರಾನ್ ಚಾಮುದಿತಾ ಹಾಗೂ ಓಲಿವರ್ ಪೀಕ್ (2 ಶತಕ)
ಟೂರ್ನಿಯಲ್ಲಿ ಅತೀ ಹೆಚ್ಚು ಅರ್ಧಶತಕ: ವೈಭವ್ ಸೂರ್ಯವಂಶಿ, ನಿತೇಶ್ ಸ್ಯಾಮುವೆಲ್, ಆಯೂಷ್ ಮ್ಹಾತ್ರೆ, ಹಕೀಮ್ ತಮೀಮ್ (3 ಅರ್ಧಶತಕ)
ಅತೀ ಹೆಚ್ಚು ಸಿಕ್ಸರ್ ಬಾರಿಸಿದ ಆಟಗಾರ: ವೈಭವ್ ಸೂರ್ಯವಂಶಿ (30 ಸಿಕ್ಸರ್)
ಅತೀ ಹೆಚ್ಚು ಬೌಂಡರಿ ಬಾರಿಸಿದ ಆಟಗಾರ: ಫೈಸಾಲ್ ಸಿನೋಜಡ (52 ಬೌಂಡರಿ)

ನಕ್ಕರೆ ಅದೇ ಸ್ವರ್ಗ

ಗ್ರಾಹಕ : ಬಿಸಿ ಬಿಸಿ ಏನಿದೆ?
ಸಪ್ಲೆಯರ್ : ಇಡ್ಲಿ ಇದೆ
ಗ್ರಾಹಕ : ಅದಕ್ಕೂ ಬಿಸಿಯಾದ್ದು ಏನಿದೆ?
ಸಪ್ಲೆಯರ್ : ಬೆಂಕಿ ಕೆಂಡ
ಗ್ರಾಹಕ : ತಗೊಂಡ್ ಬಾ, ಸಿಗರೇಟ್ ಹಚ್ಚಿಕೊಳ್ಬೇಕು!

ಮೈಸೂರು ಮಿತ್ರ

ಶನಿವಾರ, ಫೆಬ್ರವರಿ 7, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಸಾಧ್ಯವಾದದ್ದನ್ನು ಮಾಡಲು ಶಕ್ತಿ ಸಾಕು. ಅಸಾಧ್ಯವಾದುದನ್ನು ಮಾಡಲು ವಿಶ್ವಾಸ ಮುಖ್ಯ. ಶಕ್ತಿ ವಿಶ್ವಾಸಗಳಿಂದ ಎಲ್ಲವೂ ಸಾಧ್ಯ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರಂತೆ

ಲೋಹದ ಮೋಹ ಬಿಡದೆ ಇಳಿಯದಣ್ಣ ಬೆಲೆ




"ಅಂಕಿ-ಅಂಶಗಳ ಪ್ರಕಾರ ದೇಶದ ದೇವಾಲಯಗಳಲ್ಲಿ ಅಂದಾಜು 4000 ಮೆ.ಟನ್‌ನಷ್ಟು ಚಿನ್ನ ಇದೆ, ಸರ್ಕಾರಿ ಸ್ವಾಮ್ಯದಲ್ಲಿ ಅತೀ ಹೆಚ್ಚು ಚಿನ್ನವನ್ನು ಹೊಂದಿರುವ ದೇಶಗಳಲ್ಲಿ 8133 ಮೆ.ಟನ್ ಚಿನ್ನವನ್ನು ಹೊಂದಿ ಅಮೆರಿಕಾ ಮೊದಲ ಸ್ಥಾನದಲ್ಲಿದೆ. ಭಾರತವು ಅಧಿಕೃತವಾಗಿ 880 ಮೆ.ಟನ್ ಹೊಂದಿದ್ದು, 8ನೇ ಸ್ಥಾನದಲ್ಲಿದೆ. ಜನರ ಬಳಿ ಹಾಗೂ ದೇವಾಲಯಗಳಲ್ಲಿ ಅಂದಾಜು 34,000 ಮೆ.ಟನ್‌ಗಿಂತಲೂ ಹೆಚ್ಚಿದೆ ಎಂದು ಹೇಳಲಾಗುತ್ತಿದೆ.

ಹಣ ಇದೆಯೆಂದು ಅಗತ್ಯಕ್ಕಿಂತ ಹೆಚ್ಚು ತೆಗೆದು ತೆಗೆದು ಕೂಡಿಟ್ಟರೆ, ಬಗೆದು ಶೋಧಿಸಿದ ಚಿನ್ನವೆಲ್ಲಾ ಹೂಡಿಕೆಯಾಗಿ ಬೀರುಗಳಲ್ಲಿ ಬಚ್ಚಿಟ್ಟುಕೊಂಡರೆ ಮಾರುಕಟ್ಟೆಯಲ್ಲಿ ಕೊರತೆಯಾಗಿ ಬೇಡಿಕೆ ಹೆಚ್ಚಾಗುವುದಿಲ್ಲವೇ?.

ಚಿನ್ನದ ಕೊರತೆ ಎದುರಾಗುತ್ತಿರುವುದು ಎರಡು ಮುಖ್ಯ ಕಾರಣಗಳಿಂದ ಒಂದು ಬ್ಯಾಂಕುಗಳಲ್ಲಿ ಇಟ್ಟ ಹಣಕ್ಕೆ ಹಿಂದಿನಂತೆ ಹೆಚ್ಚು ಬಡ್ಡಿ ಇಲ್ಲದಿರುವುದು. ಇದರಿಂದಾಗಿ ಖರ್ಚಿಗಿಂತ ಉಳಿತಾಯ ಜಾಸ್ತಿ ಇದ್ದವರು ಚಿನ್ನವನ್ನು ಕೊಂಡು ಕೂಡಿಡುತ್ತಾರೆ ಇಲ್ಲವೆ ಜಮೀನು, ಸೈಟುಗಳನ್ನು ಕೊಂಡುಕೊಳ್ಳುತ್ತಾರೆ.

ಮತ್ತೊಂದು ಕಾರಣವೆಂದರೆ ಭಕ್ತರು ತಮ್ಮ ಇಷ್ಟಾರ್ಥಗಳು ನೆರವೇರಲೆಂದು ಚಿನ್ನದ ಒಡವೆಗಳನ್ನು ಕೊಡುವೆನೆಂದು ಹರಕೆ ಹೊತ್ತು ದೇವಸ್ಥಾನಗಳಿಗೆ ಕಾಣಿಕೆ ನೀಡುವುದು.

ದೇಶದ ದೇವಾಲಯಗಳಲ್ಲಿ ಇರುವ ಚಿನ್ನವನ್ನು ಹೊರತೆಗೆದರೆ ಬಹುಶಃ ಗಣನೀಯವಾಗಿ ಇಳಿಕೆ ಆಗುವ ಸಾಧ್ಯತೆ ಇದೆ. 1970ರಲ್ಲಿ 10 ಗ್ರಾಂ ಚಿನ್ನದ ಬೆಲೆ ರೂ.184(ಇವತ್ತಿನ ಒಂದು ಮಸಾಲೆ ದೋಸೆ ಮತ್ತು ಕಾಫಿಯ ಬೆಲೆ), ಜನವರಿ 2026ರ ಅಂತ್ಯದಲ್ಲಿ ರೂ.1,57,400 ಆಗಿದೆಯೆಂದರೆ ಇಂಥ ವ್ಯವಸ್ಥೆಯಲ್ಲಿ ಬಡವ ಬದುಕುವುದು ಹೇಗೆ?. ಅಷ್ಟಕ್ಕೂ ತೀವ್ರ ಏರಿಕೆಯ ಹಿಂದೆ ನಿಗೂಢ ಕೈಗಳಿರಬಹುದು ಎಂದು ಅನಿಸುವುದಿಲ್ಲವೇ?.

ದೇಶದ ದೇವಾಲಯಗಳಲ್ಲಿ ಅಂದಾಜು 4000 ಮೆಟ್ರಿಕ್ ಟನ್‌ನಷ್ಟು ಚಿನ್ನ ಇದೆಯೆಂದು ಅಂಕಿಅಂಶಗಳು ಹೇಳುತ್ತವೆ. ಅತೀ ಹೆಚ್ಚು ಚಿನ್ನವನ್ನು ಹೊಂದಿರುವ ದೇಶಗಳಲ್ಲಿ 8133 ಮೆಟ್ರಿಕ್ ಟನ್ ಚಿನ್ನದೊಂದಿಗೆ ಅಮೆರಿಕಾ ಮೊದಲ ಸ್ಥಾನದಲ್ಲಿದೆ. ಭಾರತವು ಅಧಿಕೃತವಾಗಿ 880 ಮೆಟ್ರಿಕ್ ಟನ್ ಹೊಂದಿದ್ದು, 8ನೇ ಸ್ಥಾನದಲ್ಲಿದೆ. ಜನರ ಬಳಿ ಹಾಗೂ ದೇವಾಲಯಗಳಲ್ಲಿ ಅಂದಾಜು 34,600 ಮೆಟ್ರಿಕ್ ಟನ್ ಗಿಂತಲೂ ಹೆಚ್ಚಿದೆ ಎಂದು ಹೇಳಲಾಗುತ್ತಿದೆ.

ಭಾರತವು 2025ರಲ್ಲಿ ಉತ್ಪಾದಿಸಿದ್ದು ಕೇವಲ 1.50 ಮೆಟ್ರಿಕ್ ಟನ್, ಬೇಡಿಕೆ ಇರುವುದು 800 ಮೆಟ್ರಿಕ್ ಟನ್, ಸರಾಸರಿ ವಾರ್ಷಿಕ 700–1000 ಮೆಟ್ರಿಕ್ ಟನ್ ಚಿನ್ನವನ್ನು ಆಮದು ಮಾಡಿಕೊಳ್ಳುತ್ತದೆ.

ವಿಶ್ವಮಟ್ಟದಲ್ಲಿ ಚಿನ್ನದ ಉತ್ಪಾದನೆಯು ನಮ್ಮದು ತೀರಾ ಕಡಿಮೆ. ಚೀನಾ ದೇಶವು 380 ಮೆಟ್ರಿಕ್ ಟನ್ ಉತ್ಪಾದಿಸಿದೆ. ಚೀನಾ, ರಷ್ಯಾ, ಆಸ್ಟ್ರೇಲಿಯಾ, ಕೆನಡಾ ಅಮೆರಿಕಾ, ಘಾನಾ ದೇಶಗಳು ಒಟ್ಟಾರೆ ವಿಶ್ವದ ಉತ್ಪಾದನೆಯಲ್ಲಿ ದೊಡ್ಡ ಭಾಗವನ್ನು ಹೊಂದಿದೆ.

2024ರವರೆಗೆ ವಿಶ್ವದಲ್ಲಿ ಹೊರತೆಗೆದಿರುವ ಒಟ್ಟು ಚಿನ್ನದ ಪ್ರಮಾಣ ಅಂದಾಜಿಸಿರುವಂತೆ 2,16,265 ಮೆಟ್ರಿಕ್ ಟನ್. ಭಾರತದಲ್ಲಿ ಸರಿಸುಮಾರು 34,600 ಮೆಟ್ರಿಕ್ ಟನ್ ಚಿನ್ನವಿದೆ, ಉತ್ಪಾದಿಸಿದ ಚಿನ್ನದಲ್ಲಿ ಶೇ.16ರಷ್ಟು ನಮ್ಮಲ್ಲಿದೆ. ವಿಶ್ವ ಚಿನ್ನದ ಮಂಡಳಿಯ (World Gold Council) ಅನುಸಾರ ಜಾಗತಿಕ ಚಿನ್ನದ ಬೇಡಿಕೆಯಲ್ಲಿ ಭಾರತವು ಶೇ.26ರಷ್ಟನ್ನು ಹೊಂದಿದೆ.

ಚಿನ್ನವು ಇತರೆ ಲೋಹಗಳಾದ ಕಬ್ಬಿಣ, ಅಲ್ಯೂಮಿನಿಯಂ, ತಾಮ್ರ ಮುಂತಾದವುಗಳಿಗಿಂತ ವಿಭಿನ್ನ. ಚಿನ್ನವನ್ನು ಹಣಕ್ಕೆ ಪರ್ಯಾಯವಾಗಿ ಬಳಸುತ್ತೇವೆ. ಅಲ್ಪ ಸ್ವಲ್ಪ ತೆರಿಗೆಯನ್ನು ಉಳಿಸುವ ಉದ್ದೇಶದಿಂದ ಮನೆಗಳಲ್ಲಿ ಅಥವಾ ಬ್ಯಾಂಕುಗಳಲ್ಲಿ ಕ್ಯಾಷ್ ಇಡುವ ಬದಲು ಕಷ್ಟಕ್ಕೆ ಆಗುವುದೆಂದು ಸ್ವಲ್ಪ ಪ್ರಮಾಣವನ್ನು ಚಿನ್ನದ ರೂಪದಲ್ಲಿ ಇಡುವುದು ಎಲ್ಲರೂ ಕಂಡುಕೊಂಡ ಸರಳ ಮಾರ್ಗ. ಚಿನ್ನವನ್ನು ಇತರೆ ವಸ್ತುಗಳಂತೆ ಕಚ್ಚಾ ಸಾಮಗ್ರಿಗಳನ್ನು ಬಳಸಿ ಉತ್ಪಾದಿಸುವಂತಿದ್ದರೆ ಏರಿಕೆಯನ್ನು ತಕ್ಕಮಟ್ಟಿಗೆ ನಿಯಂತ್ರಿಸಬಹುದಿತ್ತು.

1970ರ ಕಾಲಘಟ್ಟದಲ್ಲಿ ಈಗಿನಂತೆ ಚಿನ್ನದ ಅಂಗಡಿಗಳು ಇರಲಿಲ್ಲ. ಕಣ್ಣು ಕುಕ್ಕುವಂತೆ ಅಲಂಕೃತಗೊಂಡ ಅಂಗಡಿಗಳನ್ನು ಕಾಣೆವು. ಇದ್ದವುಗಳೆಲ್ಲಾ ಚಹ ಅಂಗಡಿಗಳಂತೆ ಒಂದೆರಡು ಚದರದ ಕೊಠಡಿಗಳಲ್ಲಿ ಇದ್ದವು. ಒಡವೆ ಯಾವುದು ಬೇಕೆಂಬುದನ್ನು ಚಿನ್ನದ ಅಂಗಡಿಯನ್ನೇ ವೃತ್ತಿಯನ್ನಾಗಿಸಿಕೊಂಡಿದ್ದ ಚಿನ್ನಾಚಾರಿಯವರಿಗೆ ಆರ್ಡರ್ ಕೊಟ್ಟರೆ ತಯಾರಿಸುವುದಕ್ಕೆ ಕೆಲವು ದಿನಗಳನ್ನು ತೆಗೆದುಕೊಂಡು ಮಾಡಿ ಕೊಡುತ್ತಿದ್ದರು, ರೆಡಿಮೇಡ್ ಚಿನ್ನದ ಒಡವೆಗಳನ್ನು ಮಾರುತ್ತಿರಲಿಲ್ಲ. ಆರ್ಡರ್ ನೀಡಿದಾಗ ಪೇಟೆಯಿಂದ ಚಿನ್ನ ತಂದು ಮಾಡಿಕೊಡುತ್ತಿದ್ದರು.

ಇದ್ದಿಲು ಬೆಂಕಿಯ ಕುಂಡದ ಮುಂದೆ ಕೊಳವೆ ಊದುತ್ತಾ ಚಿನ್ನವನ್ನು ಹದವಾಗಿ ಕಾಯಿಸಿ ಕಬ್ಬಿಣದ ಬೇಸಿನ ಮೇಲೆ ಇಟ್ಟು ಸಣ್ಣ ಸುತ್ತಿಗೆಯಲ್ಲಿ ಕಟ್ಟಾಂ ಕುಟ್ಟಂ ಕುಟ್ಟುತ್ತಾ ಕನ್ನಡಕದ ಸಂದಿಯಿಂದ ಬಂದ ಗಿರಾಕಿಗಳನ್ನು ನೋಡುತ್ತಾ ಕುಳಿತ ಭಂಗಿಯು ಇಂದಿನವರೆಗೆ ಖಂಡಿತ ಕಾಣಸಿಗದು.

ಚಿನ್ನದ ಕೆಲಸವನ್ನು ಮಾಡಲೆಂದೇ ಎಲ್ಲಾ ಊರುಗಳಲ್ಲೂ ಇದ್ದ ಜನಾಂಗವಿದು, ಇವರನ್ನು ಹೊರತುಪಡಿಸಿ ಅನ್ಯಜನಾಂಗದವರು ಈ ಕಸುಬಿನಲ್ಲಿ ತೊಡಗಿಸಿಕೊಂಡಿರಲಿಲ್ಲ. ಬಹುತೇಕ ಎಲ್ಲಾ ಊರುಗಳಲ್ಲೂ ಚಿನ್ನದ ಕೆಲಸವನ್ನು ಮಾಡುವ ಚಿನ್ನಾಚಾರಿ ಎಂದು ಕರೆಸಿಕೊಳ್ಳುತ್ತಿದ್ದವರು ಇದ್ದರು.

ವೃತ್ತಿಯು ಸಂಪೂರ್ಣ ಇವರ ವಶದಲ್ಲಿ ಇದ್ದಾಗ ಎಲ್ಲವೂ ಚನ್ನಾಗಿಯೇ ಇತ್ತು. ಮದುವೆ ಮುಂಜಿಗಳಲ್ಲಿ ನಮ್ಮೂರಿನ ಆಚಾರ್‌ರವರಿಗೆ ಬಿಡುವು ಇರುತ್ತಿರಲಿಲ್ಲ. ದಿನವೆಲ್ಲಾ ದುಡಿದರೂ ಸಕಾಲದಲ್ಲಿ ಒಡವೆಗಳನ್ನು ಮಾಡಿಕೊಡಲು ಸಾಧ್ಯವಾಗುತ್ತಿರಲಿಲ್ಲ. ಆದರೆ ನಂಬಿಕೆಗೆ ಎಂದೂ ದ್ರೋಹ ಮಾಡಿದವರಲ್ಲ. ಚಿನ್ನವನ್ನು ಪರೀಕ್ಷಿಸಲು ಆಧುನಿಕ ಉಪಕರಣಗಳು ಇರಲಿಲ್ಲ. ಆದರೂ ಎಂದೂ ಮೋಸ ಮಾಡಿದವರಲ್ಲ. ತೂಗುವ ತಕ್ಕಡಿಯೂ ಅಷ್ಟೇ, ಡಿಜಿಟಲ್ ಅಲ್ಲದಿದ್ದರೂ ಗುಲಗಂಜಿಯಷ್ಟು ವ್ಯತ್ಯಾಸ ಆಗುತ್ತಿರಲಿಲ್ಲ.

ಮಾಂಗಲ್ಯ, ಕರಿಮಣಿ ಸರಕ್ಕೆರಡು ಗುಂಡು, ಕಾಸಿನ ಸರ, ಸೊಂಟದ ಡಾಬು, ಬಳೆಗಳು, ಉಂಗುರ ಇವಿಷ್ಟೇ ಚಾಲ್ತಿಯಲ್ಲಿದ್ದ ಡಿಸೈನ್ ಒಡವೆಗಳು. ಆರ್ಥಿಕವಾಗಿ ಸದೃಢವಾಗಿದ್ದ ಬೆರಳೆಣಿಕೆ ಮಂದಿ ಮಾತ್ರ ಒಡವೆಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಶೇ.90ರಷ್ಟು ಜನರು ಮದುವೆಮುಂಜಿಗಳಲ್ಲಿ ಮಾಂಗಲ್ಯ ಅದಕ್ಕೆ ಕರಿಮಣಿ ಸರ ಹಾಗೂ ಎರಡು ಚಿನ್ನದ ಗುಂಡುಗಳನ್ನು ಮಾತ್ರ ಮಾಡಿಸಿಕೊಳ್ಳುತ್ತಿದ್ದರು. 1990ವರೆಗೆ ನಮ್ಮೂರಿನಲ್ಲಿ ಯಾರ ಬಳಿಯೂ ಚಿನ್ನದ ಮಾಂಗಲ್ಯ ಸರ ಹಾಕಿದ್ದನ್ನು ನೋಡಿಯೇ ಇಲ್ಲ. ಈಗ ಎಲ್ಲರೂ, ಎಲ್ಲರಿಗೂ ಕಾಣುವಂತೆ ಸೆರಗಿನ ಹೊರಗೆ ತೂಗಾಡಿಸಿಕೊಂಡು ಓಡಾಡುವುದನ್ನು ಕಾಣುತ್ತೇವೆ.

ಚಿನ್ನದ ಕೆಲಸವನ್ನು ವೃತ್ತಿಯನ್ನಾಗಿಸಿಕೊಂಡು ಬೆಂಕಿಯಲ್ಲಿ ಬೇಯುತ್ತಿದ್ದ ಚಿನ್ನಾಚಾರಿಯವರು ಕ್ರಮೇಣ ಮೂಲೆಗುಂಪಾಗುತ್ತಾ ಬಂದರು, ತಂತ್ರಜ್ಞಾನದಿಂದಾಗಿ ಒಡವೆಗಳನ್ನು ಮೆಷಿನ್‌ಗಳಲ್ಲಿ ತಯಾರಿಸುವುದಕ್ಕೆ ಪ್ರಾರಂಭವಾಯಿತು, ಬೆಂಕಿಯ ಮುಂದೆ ಕುಳಿತು ದೈವಕೆಲಸ ಎಂದು ಭಕ್ತಿಯಿಂದ ಕುಟ್ಟಂಕುಟ್ಟಾ ಕುಟ್ಟುತ್ತಿದ್ದ ಒಂದು ಜನಾಂಗಕ್ಕೆ ಸೀಮಿತವಾಗಿದ್ದ ವೃತ್ತಿಗೆ, ಜಾತಿ, ಧರ್ಮಗಳೆನ್ನದೆ ಎಲ್ಲರೂ ನುಗ್ಗಿದರು ದೊಡ್ಡ ಲಾಭದಾಯಕ ಉದ್ಯಮವಾಗಿ ಬೆಳೆದು ನಾಗಾಲೋಟಕ್ಕೆ ಕೊಂಡೊಯ್ದು, ಏರುತ್ತಿರುವ ದರವನ್ನು ನೋಡಿದರೆ ಇದೊಂದು ಅದ್ಭುತ ವ್ಯವಹಾರ ಇರಬಹುದೇ ಎನ್ನುವ ಹಂತಕ್ಕೆ ಬಂದು ನಿಂತಿದೆ.

ಚಿನ್ನದ ಗೂಡಂಗಡಿಗಳು ದೊಡ್ಡ ದೊಡ್ಡ ಎಸಿ ಬಂಗಲೆಗಳಾಗಿವೆ, ಶೋಕೇಸ್‌ನಲ್ಲಿ ಕೋಟಿ ಕೋಟಿ ಮೊತ್ತದ ಒಡವೆಗಳನ್ನು ಪ್ರದರ್ಶನಕ್ಕೆ ಇಟ್ಟಿರುತ್ತಾರೆ. ನಗರಗಳಲ್ಲಿ ಹೊಸ ಅಂಗಡಿಗಳು ತೆರೆಯುತ್ತಲೇ ಇವೆ. ವ್ಯಾಪಾರದಲ್ಲಿ ಮಲೆಯಾಳಿಗಳೇ ಹೆಚ್ಚು ತೊಡಗಿಸಿಕೊಂಡಿರುವುದು ವಿಶೇಷ. ಉದ್ಯಮಿಗಳು ಯಾವಾಗಲೂ ಜನರ ಬಲಹೀನತೆ ಎಲ್ಲಿದೆ ಎಂಬುದನ್ನು ಸಂಶೋಧಿಸುತ್ತಿರುತ್ತಾರೆ.

ಬಲಹೀನತೆ ಎಲ್ಲಿ ಹೆಚ್ಚಿರುತ್ತದೆ ಅಲ್ಲಿ ಎನ್‌ಕ್ಯಾಷ್ ಮಾಡಿಕೊಳ್ಳುವುದು ಸಾಮಾನ್ಯ. ಭಾರತೀಯರಲ್ಲಿ ಚಿನ್ನದ ಮೇಲೆ ಭಾರಿ ವ್ಯಾಮೋಹ. ಬಂಗಾರವೆಂದರೆ ಭಾವನಾತ್ಮಕ ನಂಟು. ಅದೂ ಒಂದು ಪ್ಲಸ್ ಪಾಯಿಂಟ್. ಕೆಲವು ವರ್ಷಗಳಿಂದ ಕಂಡಂತೆ ಮೊಬೈಲ್ ಅಂಗಡಿಗಳು, ಔಷಧ ಅಂಗಡಿಗಳಲ್ಲಿ ಗ್ರಾಹಕರು ಸದಾ ತುಂಬಿರುತ್ತಾರೆ. ಇವುಗಳಿಗಿಂತಲೂ ಹೆಚ್ಚು ಗ್ರಾಹಕರು ಚಿನ್ನದ ಅಂಗಡಿಗಳಲ್ಲಿ ಇರುತ್ತಾರೆ.

ವಿಜಯನಗರ ಸಾಮ್ರಾಜ್ಯದಲ್ಲಿ ಮುತ್ತು–ರತ್ನ, ಚಿನ್ನ, ವಜ್ರ–ವೈಡೂರ್ಯಗಳನ್ನು ರಸ್ತೆ ಬದಿಗಳಲ್ಲಿ ರಾಶಿ–ರಾಶಿ ಹಾಕಿ ಮಾರುತ್ತಿದ್ದರು ಎಂಬುದನ್ನು ಓದಿದ್ದೇವೆ, ಇವತ್ತಿನ ಚಿನ್ನದ ಬೆಲೆಯನ್ನು ನೋಡಿದರೆ ಹೀಗೂ ಇತ್ತೇ, ಎಂಬ ಅನುಮಾನ ಬರದೇ ಇರದು.

ಬೇಡಿಕೆ ಹಾಗೂ ಏರುತ್ತಿರುವ ದರವನ್ನು ಮನಗಂಡ ಸರ್ಕಾರ ಭೂಗರ್ಭದಲ್ಲಿ ಅಡಗಿರುವ ಚಿನ್ನದ ನಿಕ್ಷೇಪಗಳನ್ನು ಹುಡುಕುವ ಸಾಹಸಕ್ಕೆ ಕೈಹಾಕಿದೆ. ಭೂಗರ್ಭಕ್ಕೆ ಇಟ್ಟ ಕನ್ನ ಅದು ಭವಿಷ್ಯದ ವಿನಾಶಕ್ಕೆ ಕಾರಣ ಅನ್ನುವುದನ್ನು ಮರೆತು ಪಾತಾಳದವರೆಗೂ ಹೋಗಿ ಬಗೆದು ಲೋಹಗಳನ್ನು ಹೊರತೆಗೆಯುವುದು ವೈಜ್ಞಾನಿಕವಾಗಿ ಅದೆಷ್ಟು ಸರಿ ಎಂಬುದನ್ನು ವಿಜ್ಞಾನಿಗಳೇ ಹೇಳಬೇಕು. ಭೂಮಿಯ ಒಡಲನ್ನು ಹೆಗ್ಗಣಗಳಂತೆ ತೋಡಿ ದೊಡ್ಡ ಕಂದಕಗಳನ್ನು ಮಾಡುವುದರಿಂದ ಕೈಯಾರೆ ಮಾಡಿದ ಪಾಪ ಕೃತ್ಯದಿಂದ ಪ್ರಕೃತಿ ವಿಕೋಪಗಳಿಗೆ ತುತ್ತಾಗಬಹುದೆಂಬ ಊಹೆ ನನ್ನದು.

ಶ್ರೀ ಸಿದ್ದೇಶ್ವರಸ್ವಾಮಿಗಳ ಪ್ರವಚನ ಒಂದನ್ನು ಇಲ್ಲಿ ನೆನೆಯಲೇಬೇಕು. ಬಡವ ಒಬ್ಬ ಸಂತರನ್ನು ಭೇಟಿ ಆಗುತ್ತಾನೆ, ಸಂತರು ಕೇಳುತ್ತಾರೆ ಹೇಗಿದ್ದಿಯಪ್ಪಾ, ಎಲ್ಲಾ ಚನ್ನಾಗಿದೆಯಾ ಎಂದು. ಅದಕ್ಕವನು ಏನ್ ಚನ್ನಾಗಿದ್ದೀನಿ ಸ್ವಾಮಿ, ನಾನಂತು ಬಡವ, ಈಗಾಗಲೇ ಎಪ್ಪತ್ತಾಗಿದೆ. ಇಷ್ಟು ವರ್ಷ ಬದುಕಿದ್ದರೂ ನಿರರ್ಥಕ ಜೀವನ ನನ್ನದು? ಅಂದ ಯೋಗಿ ಸಂತರು ಒಂದು ಗಡಿಗೆ ಅವನಿಗೆ ಕೊಡುತ್ತಾರೆ. ಇದು ಏನು ಮಾಡುತ್ತದೆ ಎಂದರೆ ನೀನು ಇದರೊಳಗೆ ಕೈ ಹಾಕಿದಾಗಲೆಲ್ಲಾ ಒಂದು ಬಂಗಾರದ ನಾಣ್ಯ ಸಿಗುತ್ತದೆ. ಯಾವಾಗ ನಿನಗೆ ಸಾಕೆನಿಸುತ್ತದೆ ಆಗ ನನಗೆ ವಾಪಸ್ಸು ತಂದು ಕೊಡು ಎಂದು ಹೇಳುತ್ತಾರೆ.

ಮನೆಗೆ ಓಡಿಹೋಗಿ ಯೋಗಿಗಳು ಹೇಳಿದಂತೆ ಗಡಿಗೆ ಇಟ್ಟು ಕೈ ಮುಗಿದು ಒಳಕ್ಕೆ ಕೈ ಹಾಕಿದ ಒಂದು ಬಂಗಾರದ ನಾಣ್ಯ, ಮತ್ತೇ ಕೈ ಹಾಕಿದ ಮತ್ತೊಂದು ಬಂಗಾರದ ನಾಣ್ಯ, ಹೀಗೆ ಕೈ ಹಾಕಿ ಬಂಗಾರದ ನಾಣ್ಯವನ್ನು ತೆಗೆಯುತ್ತಲೇ ಹೋದ ಮುದುಕ. ಮಧ್ಯರಾತ್ರಿ ಆದರೂ ಊಟ ನಿದ್ರೆ ಬಿಟ್ಟು ತೆಗೆಯುತ್ತಲೇ ಇದ್ದಾನೆ, ತೆಗೆದು.. ತೆಗೆದು.. ರಾಶಿ ಬಂಗಾರವನ್ನು ಗುಡ್ಡೆ ಹಾಕಿದ. ಹೀಗೆಯೇ ಎರಡು ರಾತ್ರಿ ಕಳೆಯಿತು. ನಿದ್ರೆ, ಅನ್ನ, ನೀರಿಲ್ಲ ನಿತ್ರಾಣಗೊಂಡು ಬೆಳಗಾಗುವಷ್ಟರಲ್ಲಿ ಸತ್ತು ಮಲಗಿದ.

ಶರೀರಕ್ಕೆ ಚಿನ್ನ ಬೇಕಿರಲಿಲ್ಲ, ಬೇಕಿದ್ದಿದ್ದು ಅನ್ನ ನೀರು, ಅವನನ್ನು ಬಂಗಾರ ಕೊಲ್ಲಲಿಲ್ಲ ಕೊಂದಿದ್ದು ಅವನಲ್ಲಿ ಇದ್ದ ಆಸೆ. ಇವತ್ತಿನ ಪ್ರಪಂಚದ ಪರಿಸ್ಥಿತಿಯೂ ಹಾಗೆ ಆಗಿದೆ, ಎಲ್ಲರಿಗೂ ಚಿನ್ನದ ಆಸೆ, ಸರ್ಕಾರಕ್ಕೂ ಚಿನ್ನದ ಆಸೆ. ಭೂಮಿಯನ್ನು ಬಗೆದು ತೆಗೆಯುವುದಕ್ಕಾಗಿ ನಿಕ್ಷೇಪಗಳ ಹುಡುಕಾಟಕ್ಕೆ ಹೊರಟಿದೆ. ಒಡಲೊಳಗಿಂದ ಎಷ್ಟೊಂದು ತೆಗೆದು ಮೈಮೇಲೆ ಹಾಕಿಕೊಳ್ಳುವುದು, ದುರಾಸೆಯ ಫಲದಿಂದ ಮುಂದಿನ ಜನಾಂಗವನ್ನು ವಿನಾಶಕ್ಕೆ ತಳ್ಳುವ ದುಸ್ಸಾಹಸ ನಮ್ಮದಲ್ಲವೇ?.

ಟಿವಿ ಜಾಹಿರಾತುಗಳಲ್ಲಿ ನಿತ್ಯವೂ ಚಿನ್ನವನ್ನು ಕೊಳ್ಳಿ ಅನ್ನುವವನೊಬ್ಬ, ಚಿನ್ನವನ್ನು ನಮ್ಮಲ್ಲಿ ಮಾರಿ ಎನ್ನುವ ಮತ್ತೊಬ್ಬ, ಇದನ್ನೇ ಹೇಳಿದ್ದು, ಗ್ರಾಹಕರ ವೀಕ್‌ನೆಸ್ ನಗದು ಮಾಡಿಕೊಳ್ಳುತ್ತಿರುವ ಬಹುದೊಡ್ಡ ಉದ್ಯಮ ಚಿನ್ನದ ವ್ಯಾಪಾರ. ಲೋಹದ ಮೋಹ ನಮ್ಮಲ್ಲಿ ಎಲ್ಲಿಯವರೆಗೆ ಇರುತ್ತೋ.. ಅಲ್ಲಿಯವರೆಗೂ ದರವೂ ಇಳಿಯುವುದಿಲ್ಲ, ದೋಚುವ ಜನರೂ ಕಡಿಮೆ ಆಗುವುದಿಲ್ಲ.



ಮಿರ್ಲೆ ಚಂದ್ರಶೇಖರ
ಹವ್ಯಾಸ ಬರಹಗಾರರು
ಮೊ: 9916129654

ನಿಮ್ಮ ಪತ್ರಗಳು

ಮಾಜಿ ರಾಜ್ಯಪಾಲ ದಿ.ಬಿ.ರಾಚಯ್ಯ ಅಜರಾಮರ



ಮಾನ್ಯರೆ,

ಬಿ.ರಾಚಯ್ಯ ಎಂಬ ಹೆಸರು ಕಣ್ಮುಂದೆ ಬಂದಾಕ್ಷಣ ನೆನಪಾಗುವುದು ಚಾಮರಾಜನಗರ ಜಿಲ್ಲೆಯ ಅವಳಿ ಜಲಾಶಯಗಳಾದ ಸುವರ್ಣಾವತಿ ಮತ್ತು ಚಿಕ್ಕಹೊಳೆ ಜಲಾಶಯ. ಕಾರಣ ಇದರ ನಿರ್ಮಾತೃ, ಚಾಮರಾಜನಗರ ಜಿಲ್ಲೆ ಆಲೂರು ಗ್ರಾಮದವರಾದ, ಹಾಲಿ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಆರ್.ಕೃಷ್ಣಮೂರ್ತಿ ಅವರ ತಂದೆ ದಿ.ಬಿ.ರಾಚಯ್ಯನವರು.

ರಾಚಯ್ಯನವರ ಜೀವಿತಾವಧಿಯಲ್ಲಿ ಅವರು ಅರಣ್ಯ, ಕಂದಾಯ, ಗೃಹ ಸಚಿವರಾಗಿ ಮತ್ತು ಕೇರಳ ರಾಜ್ಯಪಾಲರಾಗಿ ಸೇವೆ ಸಲ್ಲಿಸಿ ಜನಾನುರಾಗಿಯಾಗಿದ್ದರು. ಇವರ ಸೇವೆ ಶಾಶ್ವತ ಮತ್ತು ಅವಿಸ್ಮರಣೀಯ, ಅಭಿನಂದನೀಯ. ಇವರ ಆಡಳಿತದಲ್ಲಿ ಜಿಲ್ಲೆಯ ಜನತೆಗೆ ಅನುಕೂಲವಾಗುವಂತೆ ಜಲಾಶಯ ನಿರ್ಮಿಸಿ ನೀರಾವರಿ ಯೋಜನೆ ಕೈಗೊಂಡರು, ಕಂದಾಯ ಸಚಿವರಾಗಿ ಹಲವಾರು ಕಾಲೋನಿಗಳನ್ನು ನಿರ್ಮಾಣ ಮಾಡಿ ಅಲ್ಲಿ ವಾಸಿಸುವ ಜನರಿಗೆ ನಾಲ್ಕು ಎಕರೆ ಭೂಮಿಯನ್ನು ನೀಡಿದ ಕೀರ್ತಿ ಬಿ.ರಾಚಯ್ಯನವರಿಗೆ ಸಲ್ಲುತ್ತದೆ. ಇಂತಹ ಶಾಶ್ವತ ಕೆಲಸ ಇಂದಿನವರಿಗೆ ಸಾಧ್ಯವಿಲ್ಲ. ಇವರ ಈ ಸಾಧನೆಯ ಫಲವಾಗಿ ಸಾವಿರಾರು ರೈತರು ಬದುಕು ಕಟ್ಟಿಕೊಂಡಿದ್ದಾರೆ. ಈ ಜಲಾಶಯಗಳು ನಿರ್ಮಾಣವಾಗದಿದ್ದರೆ ಕುಡಿಯುವ ಗುಟುಕು ನೀರಿಗೂ ಹಾಹಾಕಾರ ಪಡುವಂತಾಗುತ್ತಿತ್ತು. ಅವರ ಈ ಕಾರ್ಯಕ್ಕೆ ಕೋಟಿ ನಮನಗಳು.

ಬಿ.ರಾಚಯ್ಯನವರು ಕಾಲವಾಗಿ ಇದೇ ತಿಂಗಳ ಹದಿನಾಲ್ಕಕ್ಕೆ ಇಪ್ಪತ್ತಾರು ವರ್ಷವೇ ಸಂದಿದೆ. ಅವರ ಪುಣ್ಯಭೂಮಿ ಆಲೂರಿನ ಅವರ ಸ್ಮಾರಕವಿರುವ ತೋಟದಲ್ಲಿ ಪುಣ್ಯ ಸ್ಮರಣೆಯನ್ನು ಏರ್ಪಾಡು ಮಾಡಲಾಗಿದೆ. ವಿಶೇಷವೆಂದರೆ ಪ್ರತಿ ವರ್ಷ ಈ ಕಾರ್ಯಕ್ರಮಕ್ಕೆ ಸಾವಿರಾರು ಜನರು ಭಾಗವಹಿಸುತ್ತಾರೆ, ಅವರ ಆತ್ಮಕ್ಕೆ ಶಾಂತಿ ಕೋರುತ್ತಾರೆ. ಭೌತಿಕವಾಗಿ ಅವರು ನಮ್ಮೊಂದಿಗೆ ಇಲ್ಲದಿದ್ದರೂ ಬಿ.ರಾಚಯ್ಯನವರು ಅಜರಾಮರ.

–ದಡದಹಳ್ಳಿ ರಮೇಶ್, ಚಂದಕವಾಡಿ, ಚಾಮರಾಜನಗರ ಜಿಲ್ಲೆ

ಅಪಘಾತಕ್ಕೆ ಆಹ್ವಾನ ನೀಡುತ್ತಿರುವ ಗುಂಡಿಗಳು

ಮಾನ್ಯರೆ,



ಮೈಸೂರಿನ ಬಹುತೇಕ ಎಲ್ಲ ಬಡಾವಣೆಗಳಲ್ಲೂ, ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಮಂಡಳಿಯವರು (ಚೆಸ್ಕಾಂ), ಅಂಡರ್ ಗ್ರೌಂಡ್ ಕೇಬಲ್ ಅನ್ನು ಅಳಡಿಸುತ್ತಿದ್ದು, ಮುಖ್ಯ ರಸ್ತೆಗಳಲ್ಲಿ ಆಳುದ್ದದ ಗುಂಡಿಗಳನ್ನು ತೆಗೆದು, ಪೈಪ್‌ಗಳನ್ನು ಅನಕೊಂಡಗಳಂತೆ ರಸ್ತೆಗೆ ಹಾಕಿ, ಗುಂಡಿಗಳನ್ನು ಸರಿಯಾಗಿ ಮುಚ್ಚದೇ ಇರುವುದನ್ನು ಮೈಸೂರಿನ ಬಹುತೇಕ ಬಡಾವಣೆಗಳಲ್ಲಿ ಕಾಣಬಹುದು. ಇದು ರಾತ್ರಿ ವೇಳೆ ಓಡಾಡುವ ಸಾರ್ವಜನಿಕರಿಗೆ ಮರಣ ಶಾಸನ ಬರೆದಂತೆ. ಕಾಮಗಾರಿ ನಡೆಸುತ್ತಿರುವ ಅಧಿಕಾರಿಗಳಿಗೆ ಈ ಗುಂಡಿಗಳ ಅಕ್ಕ– ಪಕ್ಕದಲ್ಲಿ ಕೆಂಪು ಬಣ್ಣದ ಟೇಪ್‌ಗಳನ್ನಾದರೂ (ಕಾಷನ್ ಟೇಪ್) ಹಾಕಬೇಕೆಂಬ ಕನಿಷ್ಠ ತಿಳುವಳಿಕೆಯೂ ಇಲ್ಲವೇ? ಈ ಗುಂಡಿಗಳಿಗೆ ಬಿದ್ದು ಯಾರಾದರೂ ಪ್ರಾಣ ಕಳೆದುಕೊಂಡರೇ ಅದಕ್ಕೆ ಚೆಸ್ಕಾಂ ಅಧಿಕಾರಿಗಳೇ ಹೊಣೆಗಾರರಾಗಬೇಕಾಗುತ್ತದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಕನ್ನಡ ಕಾವ್ಯಲೋಕಕ್ಕೆ ಜೀವ ಮಿಡಿಯುತ್ತಿದ್ದ ಕವಿ ಕೊ.ನಾ.ಪುರುಷೋತ್ತಮ ನೆನಪು ಮಾತ್ರ

ಮಾನ್ಯರೆ,



ಕವಿ, ಶಿಕ್ಷಕ, ಶ್ರೀರಂಗಪಟ್ಟಣ ತಾಲೂಕು, ಸಬ್ಬನಕುಪ್ಪೆ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ. ಚುಟುಕು ಕವಿತೆಗಳನ್ನು ರಚಿಸಿ, ಆ ಮೂಲಕ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಸಹೃದಯರ ಮನಸ್ಸಿನಲ್ಲಿ ಕೊ.ನಾ.ಪು ಎಂದು ಹೆಸರುವಾಸಿ ಯಾಗಿದ್ದ ಕೊಡಗಹಳ್ಳಿ ಪುರುಷೋತ್ತಮ್ ಅವರ ಅಕಾಲಿಕ ನಿಧನ ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ.


ಕನ್ನಡ ಸಾರಸ್ವತ ಲೋಕಕ್ಕೆ 25ಕ್ಕೂ ಹೆಚ್ಚು ಕವನ ಸಂಕಲನಗಳನ್ನು ಸಮರ್ಪಿಸಿದ ಕೀರ್ತಿ ಇವರದಾಗಿತ್ತು. ಇವರು ರಚಿಸಿದ ಹನಿ–ಗವನ, ಲೊಳ ಲೊಟ್ಟೆ, ಪಿಸುಮಾತು, ಕಾವ್ಯ ಡಿಂಡಿಮ, ಪ್ರಾಯ ಪಿಸುಗುಟ್ಟಿದಾಗ, ನಡೆದಷ್ಟು ದಾರಿ, ಒಲುಮೆ ವಿಸ್ಮಯ, ಐನೋರ ಮಗ ಸಹೃದಯ ಮನಸ್ಸನ್ನು ಆಕರ್ಷಿಸಿದ್ದವು.

ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿ, ಅತ್ಯುತ್ತಮ ಶಾಲಾ ಶಿಕ್ಷಕ ಪ್ರಶಸ್ತಿ, ಹೊಯ್ಸಳ ಕನ್ನಡ ಪ್ರಶಸ್ತಿ, ತಾಲೂಕು ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಜನಪ್ರಿಯರಾಗಿದ್ದರು.

ಸದಾ ಮನಸ್ಸಿನಲ್ಲಿ ಕಾವ್ಯದ ಚಿಂತನೆಯನ್ನು ಗುನುಗಿಸುತ್ತಾ, ಅದನ್ನೇ ಬರಹದ ರೂಪದಲ್ಲಿ ದಾಖಲಿಸುತ್ತಾ, ನಡೆದವರು ಪುರುಷೋತ್ತಮ ಅವರು. ಸಮಾಜದ ಅಂಕು–ಡೊಂಕುಗಳನ್ನು ಕವನಗಳ ಮೂಲಕ ಅಭಿವ್ಯಕ್ತಿಸುತ್ತಾ, ಪ್ರೇಮ, ಕಾಮ ಹಾಗೂ ದಾಂಪತ್ಯದ ಸರಸ ಸಲ್ಲಾಪಗಳ ಮೇಳದೊಂದಿಗೆ ಅವರು ಕವನಗಳಲ್ಲಿ ದಾಖಲಿಸುತ್ತಿದುದ್ದನ್ನು ನಾವು ಎಂದಿಗೂ ಮರೆಯುವಂತಿಲ್ಲ. ಪುರುಷೋತ್ತಮ ಅವರ ಗೆಳೆತನ ಅಚ್ಚಳಿಯದೆ ಉಳಿದಿರುವ ಸದಾ ನೆನಪಿಸುವ ಸಂಗತಿ ಎಂದರೆ ಕಳೆದ 30 ವರ್ಷಗಳ ಹಿಂದೆ ಸರ್ಕಾರಿ ಶಾಲಾ ಶಿಕ್ಷಕರಾಗಿ ಸೇವೆಗೆ ಸೇರಿದ ಮೊದಲ ತಿಂಗಳ ಸಂಬಳದಲ್ಲಿ ಮೈಸೂರಿನ ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ನಲ್ಲಿದ್ದ ಸೆಕೆಂಡ್ ಹ್ಯಾಂಡ್ ಅಂಗಡಿಯಲ್ಲಿ ಅಂದಿನ ಅನೇಕ ಹಳೆಯ ಪುಸ್ತಕಗಳನ್ನು, ವಾರಪತ್ರಿಕೆಗಳಾದ ಸುಧಾ, ಮಯೂರ, ತರಂಗ ಕೊಂಡುಕೊಂಡು ತಲೆಮೇಲೆ ಪುಸ್ತಕದ ಚೀಲವನ್ನು ಹೊತ್ತುಕೊಂಡು ಜೇಬಿನಲ್ಲಿ ಇದ್ದ ದುಡ್ಡೆಲ್ಲವನ್ನು ಖಾಲಿ ಮಾಡಿಕೊಂಡು ಕೊನೆಗೆ ದುಡ್ಡಿಲ್ಲದೆ, ಊರಿಗೆ ಹೋಗಲು ಸಾಧ್ಯವಾಗದೆ ತಾತ್ಕಾಲಿಕವಾಗಿ ಅನಾಥಾಲಯದಲ್ಲಿ ಊಟ ಮಾಡಿ ಬದುಕು ಸಾಗಿಸುತ್ತಿದ್ದನ್ನು ಇವರ ಸಾಹಿತ್ಯ ಪ್ರೀತಿಗೆ ಕೈಗನ್ನಡಿಯಾಗಿದೆ. ಇವರ ಪುಸ್ತಕಗಳನ್ನು ಓದುವ ಮೂಲಕ ಕನ್ನಡಾಭಿಮಾನಿಗಳು, ಸಾಹಿತ್ಯಾಸಕ್ತರು ಶ್ರದ್ಧಾಂಜಲಿ ಸಲ್ಲಿಸಿದರೆ ಬದುಕು ಸಾರ್ಥಕ ಎನಿಸುತ್ತದೆ.

–ರಾಜೇಂದ್ರ ಪ್ರಸಾದ್ ಹೊನ್ನಲಗೆರೆ, ಮೈಸೂರು.

ಫೆ.8, ವಿಶೇಷ ಸ್ವಾತಿ ಪೂಜೆ



ಮೈಸೂರು, ಫೆ.6– ನಗರದ ಕಾಳಿದಾಸ ರಸ್ತೆಯಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಫೆ.8ರಂದು ಭಾನುವಾರ ಸ್ವಾತಿ ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ. ಸಂಜೆ 7.30ಕ್ಕೆ ಪ್ರಾಕಾರೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಆಡಳಿತಾಧಿಕಾರಿ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್) ತಿಳಿಸಿದ್ದಾರೆ.

ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಕೋರಿದ್ದಾರೆ. ನಾಡಿನ ಸಮಸ್ತ ಜನತೆಗೆ ಮಹಾಶಿವರಾತ್ರಿ ಹಬ್ಬದ ಶುಭಾಶಯಗಳನ್ನು ತಿಳಿಸಿದ್ದಾರೆ.

ಮಾಹಿತಿಗೆ ಮೊ.ನಂ.9342188323, 7598832271 ಸಂಪರ್ಕಿಸಬಹುದು.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು,ಫೆ.6– ವಿ.ವಿ ಮೊಹಲ್ಲಾ ಉಪವಿಭಾಗ ವ್ಯಾಪ್ತಿ ಕೆಲಸದ ನಿಮಿತ್ತ ಫೆ.7 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿ.ವಿ ಮೊಹಲ್ಲಾ 4ನೇ ಮುಖ್ಯರಸ್ತೆ, 5ನೇ ಮುಖ್ಯರಸ್ತೆ, ಗೋಕುಲಂ ಮುಖ್ಯರಸ್ತೆ, ನಳಪಾಕ್ ಹೋಟೆಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಬಿಹಾರ ಚುನಾವಣಾ ಫಲಿತಾಂಶ ಪ್ರಶ್ನಿಸಿದ್ದ ಪ್ರಶಾಂತ್ ಕಿಶೋರ್ ಅರ್ಜಿ ವಜಾಗೊಳಿಸಿದ 'ಸುಪ್ರೀಂ'

ನವದೆಹಲಿ: ಕಳೆದ ವರ್ಷ ನವೆಂಬರ್‌ನಲ್ಲಿ ನಡೆದ ಬಿಹಾರ ವಿಧಾನಸಭಾ ಚುನಾವಣೆ ಫಲಿತಾಂಶವನ್ನು ಪ್ರಶ್ನಿಸುವುದರೊಂದಿಗೆ ಮರುಚುನಾವಣೆಗೆ ಸೂಚನೆ ಕೋರಿ ಚುನಾವಣಾ ತಂತ್ರಜ್ಞ ಪ್ರಶಾಂತ್ ಕಿಶೋರ್ ನೇತೃತ್ವದ ಜನ್ ಸುರಾಜ್ ಪಕ್ಷ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಫೆ6 ವಜಾಗೊಳಿಸಿದೆ

ಅರ್ಜಿಯನ್ನು ಪರಿಗಣಿಸಲು ನಿರಾಕರಿಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಪೀಠವು, ಪಕ್ಷದ ಚುನಾವಣಾ ಸೋಲಿನ ಬಗ್ಗೆ ತೀಕ್ಷ್ಣವಾದ ಟೀಕೆ ಮಾಡುತ್ತಾ, ಜನರು ನಿಮ್ಮನ್ನು ಚುನಾವಣೆಯಲ್ಲಿ ತಿರಸ್ಕರಿಸಿದ್ದಾರೆ, ಈಗ ನೀವು ಪ್ರಚಾರ ಪಡೆಯಲು ಈ ನ್ಯಾಯಾಂಗ ವೇದಿಕೆಯನ್ನು ಬಳಸುತ್ತಿದ್ದೀರಾ ಎಂದು ಗರಂ ಆಗಿದ್ದಾರೆ. ವಿಧಿ 32ರ ಅಡಿಯಲ್ಲಿ ಈ ವಿಷಯವನ್ನು ವಿಚಾರಣೆ ಮಾಡಲು ಪೀಠ ನಿರಾಕರಿಸಿ, ಅರ್ಜಿದಾರರು ಬಿಹಾರ ಹೈಕೋರ್ಟ್ ಅನ್ನು ಸಂಪರ್ಕಿಸುವಂತೆ ಹೇಳಿದೆ.

ಆಡಳಿತಾರೂಢ ಜನತಾದಳ(ಯುನೈಟೆಡ್) ಮತ್ತು ಭಾರತೀಯ ಜನತಾ ಪಕ್ಷದ ಮೈತ್ರಿಕೂಟವು ಮಾದರಿ ನೀತಿ ಸಂಹಿತೆಯನ್ನು ಉಲ್ಲಂಘನೆ ಮಾಡಿ ಗೆದ್ದಿರುವ ಕಾರಣ, ಚುನಾವಣಾ ಫಲಿತಾಂಶಗಳನ್ನು ಅಸಿಂಧು ಎಂದು ಘೋಷಿಸಲು ಪ್ರಶಾಂತ್ ಕಿಶೋರ್ ನೇತೃತ್ವದ ಜನ್ ಸುರಾಜ್ ಅರ್ಜಿಯಲ್ಲಿ ಕೋರಿತ್ತು.

ಮಹಾಜನ ಕಾಲೇಜಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಕಾರ್ಯಾಗಾರ



ಮಹಾಜನ ವಿದ್ಯಾಸಂಸ್ಥೆ ಗೌ.ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್ ಕಾರ್ಯಕ್ರಮ ಉದ್ಘಾಟಿಸಿದರು.


ಮೈಸೂರು, ಫೆ.6– ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತಿಹಾಸ ವಿಭಾಗ, ಎಂಟ್ರಿ ಟು ಸರ್ವಿಸ್, ಐಕ್ಯೂಎಸಿ ಹಾಗೂ ಗುರುದೇವ್ ಅಕಾಡೆಮಿ, ಧಾರವಾಡ ಇವರ ಸಹಯೋಗದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಯಶಸ್ಸಿಗೆ ಮಾರ್ಗಸೂಚಿಗಳು ಎಂಬ ವಿಷಯ ಕುರಿತು ಒಂದು ದಿನದ ಕಾರ್ಯಾಗಾರ ಆಯೋಜಿಸಲಾಗಿತ್ತು.

ಮಹಾಜನ ವಿದ್ಯಾಸಂಸ್ಥೆ ಗೌ.ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಪದವಿಯ ಜೊತೆಗೆ ಭವಿಷ್ಯದಲ್ಲಿ ಸುಂದರ ಬದುಕನ್ನು ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕೆಂದು ಸಲಹೆ ನೀಡಿದರು. ಸ್ಪರ್ಧಾತ್ಮಕ ಪರೀಕ್ಷೆಗಳ ಯಶಸ್ಸಿನಲ್ಲಿ ಕಠಿಣ ಪರಿಶ್ರಮ, ಸಮಯ ಪಾಲನೆ ಹಾಗೂ ಸಂಬಂಧಿಸಿದ ಪಠ್ಯಕ್ರಮವನ್ನು ಅತ್ಯಂತ ಶ್ರದ್ಧೆಯಿಂದ ಆಳವಾಗಿ ಅಧ್ಯಯನ ನಡೆಸಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ವಿದ್ಯಾರ್ಥಿಗಳು ಓದಿನ ಜೊತೆಗೆ ಸ್ಪರ್ಧಾತ್ಮಕ ಮನೋಭಾವನೆಯನ್ನು ಹೊಂದಿ, ಪ್ರಬಲ ಪ್ರತಿಸ್ಪರ್ಧೆಯಲ್ಲಿ ಯಶಸ್ಸಿನ ಗುರಿ ತಲುಪಬೇಕು. ಕಠಿಣ ಪರಿಶ್ರಮವಿಲ್ಲದೇ ಫಲವಿಲ್ಲ. ಈ ದಿನದ ಕಾರ್ಯಾಗಾರದಲ್ಲಿ ಭಾಗವಹಿಸಿರುವ ವಿದ್ಯಾರ್ಥಿಗಳ ದೊಡ್ಡ ಸಂಖ್ಯೆಯು ಸ್ಪರ್ಧಾತ್ಮಕ ಪರೀಕ್ಷೆಗಳ ಹಾದಿಯಲ್ಲಿ ಒಳ್ಳೆಯ ಬದಲಾವಣೆ ಮತ್ತು ಬೆಳವಣಿಗೆ. ಕೇವಲ ಪದವಿಯ ಅಂಕಗಳಿಂದ ಬದುಕನ್ನು ಕಟ್ಟಿಕೊಳ್ಳಲು, ಭವಿಷ್ಯವನ್ನು ರೂಪಿಸಿಕೊಳ್ಳುವುದು ಸಾಧ್ಯವಿಲ್ಲ. ವಿದ್ಯಾರ್ಥಿ ದೆಸೆಯಲ್ಲಿ ಇಂತಹ ನಾಗರಿಕ ಸೇವಾ ಪರೀಕ್ಷೆಗಳು ಹಾಗೂ ಬ್ಯಾಂಕಿಂಗ್ ಪರೀಕ್ಷೆಗಳ ಕಡೆ ಹೆಚ್ಚು ಗಮನಹರಿಸಬೇಕು. ಉನ್ನತ ಹುದ್ದೆಯನ್ನು ಅಲಂಕರಿಸುವ ಮೂಲಕ ಸಮಾಜಕ್ಕೆ ತಮ್ಮ ಅಮೂಲ್ಯ ಸೇವೆ ಹಾಗೂ ಕೊಡುಗೆ ನೀಡಬೇಕೆಂದು ಸಲಹೆ ನೀಡಿದರು.

ಧಾರವಾಡದ ಗುರುದೇವ್ ಅಕಾಡೆಮಿಯ ಆಡಳಿತಾಧಿಕಾರಿ ಶಂಕರ್ ಆರ್.ಹೆಚ್, ಕಾಲೇಜಿನ ಶೈಕ್ಷಣಿಕ ಸಲಹೆಗಾರ ಎಸ್.ಆರ್. ರಮೇಶ್, ಡಾ. ಶ್ರೀಧರ ಹೆಚ್ ಮತ್ತಿತರರು ಉಪಸ್ಥಿತರಿದ್ದರು.

ವ್ಯಂಗ್ಯಚಿತ್ರಗಳ ಸಿಂಹಾವಲೋಕನ ಕೃತಿ ಅಂಕೇಗೌಡರ ಗ್ರಂಥಾಲಯಕ್ಕೆ ಸೇರ್ಪಡೆ



ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಆಯೋಜಿಸಿದ್ದ ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭದಲ್ಲಿ ಪುಸ್ತಕ ಪರಿಚಾರಕ ಹಾಗೂ ಪದ್ಮಶ್ರೀ ಪುರಸ್ಕೃತರಾದ ಎಂ. ಅಂಕೇಗೌಡ ಅವರಿಗೆ ಖ್ಯಾತ ವ್ಯಂಗ್ಯಚಿತ್ರಕಾರ ಹಾಗೂ ಫುಲ್‌ಬ್ರೈಟ್ ಪ್ರಶಸ್ತಿ ಪುರಸ್ಕೃತ ಎಂ.ಬಿ. ನಾಗೇಂದ್ರ ಬಾಬು ಅವರು ತಮ್ಮ 'ವ್ಯಂಗ್ಯಚಿತ್ರಗಳ ಸಿಂಹಾವಲೋಕನ' ಕೃತಿಯನ್ನು ನೀಡಿದರು. ಇದರಿಂದ ನಾಗೇಂದ್ರಬಾಬು ಅವರ 'ವ್ಯಂಗ್ಯಚಿತ್ರಗಳ ಸಿಂಹಾವಲೋಕನ' ಕೃತಿ ಅಂಕೇಗೌಡರ ಗ್ರಂಥಾಲಯಕ್ಕೆ ಸೇರ್ಪಡೆಯಾಯಿತು.

ಇಂದು ವಿದ್ಯುತ್ ಸುರಕ್ಷತಾ ಅರಿವು ಸಪ್ತಾಹ ಕಾರ್ಯಕ್ರಮ

ಮೈಸೂರು,ಫೆ.6– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವತಿಯಿಂದ ಫೆ.7 ರಂದು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದನ್ವಯ ಬೆಳಗ್ಗೆ 11 ಗಂಟೆಗೆ ಹೆಚ್.ಡಿ.ಕೋಟೆ ಉಪವಿಭಾಗದ ಕಛೇರಿ ಆವರಣದಲ್ಲಿ 'ವಿದ್ಯುತ್ ಸೇವೆಗಳ ಹಾಗೂ ವಿದ್ಯುತ್ ಸುರಕ್ಷತಾ ಅರಿವು ಸಪ್ತಾಹ ಕಾರ್ಯಕ್ರಮ' ಹಮ್ಮಿಕೊಂಡಿರುವುದರಿಂದ ಉಪವಿಭಾಗ ವ್ಯಾಪ್ತಿಯ ವಿದ್ಯುತ್ ಗ್ರಾಹಕರು, ಸಾರ್ವಜನಿಕರು ಈ ಕಾರ್ಯಕ್ರಮಕ್ಕೆ ಹಾಜರಾಗಿ ಸದರಿ ಕಾರ್ಯಕ್ರಮ ಸದುಪಯೋಗ ಪಡಿಸಿಕೊಳ್ಳಬೇಕೆಂದು ಹೆಚ್.ಡಿ.ಕೋಟೆ ಚಾ.ವಿ.ಸ.ನಿ.ನಿ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನಂಜನಗೂಡು ರಸ್ತೆಯಲ್ಲಿ 38 ಗುಂಟೆ ಸರ್ಕಾರಿ ಭೂಮಿ ಅತಿಕ್ರಮಿಸಿ ಪಾರ್ಕಿಂಗ್ ದಂಧೆ

ತಹಶೀಲ್ದಾರ್ ನೇತೃತ್ವದಲ್ಲಿ ಯಶಸ್ವಿ ತೆರವು ಕಾರ್ಯಾಚರಣೆ; 25 ಕೋಟಿ ಮೌಲ್ಯದ ಆಸ್ತಿ ಸರ್ಕಾರದ ವಶಕ್ಕೆ



ನಂಜನಗೂಡು ರಸ್ತೆಯಲ್ಲಿ ಸರ್ಕಾರಿ ಭೂಮಿ ತೆರವು ಕಾರ್ಯಾಚರಣೆ.

25 ಕೋಟಿ ರೂ. ಮೌಲ್ಯದ ಸರ್ಕಾರಿ ಆಸ್ತಿ ರಕ್ಷಣೆ

ವಿದ್ಯಾರ್ಥಿನಿಲಯ ನಿರ್ಮಾಣಕ್ಕೆ ಮೀಸಲಿಟ್ಟಿದ್ದ 38 ಗುಂಟೆ ಭೂಮಿಯನ್ನು ಖಾಸಗಿ ವ್ಯಕ್ತಿಗಳು ಅತಿಕ್ರಮಿಸಿಕೊಂಡು ಅಕ್ರಮ ಪಾರ್ಕಿಂಗ್ ದಂಧೆ ನಡೆಸುತ್ತಿದ್ದರು. ಇಂದು ಬೆಳಗ್ಗೆ ಕಾರ್ಯಾಚರಣೆ ಮಾಡಿ, ಅತಿಕ್ರಮಣ ತೆರವು ಮಾಡಲಾಗಿದೆ. ಒಟ್ಟು 25 ಕೋಟಿ ರೂ. ಮೌಲ್ಯದ ಸರ್ಕಾರಿ ಆಸ್ತಿ ವಶಕ್ಕೆ ಪಡೆದು, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಸುಪರ್ದಿಗೆ ನೀಡಿ, ಅತಿಕ್ರಮ ಪ್ರವೇಶ ಮಾಡದಂತೆ ಫಲಕ ಅಳವಡಿಸಲಾಗಿದೆ.

- ಕೆ.ಎಂ.ಮಹೇಶ್ ಕುಮಾರ್, ತಹಶೀಲ್ದಾರ್, ಮೈಸೂರು

ಮೈಸೂರು, ಫೆ.6(ಎಂಟಿವೈ)- ಖಾಸಗಿ ವ್ಯಕ್ತಿಗಳು ಅತಿಕ್ರಮಿಸಿ ಅಕ್ರಮ ಪಾರ್ಕಿಂಗ್ ದಂಧೆ ನಡೆಸುತ್ತಿದ್ದ 25 ಕೋಟಿ ಮೌಲ್ಯದ 38 ಗುಂಟೆ ಸರ್ಕಾರಿ ಜಾಗವನ್ನು ತಹಶೀಲ್ದಾರ್ ನೇತೃತ್ವದಲ್ಲಿ ಶುಕ್ರವಾರ ಬೆಳಗ್ಗೆ ಕಾರ್ಯಾಚರಣೆ ನಡೆಸಿ ವಶಪಡಿಸಿಕೊಳ್ಳಲಾಯಿತು.

ಮೈಸೂರು-ನಂಜನಗೂಡು ಮುಖ್ಯರಸ್ತೆಯಲ್ಲಿ ಜೆಎಸ್‌ಎಸ್ ಕಾಲೇಜು ಮುಂಭಾಗದಲ್ಲಿರುವ ಈ ಸರ್ಕಾರಿ ಭೂಮಿಯನ್ನು ಕೆಲವು ಖಾಸಗಿ ವ್ಯಕ್ತಿಗಳು ಕಳೆದ 25 ವರ್ಷಗಳಿಂದ ಅತಿಕ್ರಮಿಸಿಕೊಂಡು ದಂಧೆ ನಡೆಸುತ್ತಿದ್ದರು. ಮೈಸೂರು ಸರ್ವೆ ನಂ.87ರಲ್ಲಿ 38 ಗುಂಟೆ ಜಮೀನನ್ನು ಕೆಲವರು ಸಮವಾಗಿ ಹಂಚಿಕೆ ಮಾಡಿಕೊಂಡಿದ್ದರು. ಇತ್ತೀಚೆಗೆ ಅಪರ ಜಿಲ್ಲಾಧಿಕಾರಿ ಡಾ. ಪಿ.ಶಿವರಾಜ್ ಅಧ್ಯಕ್ಷತೆಯಲ್ಲಿ ನಡೆದ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸರ್ಕಾರಿ ಭೂಮಿ ಒತ್ತುವರಿ ತೆರವಿಗೆ ತ್ವರಿತಗತಿಯಲ್ಲಿ ಕ್ರಮ ಕೈಗೊಳ್ಳುವಂತೆ ಸೂಚಿಸ ಲಾಗಿತ್ತು. ಈ ಹಿನ್ನೆಲೆಯಲ್ಲಿ ಮೈಸೂರು ತಹಶೀಲ್ದಾರ್ ಕೆ.ಎಂ.ಮಹೇಶ್‌ಕುಮಾರ್ ನೇತೃತ್ವದಲ್ಲಿ ಶುಕ್ರವಾರ ಬೆಳಗ್ಗೆ ಕಾರ್ಯಾಚರಣೆ ನಡೆಸಲಾಯಿತು.

25 ಕೋಟಿ ರೂ. ಮೌಲ್ಯದ ಆಸ್ತಿ: ಇಂದು ಬೆಳಗ್ಗೆ ಒತ್ತುವರಿ ತೆರವು ಕಾರ್ಯಾಚರಣೆ ಮೂಲಕ ವಶಪಡಿಸಿಕೊಂಡ 38 ಗುಂಟೆ ಭೂಮಿ 25 ಕೋಟಿ ರೂ.ಗೂ ಹೆಚ್ಚು ಬೆಲೆಬಾಳು ತ್ತದೆ. ಈ ಹಿಂದಿನಿಂದಲೂ ಸರ್ಕಾರಿ ಆಸ್ತಿ ಎಂದು ದಾಖಲೆಗಳಲ್ಲಿ ಇತ್ತು.

ಅಕ್ರಮ ಪಾರ್ಕಿಂಗ್ ದಂಧೆ: ಹಿಂದುಳಿದ ವರ್ಗದ ವಿದ್ಯಾರ್ಥಿನಿಲಯ ನಿರ್ಮಾಣಕ್ಕಾಗಿ ಮೀಸಲಿಟ್ಟಿದ್ದ ಈ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದವರು ಕಳೆದ ಹಲವು ವರ್ಷಗಳಿಂದ ಅಕ್ರಮವಾಗಿ ವಾಹನಗಳ ಪಾರ್ಕಿಂಗ್ ದಂಧೆ ನಡೆಸುತ್ತಿದ್ದರು. ಮೈಸೂರಿಂದ ಚಾಮರಾಜನಗರ, ಗುಂಡ್ಲುಪೇಟೆ, ನಂಜನಗೂಡು ಸೇರಿದಂತೆ ವಿವಿಧೆಡೆ ಹೋಗುವವರು ತಮ್ಮ ವಾಹನಗಳನ್ನು ಆ ಸ್ಥಳದಲ್ಲಿ ನಿಲ್ಲಿಸಿ, ಸಾರಿಗೆ ಬಸ್‌ಗಳಲ್ಲಿ ತೆರಳುತ್ತಿದ್ದರು. ಪ್ರತಿದಿನ 200ಕ್ಕೂ ಹೆಚ್ಚು ದ್ವಿಚಕ್ರ ವಾಹನ, ಹತ್ತಾರು ಆಟೋರಿಕ್ಷಾ, ಕಾರುಗಳ ನಿಲ್ಲಿಸಿ ಸಾರಿಗೆ ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದರು. ಹಾಗಾಗಿ ಪ್ರತಿದಿನ ಸಾವಿರಾರು ರೂ. ಸಂಪಾದನೆಯಾಗುತ್ತಿತ್ತು

ಮತ್ತೊಂದೆಡೆ ಕ್ಯಾಂಟೀನ್: ಈ ಸರ್ಕಾರಿ ಸ್ಥಳದಲ್ಲಿ ಒಂದು ಕಡೆ ಪಾರ್ಕಿಂಗ್ ದಂಧೆ ನಡೆಸುತ್ತಿದ್ದರೆ, ಮತ್ತೊಂದು ಕಡೆ ಕ್ಯಾಂಟೀನ್ ನಡೆಸಲಾಗುತ್ತಿತ್ತು. ವಿವಿಧೆಡೆಯಿಂದ ಬರುತ್ತಿದ್ದ ಗ್ರಾಮೀಣ ಪ್ರದೇಶದ ಜನ ಕ್ಯಾಂಟೀನ್ ಅವಲಂಭಿಸಿದ್ದರು. ಅದರಲ್ಲೂ ಕೂಲಿ ಕಾರ್ಮಿಕರು, ಆಟೋ ಚಾಲಕರು ಸೇರಿದಂತೆ ಸ್ಥಳೀಯರು ತಿಂಡಿ, ಟೀ, ಕಾಫಿ ಕುಡಿಯಲು ಎಡತಾಕುತ್ತಿದ್ದರು.

ವಿದ್ಯಾರ್ಥಿನಿಲಯಕ್ಕೆ ಮಂಜೂರಾದ ಜಾಗ: 2010ರ ಆ.30ರಂದು ಅಂದಿನ ಜಿಲ್ಲಾಧಿಕಾರಿಗಳು, ಸರ್ವೆ ನಂ.87 ರಲ್ಲಿ 38 ಗುಂಟೆ ಭೂಮಿಯನ್ನು ಮೆಟ್ರಿಕ್ ನಂತರದ ಬಾಲಕಿಯರ/ಬಾಲಕರ ವಿದ್ಯಾರ್ಥಿನಿಲಯ ನಿರ್ಮಾಣ ಕ್ಕಾಗಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಗೆ ಮಂಜೂರು ಮಾಡಲಾಗಿತ್ತು.

ಭಾಗ ಮಾಡಿಕೊಂಡಿದ್ದರು: ಈ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದ ಸಹೋದರರು ಇದನ್ನು ಭಾಗ ಮಾಡಿಕೊಂಡು ನಾನಾ ವಹಿವಾಟು ನಡೆಸುತ್ತಿದ್ದರು.


ಒತ್ತುವರಿ ತೆರವಿಗೆ ವಿರೋಧ: ಒತ್ತುವರಿ ತೆರವಿಗೆ ತಹಶೀಲ್ದಾರ್ ಕೆ.ಎಂ.ಮಹೇಶ್‌ಕುಮಾರ್ ನೇತೃತ್ವದಲ್ಲಿ ಕಂದಾಯಾಧಿಕಾರಿಗಳು ಮುಂದಾಗುತ್ತಿದ್ದಂತೆ ಖಾಸಗಿ ವ್ಯಕ್ತಿಗಳು ವಿರೋಧ ವ್ಯಕ್ತಪಡಿಸಿ, ದಾಖಲೆ ತೋರಿಸಲು ಮುಂದಾದರು. ಆದರೆ, ತಹಶೀಲ್ದಾರ್ ಮಹೇಶ್ ಕುಮಾರ್, ಸದರಿ ಜಾಗ ಸರ್ಕಾರಿ ಸ್ವತ್ತಾಗಿದೆ. ಈ ಭೂಮಿ ಮೇಲೆ ನಿಮಗೆ ಯಾವ ಹಕ್ಕು ಇಲ್ಲ. ಕಾರ್ಯಾಚರಣೆಗೆ ಅಡ್ಡಿ ಪಡಿಸಿದರೆ ಕಾನೂನು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು. ನಂತರ ಕಾರ್ಯಾಚರಣೆ ಸುಸೂತ್ರವಾಗಿ ಮುಂದುವರೆಯಿತು.

ವಿದ್ಯುತ್ ಸಂಪರ್ಕ ಕಡಿತ, ಸಿಲಿಂಡರ್ ಸ್ಥಳಾಂತರ: ತೆರವು ಕಾರ್ಯಾಚರಣೆ ಆರಂಭಿಸುವ ಮುನ್ನ ಅಕ್ರಮವಾಗಿ ಕ್ಯಾಂಟೀನ್‌ಗೆ ಪಡೆದಿದ್ದ ವಿದ್ಯುತ್ ಸಂಪರ್ಕ ಕಡಿತಗೊಳಿಸ ಲಾಯಿತು. ಚೆಸ್ಕಾಂ ಸಿಬ್ಬಂದಿ ಸ್ಥಳಕ್ಕೆ ಬಂದು ವಿದ್ಯುತ್ ಸಂಪರ್ಕ ಕಡಿತಗೊಳಿಸಿ, ಮೀಟರ್‌ಗಳನ್ನು ವಶಕ್ಕೆ ಪಡೆದರು. ಕ್ಯಾಂಟೀನ್ ಒಳಗೆ ಅಡುಗೆ ತಯಾರಿಗೆ ಬಳಸುತ್ತಿದ್ದ ಸಿಲಿಂಡರ್‌ಗಳನ್ನು ಸುರಕ್ಷಿತವಾಗಿ ಹೊರಗೆ ಸಾಗಿಸಿ, ಕಾರ್ಯಾಚರಣೆ ಮುಂದುವರೆಸಲಾಯಿತು.

ಪಾರ್ಕಿಂಗ್ ಮಾಡಲು ಬಂದವರನ್ನು ವಾಪಸ್ ಕಳಿಸಿದರು: ತೆರವು ಕಾರ್ಯಾಚರಣೆ ಆರಂಭಿಸುವ ವೇಳೆ ಗಾಗಲೇ ಹಲವರು ವಾಹನ ನಿಲುಗಡೆ ಮಾಡಲು ಆಗಮಿಸಿದರು. ಆದರೆ ಅಧಿಕಾರಿಗಳು ವಾಹನ ನಿಲ್ಲಿಸದಂತೆ ಸೂಚನೆ ನೀಡಿ ವಾಪಸ್ ಕಳುಹಿಸಿದರು. ಆದರೂ, ಕಳೆದ ಕೆಲವು ದಿನದ ಹಿಂದೆ ನಿಲ್ಲಿಸಿರುವ 20ಕ್ಕೂ ಹೆಚ್ಚು ದ್ವಿಚಕ್ರ ವಾಹನ, 2-3 ದಿನದ ಹಿಂದೆ ನಿಲ್ಲಿಸಿರುವ 4 ಆಟೋರಿಕ್ಷಾ ಅಲ್ಲಿಯೇ ನಿಂತಿದ್ದವು. ಅವುಗಳಿಗೆ ಹಾನಿಯಾಗದಂತೆ ತೆರವು ಕಾರ್ಯಾಚರಣೆ ನಡೆಸಲಾಯಿತು.

ಈ ಸಂದರ್ಭದಲ್ಲಿ ನಗರ ಮಾಪನ ಇಲಾಖೆಯ ಸಹಾಯಕ ನಿರ್ದೇಶಕ ಚಿಕ್ಕಣ್ಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ರಾಘವೇಂದ್ರ, ಇನ್ಸ್‌ಪೆಕ್ಟರ್‌ಗಳಾದ ಯೋಗಾಂಜನಪ್ಪ, ರವಿಶಂಕರ್, ರೋಹಿತ್, ಕಂದಾಯ ನಿರೀಕ್ಷಕರು, ಗ್ರಾಮ ಆಡಳಿತಾಧಿಕಾರಿ(ವಿಎ) ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಡಾ.ವಿಷ್ಣುವರ್ಧನ್ ಸೂಪರ್ ಹಿಟ್ ಚಿತ್ರಗಳ ಗೀತಗಾಯನ



ಮೈಸೂರು, ಫೆ.6(ಎಂಟಿವೈ)- ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಫೆ.7ರಂದು ಸಂಜೆ 5ರಿಂದ ರಾತ್ರಿ 9.30 ರವರೆಗೆ 'ವಿಷ್ಣು ಗಾನ ಅಮೃತ ಪಾನ' ಶೀರ್ಷಿಕೆಯಡಿ ಸಾಹಸ ಸಿಂಹ ಡಾ.ವಿಷ್ಣುವರ್ಧನ್ ಅಭಿನಯದ ಸೂಪರ್ ಹಿಟ್ ಚಿತ್ರಗಳ ಗೀತ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಗಾನ ಚಂದನ ಕಲಾ ಬಳಗದ ವ್ಯವಸ್ಥಾಪಕ ಆರ್.ಸುಧೀಂದ್ರ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ವಿಷ್ಣುವರ್ಧನ್ ಅವರ 75ನೇ ಜನ್ಮದಿನದ ಅಂಗವಾಗಿ ಫೆ.7ರಂದು ಸಂಜೆ 5ರಿಂದ ರಾತ್ರಿ 9.30ರವರೆಗೆ ಕರೋಕೆ ಗೀತ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ. ಗಾಯನ ಕಾರ್ಯ ಕ್ರಮದಲ್ಲಿ 35ಕ್ಕೂ ಹೆಚ್ಚು ಗೀತೆಗಳನ್ನು ಹಾಡಲಾಗುತ್ತದೆ. ಸಾರ್ವಜನಿಕರಿಗೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದೆ ಎಂದರು. ಗೋಷ್ಠಿಯಲ್ಲಿ ಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ, ಗಾಯಕರಾದ ವಿಶ್ವನಾಥಶಾಸ್ತ್ರಿ, ಗೋಪಾಲ್‌ಕೃಷ್ಣ, ಶಶಿಕಲಾ, ಅಶ್ವಿನಿ, ಪಲ್ಲವಿ ಅರುಣ್ ಇದ್ದರು.

ನಾಳೆ ಸ್ವಚ್ಛತಾ ಮ್ಯಾರಥಾನ್

ಮೈಸೂರು, ಫೆ.6- ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ನಿರ್ದೇಶನದಂತೆ ಫೆ. 8 ರಂದು ದೇಶಾದ್ಯಂತ ಸಮುದಾಯ ಸಹಭಾಗಿತ್ವದ ಮೂಲಕ ಸ್ವಚ್ಛ ಸರ್ವೇಕ್ಷಣ್-2025-26 ಹಾಗೂ ಸ್ವಚ್ಛತೆಯಲ್ಲಿ ಸಾರ್ವಜನಿಕರ ಸಹಭಾಗಿತ್ವ ಎಂಬ ಧ್ಯೇಯದೊಂದಿಗೆ ಸ್ವಚ್ಛತಾ ಮ್ಯಾರಥಾನ್ ಕಾರ್ಯಕ್ರಮವನ್ನು ಬೆಳಗ್ಗೆ 6 ಘಂಟೆಯಿಂದ 9 ಘಂಟೆಯ ವರೆಗೆ ಅರಮನೆ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಆಯೋಜಿಸಲಾಗುತ್ತದೆ. ಸದರಿ ಕಾರ್ಯಕ್ರಮದಲ್ಲಿ ಮೈಸೂರು ನಗರ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರದ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿವರ್ಗ (ಎಬಿಸಿ ಮತ್ತು ಡಿ ವೃಂದ) ಹಾಗೂ ಹೊರಗುತ್ತಿಗೆ ನೌಕರರು ಕಡ್ಡಾಯವಾಗಿ ಪಾಲ್ಗೊಂಡು ಸ್ವಚ್ಛತೆ ಕುರಿತು ಜಾಗೃತಿ ಮೂಡಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾರ್ಕೆಟಿಂಗ್, ಮನರಂಜನೆಯ 'ಮೈಸೂರು ಸಂತೆ'ಗೆ ಚಾಲನೆ



ಬಿಗ್‌ಬಾಸ್ ಖ್ಯಾತಿಯ ನಟಿ, ನಿರೂಪಕಿ ಜಾಹ್ನವಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮೈಸೂರು, ಫೆ.6(ವಿವಿಹೆಚ್)- ವಾರಾಂತ್ಯದ ಮೂರು ದಿನಗಳ ಕಾಲ ಮೈಸೂರು ನಾಗರಿಕರು, ಪ್ರವಾಸಿಗರು ಸೇರಿದಂತೆ ಎಲ್ಲರ ಮನಸ್ಸಿಗೆ ಮುದ ನೀಡುವ ಮತ್ತು ವ್ಯಾಪಾರೋದ್ಯಮವನ್ನು ಉತ್ತೇಜಿಸುವ ಜೊತೆಗೆ ಮನರಂಜನೆ ಕೊಡುವ 'ಮೈಸೂರು ಸಂತೆ'ಗೆ ಇಂದು ಅಧಿಕೃತ ಚಾಲನೆ ದೊರೆಯಿತು.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಮೈಸೂರಿನ ಸಾಂಸ್ಕೃತಿಕ ಸೊಬಗು, ಪರಂಪರೆ, ಪ್ರವಾಸೋದ್ಯಮ, ವಾಣಿಜ್ಯೋದ್ಯಮ ಹಾಗೂ ಮೈಸೂರಿನ ಹಿರಿಮೆಯನ್ನು ಸಾರುವ, ಸಂಗೀತ, ಹಾಸ್ಯ, ನೃತ್ಯ, ಮನರಂಜನೆ ನೀಡುವ ಉದ್ದೇಶದಿಂದ ಫೆ.6, 7 ಹಾಗೂ 8 ರಂದು ಆಯೋಜಿಸಿರುವ ಮೈಸೂರು ಸಂತೆ-2026 ಕಾರ್ಯಕ್ರಮಕ್ಕೆ ಬಿಗ್‌ಬಾಸ್ ಸೀಸನ್-12ರ ಸ್ಪರ್ಧಿ, ನಿರೂಪಕಿ ಜಾಹ್ನವಿ ಶುಕ್ರವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಮೈಸೂರು ಎಂಬುದು ಒಂದಲ್ಲ ಒಂದು ರೀತಿಯಲ್ಲಿ ಪ್ರತಿಯೊಬ್ಬರ ಜೀವನದಲ್ಲಿ ಹಾಸು ಹೊಕ್ಕಾಗಿ ಬಿಟ್ಟಿದೆ. ಸ್ವಚ್ಛ ನಗರಿ ಮೈಸೂರು ನೆಮ್ಮದಿಯ ತಾಣವಾಗಿದೆ. ಖಾದ್ಯ, ಜೀವನ ಶೈಲಿ, ಸಂಸ್ಕೃತಿ ಸೇರಿದಂತೆ ಹಲವಾರು ವಿಚಾರಗಳಲ್ಲಿ ರಾಜ್ಯ ಮಾತ್ರವಲ್ಲದೇ ದೇಶದಲ್ಲೇ ತಮ್ಮ ಛಾಪು ಮೂಡಿಸುತ್ತಿದೆ ಎಂದು ಹರ್ಷಿಸಿದರು.

ಮೈಸೂರು ಸಂತೆಯಲ್ಲಿ ಬಹುತೇಕ ಹೆಣ್ಣು ಮಕ್ಕಳೇ ಮಳಿಗೆಗಳನ್ನು ತೆರೆದು, ವ್ಯಾಪಾರ ಮಾಡುತ್ತಿದ್ದಾರೆ. ಮಹಿಳೆಯರ ಅಲಂಕಾರಿಕ ವಸ್ತುಗಳಿಂದ, ದಿನನಿತ್ಯದ ಬಳಕೆಯ ವಸ್ತುಗಳ ವರೆಗೆ ಎಲ್ಲವೂ ಒಂದೇ ಸೂರಿನಡಿ ಲಭ್ಯವಾಗಿದೆ. ಮೈಸೂರು ಜನತೆ ಇದರ ಸದುಪಯೋಗ ಪಡೆದುಕೊಳ್ಳಿ ಎಂದರು.



ಪುಟ್ಟಪೋರಿಯ ವ್ಯಂಗ್ಯ ಚಿತ್ರ ರಚಿಸುತ್ತಿರುವ ಕಲಾವಿದ ಪಿ.ಗುರುಪ್ರಸಾದ್.

ಮೋಡಿ ಮಾಡಿದ ವ್ಯಂಗ್ಯ ಚಿತ್ರ ಮೈಸೂರು ಸಂತೆಯಲ್ಲಿ ಕುಂತಲ್ಲೇ ವ್ಯಕ್ತಿ ಚಿತ್ರವನ್ನು ವ್ಯಂಗ್ಯವಾಗಿ ಬಿಡಿಸುತ್ತಾ ಅದರಲ್ಲಿಯೂ ಜನಮನ ಗೆದ್ದ ಭೂಪ ಮೈಸೂರು ಕಾವಾ ಸಂಸ್ಥೆಯ ವಿದ್ಯಾರ್ಥಿ ಪಿ.ಗುರುಪ್ರಸಾದ್. ಕ್ಯಾನ್ವಾಸ್ ಚಿತ್ರಕಲೆ, ಪೆನ್ಸಿಲ್ ಭಾವಚಿತ್ರಗಳು, ಡಿಜಿಟಲ್ ಚಿತ್ರಕಲೆ, ಗೋಡೆ ಚಿತ್ರಕಲೆ, ಗೋಡೆ ಭಿತ್ತಿಚಿತ್ರಗಳು ಸೇರಿದಂತೆ ಕಲೆಯನ್ನೇ ಜೀವನವನ್ನಾಗಿಸಿಕೊಂಡ ಯುವ ಪ್ರತಿಭೆಯೊಂದು ಮೈಸೂರು ಸಂತೆಯಲ್ಲಿ ಹೆಚ್ಚೆಚ್ಚು ಜನರನ್ನು ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ. ಕುಂತಲ್ಲೆ 4 ರಿಂದ 5 ನಿಮಿಷಗಳ ಒಳಗಾಗಿ ವ್ಯಕ್ತಿಯ ವ್ಯಂಗ್ಯ ಚಿತ್ರವನ್ನು ಮಾರ್ಕರ್ ಮೂಲಕ ರಚಿಸಿ, ಎಲ್ಲರ ಹುಬ್ಬೇರುವಂತೆ ಮಾಡುವ ಈತ ಮೂಲತಃ ಮೈಸೂರಿನ ಪ್ರತಿಭೆಯಾಗಿದ್ದು, ವ್ಯಕ್ತಿಯೊಬ್ಬರ ವ್ಯಂಗ್ಯ ಚಿತ್ರಕ್ಕೆ 200 ರೂ. ಜೋಡಿಗೆ 300 ರೂ. ಹಣ ಪಡೆದು, ಪಿ. ಗುರುಪ್ರಸಾದ್ ಚಿತ್ರರಚನೆ ಮಾಡಿ ಕೊಡುತ್ತಾರೆ ಇವರ ಕಲಾ ಕೌಶಲ್ಯಕ್ಕೆ ಪ್ರೇಕ್ಷಕ ಸಮೂಹ ಅಚ್ಚರಿ ವ್ಯಕ್ತಪಡಿಸುತ್ತಿದ್ದಾರೆ.

ಏನೇನಿರಲಿದೆ: ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿರುವ 100ಕ್ಕೂ ಹೆಚ್ಚು ಆಯ್ದ ಮಳಿಗೆಗಳಲ್ಲಿ ಹಬ್ಬದ ವಸ್ತ್ರಗಳು, ಕೈತೋಟದ ಕಲಾಕೃತಿಗಳು, ಮನೆ ಅಲಂಕಾರ ವಸ್ತುಗಳು ಹಾಗೂ ಜೀವನಶೈಲಿ ಉತ್ಪನ್ನಗಳು ಸಿಗಲಿವೆ. ಪ್ರವೇಶ ಶುಲ್ಕ 60 ರೂ. ಆಗಿದ್ದು, ಸ್ಥಳೀಯ ಹಾಗೂ ಬಹುಪಾಕ ಶೈಲಿಯ ಆಹಾರ ಮಳಿಗೆಗಳು, ಮಕ್ಕಳಿಗಾಗಿ ವಿಶೇಷ ಆಟ-ಚಟುವಟಿಕೆ ವಲಯ, ಕಾರ್ಯಾಗಾರಗಳು, ಸಂವಹನಾತ್ಮಕ ಕಾರ್ಯಕ್ರಮಗಳು ಮತ್ತು ಐಷಾರಾಮಿ ಕಾರು-ಬೈಕ್ ಪ್ರದರ್ಶನಗಳು ಸಂತೆಯ ಪ್ರಮುಖ ಆಕರ್ಷಣೆಗಳಾಗಿವೆ. ಪ್ರತಿದಿನ ಸಂಜೆ 6ರಿಂದ ಕನ್ನಡ ಗೀತೆಗಳ ಗಾಯನ, ಸಂಗೀತ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಕಾರ್ಯಕ್ರಮದಲ್ಲಿ ಆರ್ಗ್ಯಾನಿಕ್ ಮಂಡ್ಯ ಸಂಸ್ಥಾಪಕ ಮಧು ಚಂದನ್, ಆರ್‌ವಿ ವಿಶ್ವವಿದ್ಯಾಲಯದ ಉಪ ಕುಲಪತಿ ಹಾಗೂ ನಿರ್ದೇಶಕ ಪ್ರೊ. ದ್ವಾರಕಾ ಉನಿಯಾಲ್, ಗ್ಲೋಬಲ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ. ಜಯಚಂದ್ರ ರಾಜು, ಆಯೋಜಕರಾದ ಭರತ್ ಗೌಡ, ಕಾರ್ತಿಕ್, ಮಹೇಶ್, ಡಾ.ಪೂಜಾ ಜೋಶಿ, ಸ್ಮಿತಾ ಬಾಲು, ಸ್ನೇಹಲ್ ಇಗೂರ್, ರಮ್ಯಾ ಹಲವರು ಉಪಸ್ಥಿತರಿದ್ದರು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತನ್ನು, ಸದರಿ ಸ್ವತ್ತಿನ ಮಾಲೀಕರಾದ ಶ್ರೀ. ಪಿ.ಎಸ್. ಮಲ್ಲೇಶ್ ರವರಿಂದ ಶುದ್ಧ ಕ್ರಯಕ್ಕೆ ಪಡೆದುಕೊಳ್ಳುವ ಇಚ್ಛೆಯನ್ನು ಹೊಂದಿದ್ದು, ಈ ಸಂಬಂಧ ನಮ್ಮ ಕಕ್ಷಿದಾರರು ಈ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆಯನ್ನು ನೀಡುತ್ತಿದ್ದಾರೆ.

ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ/ವ್ಯಕ್ತಿಗಳು/ಸಂಘ ಸಂಸ್ಥೆಗಳು ಅಥವಾ ಷೆಡ್ಯೂಲ್ ಸ್ವತ್ತಿನ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಹಕ್ಕು, ವಾರಸು, ಮಾಲೀಕತ್ವ ಹಾಗೂ ಇನ್ನಿತರ ಯಾವುದೇ ರೀತಿಯ ಮಾಲೀಕತ್ವವನ್ನು ಹೊಂದಿದ್ದಂತಹ ಪಕ್ಷದಲ್ಲಿ ಅಂತಹ ವ್ಯಕ್ತಿಗಳು ಈ ಕೆಳಗೆ ಸಹಿ ಮಾಡಿರುವ ವಕೀಲರ ವಿಳಾಸಕ್ಕೆ ಸೂಕ್ತ ದಾಖಲಾತಿಗಳ ಸಮೇತ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದಂತಹ ಏಳು (07) ದಿನಗಳೊಳಗಾಗಿ ಲಿಖಿತವಾಗಿ ಸಲ್ಲಿಸುವಂತೆ ಈ ಮೂಲಕ ಸೂಚಿಸಲಾಗಿದೆ. ಒಂದು ವೇಳೆ ಮೇಲೆ ತಿಳಿಸಿದಂತಹ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಾರದೇ ಇದ್ದಂತಹ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸುತ್ತಾರೆಂತಲೂ ಮತ್ತು ಆನಂತರ ಬರುವಂತಹ ಯಾವುದೇ ಆಕ್ಷೇಪಣೆಗಳಿಗೆ ನಮ್ಮ ಕಕ್ಷಿದಾರರು ಜವಾಬ್ದಾರರಲ್ಲವೆಂತಲೂ ಈ ಮೂಲಕ ತಿಳಿಯಪಡಿಸಲಾಗುತ್ತಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ತೆರಕನಾಂಬಿ ಹೋಬಳಿ, ಪಡಗೂರು ಗ್ರಾಮದ ಸರ್ವೆ ನಂ.207/2 ರ ವಿಸ್ತೀರ್ಣ 2 ಎಕರೆ 01 ಗುಂಟೆ (ಎರಡು ಎಕರೆ ಒಂದು ಗುಂಟೆ) ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ-ಸರ್ಕಾರಿ ಚರಂಡಿ, ಪಶ್ಚಿಮಕ್ಕೆ-ನಾಗಮ್ಮ ರವರ ಜಮೀನು, ಉತ್ತರಕ್ಕೆ-ಪಿ.ರಾಜಶೇಕರಪ್ಪ ಮತ್ತು ಪದ್ಮ ರವರ ಜಮೀನು, ದಕ್ಷಿಣಕ್ಕೆ- ರಸ್ತೆ.

Sd/- D. DILIP, Advocate, # 990, First Floor, Panchamanthra Road, Kuvempunagara, Mysuru-570023. Ph: 9964143123
E-Mail: advocatedilipd@gmail.com
Place: Mysore, Date: 05.02.2026

ಮೈಸೂರು ಮಿತ್ರ 46 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.


-ಜಾಹೀರಾತು ವ್ಯವಸ್ಥಾಪಕರು

ಮೊದಲನೇ ವರ್ಷದ ಸವಿನೆನಪು
ಸದಾ ನಿಮ್ಮ ನೆನಪಲ್ಲಿ



H.T. ಗೋವಿಂದ ರಾಜು
(ಟಿಂಬರ್ ಮರ್ಚೆಂಟ್)
ಜನನ: 16/10/1996 ನಿಧನ: 07/02/2025
ನೀವು ನಮ್ಮನ್ನು ಅಗಲಿ ಇಂದಿಗೆ ಒಂದು ವರ್ಷವಾಯಿತು. ಭಾರದ ಹೃದಯದಿಂದ ದುಃಖತಪ್ತ.
ಪತ್ನಿ ಸುಮನ್ ರಾಜ್, ಮಕ್ಕಳು ಸೃಜನ್ ರಾಜ್, ಭುವನ್ ರಾಜ್

28ನೇ ವರ್ಷದ ಸವಿನೆನಪು



ಬಿ. ಶಂಕರ್
ಎಂಬಿಎ, ಜಿಡಿಸಿ

ನೀವು ಇಂದಿಗೆ ನಮ್ಮನ್ನಗಲಿ ಇಷ್ಟು ವರ್ಷ ಕಳೆದರು ಸದಾ ನಿಮ್ಮ ನೆನಪಿನಲ್ಲಿ ಇರುವ,
ಇಂತಿ ದುಃಖತಪ್ತರು :
(ಪತ್ನಿ) ಪಾರ್ವತಿ ಶಂಕರ್,
ಬೆಲ್ಲದ ಬೋರಪ್ಪರವರ ಕುಟುಂಬದವರು ಹಾಗು ಗ್ರಾಮಸ್ಥರು ನಗುವನಹಳ್ಳಿ,
ಯಜಮಾನ್ ವಿಷಕಂಠೇಗೌಡರ ಕುಟುಂಬದವರು ಕುಂಬಾರಕೊಪ್ಪಲು.

ನಗರಸಭಾ ಕಾರ್ಯಾಲಯ, ಹುಣಸೂರು
CITY MUNICIPAL COUNCIL HUNSUR
ಮೈಸೂರು ಜಿಲ್ಲೆ – 571105
E-mail : ka.hunsur.cmc@gmail.com ಫೋನ್: 08222-252048
ಸಂ:ಹುನಕಾ/ಸಿಬ್ಬಂದಿ/ಟೆಂಡರ್/ಸಿಆರ್-01/2025-26 ದಿನಾಂಕ: 06.02.2026

ಟೆಂಡರ್ ಪ್ರಕಟಣೆ

ಹುಣಸೂರು ನಗರಸಭಾ ಕಛೇರಿಗೆ ಅವಶ್ಯವಿರುವ ಮಾನವ ಸಂಪನ್ಮೂಲವನ್ನು ಹೊರಗುತ್ತಿಗೆ ಮೂಲಕ ವಾರ್ಷಿಕವಾಗಿ ಸರಬರಾಜು ಮಾಡಲು ಅರ್ಹ ನೋಂದಾಯಿತ ಮಾನವ ಸಂಪನ್ಮೂಲ ಸರಬರಾಜುದಾರರಿಂದ 1999 ಮತ್ತು 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು https://kppp.karnataka.gov.in ನಿಂದ ಟೆಂಡರ್ ಷರತ್ತು ಹಾಗೂ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು.


1. ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ ದಿನಾಂಕ: 21-02-2026 ಸಂಜೆ 5.30 ಗಂಟೆಯವರೆಗೆ.
2. ಟೆಂಡರ್ ತೆರೆಯುವ ದಿನಾಂಕ: 23-02-2026 ಬೆಳಿಗ್ಗೆ 11.00 ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

ಕ್ರ. ಸಂ	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ ಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ)
1	DMA/2025-26/SE6675/CALL-2	11128.75	7750.00

ಸೂಚನೆ : ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರೆ ಬದಲಾವಣೆಗಳಿದ್ದಲ್ಲಿ ಹಾಗೂ ಹೆಚ್ಚಿನ ವಿವರಗಳಿಗೆ ಗುತ್ತಿಗೆದಾರರು https://kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/- ಪೌರಾಯುಕ್ತರು
ನಗರಸಭೆ ಹುಣಸೂರು

ಟಿಪ್ಪರ್‌ಗಳಲ್ಲಿ ಓವರ್ ಲೋಡ್‌ನಿಂದಾಗಿ ರಸ್ತೆಯುದ್ದಕ್ಕೂ ಸುರಿಯುವ ಜಲ್ಲಿ; ದ್ವಿಚಕ್ರ ವಾಹನ ಸವಾರರಿಗೆ ಕಂಟಕ!





ರಸ್ತೆಯ ತುಂಬೆಲ್ಲಾ ಜಲ್ಲಿಕಲ್ಲು ಚೆಲ್ಲಾಪಿಲ್ಲಿಯಾಗಿ ಬಿದ್ದಿರುವುದು

ಮೈಸೂರು, ಫೆ.6(ಎಂಕೆ)– ಓವರ್ ಲೋಡ್‌ನಿಂದ ಸುರಿಯುವ ಜಲ್ಲಿ ಕಲ್ಲುಗಳು ದ್ವಿಚಕ್ರ ವಾಹನ ಸವಾರರಿಗೆ ಮಾರಣಾಂತಿಕವಾಗುತ್ತಿವೆ. ಅದೇಕೋ ನಮ್ಮ ಸಂಚಾರ ಪೊಲೀಸರು ಇಂತಹ ಅಪಾಯಕಾರಿ ಪ್ರವೃತ್ತಿಗೆ ಕಡಿವಾಣ ಹಾಕುವ ಪ್ರಯತ್ನವನ್ನೇ ಮಾಡುತ್ತಿಲ್ಲ.

ನಗರದೊಳಗೆ ಭಾರೀ ವಾಹನಗಳಿಗೆ ನಿರ್ಬಂಧವಿದ್ದರೂ ಕಟ್ಟಡ ನಿರ್ಮಾಣ ವಸ್ತುಗಳನ್ನು ಸಾಗಿಸುವ ವಾಹನಗಳ ಸಂಚಾರಕ್ಕೆ ಅವಕಾಶವಿದೆ. ಆದರೆ ಜಲ್ಲಿ ಕಲ್ಲು ಸಾಗಿಸುವ ಲಾರಿ ಹಾಗೂ ಟಿಪ್ಪರ್‌ಗಳಿಂದ ದ್ವಿಚಕ್ರ ವಾಹನ ಸವಾರರಿಗೆ ಪ್ರಾಣಾಪಾಯ ಸೃಷ್ಟಿಯಾಗುತ್ತಿದೆ.

ಸುಭದ್ರವಾದ ಬಾಡಿ ಹಾಗೂ ಸುಸ್ಥಿತಿಯಲ್ಲಿರುವ ಲಾರಿ ಹಾಗೂ ಟಿಪ್ಪರ್‌ಗಳಲ್ಲಿ ನಿಯಮಿತ ಪ್ರಮಾಣದ ಜಲ್ಲಿ ತುಂಬಿಕೊಂಡು ನಿಗದಿತ ವೇಗಮಿತಿಯಲ್ಲಿ ಸಾಗಿದರೆ ಏನೂ ಸಮಸ್ಯೆ ಇಲ್ಲ. ಆದರೆ, ಓವರ್ ಲೋಡ್ ಸಾಗಿಸುವುದರಿಂದ ರಸ್ತೆಗಳೆಲ್ಲಾ ಅಪಾಯಕಾರಿ ಮಾರ್ಗವಾಗಿ ಪರಿಣಮಿಸುತ್ತಿವೆ.

ಓವರ್ ಲೋಡ್ ತುಂಬಿದ್ದ ವಾಹನಗಳು ಕಡಿದಾದ ರಸ್ತೆಗಳಲ್ಲಿ ಸಾಗುವಾಗ, ಇಲ್ಲವೇ ತಕ್ಷಣ ಬ್ರೇಕ್ ಹಾಕಿದಾಗ ಜಲ್ಲಿ ಕಲ್ಲುಗಳು ರಸ್ತೆಗೆ ಸುರಿದು, ಬಳಿಕ ಈ ಮಾರ್ಗದಲ್ಲಿ ದ್ವಿಚಕ್ರ ವಾಹನಗಳ ಸಂಚಾರ ಅಪಾಯಕಾರಿಯಾಗಿ ಬದಲಾಗುತ್ತದೆ. ಜಲ್ಲಿ ಕಲ್ಲುಗಳಿಂದ ಅದೆಷ್ಟೋ ದ್ವಿಚಕ್ರ ವಾಹನ ಸವಾರರು ಆಯತಪ್ಪಿ ಬಿದ್ದು, ಪೆಟ್ಟು ತಿಂದಿದ್ದಾರೆ. ಕೆಲವರ ಕೈಕಾಲುಗಳು ಮುರಿದಿವೆ. ಮತ್ತಷ್ಟು ಮಂದಿ ತಲೆಗೆ ಗಂಭೀರ ಗಾಯವಾಗಿದೆ. ಹಿರಿಯರು ಬಿದ್ದು ಮೂಳೆ ಮುರಿದುಕೊಂಡು ಜೀವನ ಪರ್ಯಂತ ನೋವು ಅನುಭವಿಸುತ್ತಿದ್ದಾರೆ. ಇಂತಹ ಗಂಭೀರ ಘಟನೆಗಳು ಸ್ವಯಂ ಅಪಘಾತಗಳ ಹೆಸರಲ್ಲಿ ಮುಚ್ಚಿ ಹೋಗುತ್ತವೆ. ಪೊಲೀಸ್ ಠಾಣೆಗಳಲ್ಲಿ ಯಾವುದೇ ಪ್ರಕರಣ ದಾಖಲಾಗುವುದಿಲ್ಲ. ಹಾಗಾಗಿ, ಅಪಘಾತಕ್ಕೆ ಕಾರಣ ಹುಡುಕುವ ಗೋಜಿಗೆ ಯಾರೂ ಮುಂದಾಗುವುದಿಲ್ಲ.

ಇನ್ನು ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಜಲ್ಲಿಗಳಿಂದ ದ್ವಿಚಕ್ರ ವಾಹನ ಸವಾರರ ಜೊತೆಗೆ ಪಾದಚಾರಿಗಳೂ ಸಂಕಟ ಎದುರಿಸುತ್ತಿದ್ದಾರೆ. ರಸ್ತೆಯಲ್ಲಿ ಚೆಲ್ಲಾಡಿರುವ ಜಲ್ಲಿ ಕಲ್ಲುಗಳು, ಭಾರೀ ವಾಹನಗಳ ಚಕ್ರದ ಅಂಚಿಗೆ ಸಿಕ್ಕಿ, ಪಕ್ಕಕ್ಕೆ ಚಿಮ್ಮುತ್ತವೆ. ಈ ವೇಳೆ ಅವು ದ್ವಿಚಕ್ರ ವಾಹನ ಸವಾರರು ಹಾಗೂ ಪಾದಚಾರಿಗಳಿಗೆ ಬಡಿದರೆ ರಕ್ತಗಾಯವಾಗುವುದು ನಿಶ್ಚಿತ. ಇಂತಹ ಘಟನೆಗಳು ಸಾಕಷ್ಟು ನಡೆದಿದ್ದು, ಪೆಟ್ಟು ತಿಂದವರು ಶಪಿಸಿಕೊಂಡು ದಾರಿ ಮುಂದುವರೆಸಿದ್ದಾರೆ. ಆದರೆ ಈ ರೀತಿ ಚಿಮ್ಮುವ ಕಲ್ಲುಗಳು, ಕಣ್ಣು, ಕಿವಿ, ಸೂಕ್ಷ್ಮ ಭಾಗಕ್ಕೆ ಬಡಿದರೆ ಜೀವಹಾನಿಯಾಗುವ ಸಾಧ್ಯತೆಯೂ ಇರುತ್ತದೆ.

ಮೈಸೂರಿನ ಕುಂಬಾರಕೊಪ್ಪಲು ಕೆಆರ್‌ಎಸ್ ರಸ್ತೆ ಜಂಕ್ಷನ್(ಜಯದೇವ ಆಸ್ಪತ್ರೆ ಎದುರು), ಹೆಬ್ಬಾಳಿನ ಡಾ.ಅಂಬರೀಶ್ ರಸ್ತೆಯುದ್ದಕ್ಕೂ ಸೇರಿದಂತೆ ಬಹುತೇಕ ರಸ್ತೆಗಳು, ಹೊಸದಾಗಿ ಡಾಂಬರೀಕರಣಗೊಂಡ ರಸ್ತೆಗಳು ಸೇರಿದಂತೆ ನಗರದ ಹಲವೆಡೆ ಜಲ್ಲಿಕಲ್ಲು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದು, ದ್ವಿಚಕ್ರ ವಾಹನ ಸವಾರರು ಹಾಗೂ ಪಾದಚಾರಿಗಳು ಸ್ವಲ್ಪ ಎಚ್ಚರ ತಪ್ಪಿದರೂ ಅಪಾಯ ಕಟ್ಟಿಟ್ಟಬುತ್ತಿ.

ಗಮನ ಹರಿಸದ ಪೊಲೀಸರು: ದಂಡ ವಿಧಿಸಲು ರಸ್ತೆ ಬದಿಯಲ್ಲಿ ಗುಂಪುಗೂಡುವ ಪೊಲೀಸರು, ಓವರ್ ಲೋಡ್ ಸಾಗಿಸುವ ಅದರಲ್ಲೂ ರಸ್ತೆಯಲ್ಲೆಲ್ಲಾ ಜಲ್ಲಿ ಸುರಿಸುವ ಭಾರೀ ವಾಹನಗಳತ್ತ ಗಮನಹರಿಸುವುದಿಲ್ಲ. ಜಲ್ಲಿ ಕಲ್ಲುಗಳಿಂದ ಅಪಘಾತ ಸಂಭವಿಸಿ, ಸವಾರರು ನರಳಿದರೂ ಅವರಿಗೇ ನೀತಿ ಬೋಧನೆ ಮಾಡಿ ಕಳುಹಿಸುತ್ತಾರೆಯೇ ಹೊರತು, ಅದಕ್ಕೆ ಕಾರಣವಾದ ವಾಹನಗಳಿಗೆ ದಂಡ ವಿಧಿಸಿ, ಎಚ್ಚರಿಸುವ ಪ್ರಯತ್ನವನ್ನೂ ಮಾಡುವುದಿಲ್ಲ. ಓವರ್ ಲೋಡ್ ತುಂಬಿರುವ ವಾಹನಗಳನ್ನು ತಡೆದು, ನಿಯಮ ಪಾಲನೆಗೆ ಕಟ್ಟುನಿಟ್ಟಿನ ಸೂಚನೆ ನೀಡುವ ಕರ್ತವ್ಯವನ್ನೂ ಪರಿಪಾಲಿಸುವುದಿಲ್ಲ. ಈಗಿನಿಂದಾದರೂ ಸಂಚಾರ ಪೊಲೀಸರು ಈ ಗಂಭೀರ ಸಮಸ್ಯೆಯತ್ತ ಗಮನ ಹರಿಸಲಿ ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವ

ಲಾಸ್ಟ್ ಲ್ಯಾಂಡ್, ಸಬರ್ ಬೊಂದಾ, ವನ್ಯಾ ಚಿತ್ರಕ್ಕೆ ಪ್ರಶಸ್ತಿ ಗರಿ



ಬೆಂಗಳೂರು : 17ನೇ ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವವು ಇಂದು (ಫೆ.6) ಅಂತ್ಯಗೊಂಡಿದ್ದು, ಜಪಾನ್ ದೇಶದ 'ಲಾಸ್ಟ್ ಲ್ಯಾಂಡ್', ಮರಾಠಿಯ 'ಸಬರ್ ಬೊಂದಾ' ಮತ್ತು 'ವನ್ಯಾ' ಚಿತ್ರಗಳು ಚಿತ್ರೋತ್ಸವದ ಏಷ್ಯಾ, ಭಾರತ ಮತ್ತು ಕನ್ನಡ ವಿಭಾಗಗಳಲ್ಲಿ ಅತ್ಯುತ್ತಮ ಚಿತ್ರ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿವೆ.

ಅತ್ಯುತ್ತಮ ಪ್ರಶಸ್ತಿ ವಿಜೇತರಿಗೆ ಪಾರಿತೋಷಕದ ಜೊತೆಗೆ 10 ಲಕ್ಷ ರೂ. ನಗದು ಬಹುಮಾನ ನೀಡಲಾಯಿತು. ದ್ವಿತೀಯ ಮತ್ತು ತೃತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿಗಳನ್ನು ಗೆದ್ದವರಿಗೆ ತಲಾ ಐದು ಲಕ್ಷ ರೂ. ಮತ್ತು ಎರಡು ಲಕ್ಷ ರೂ. ನೀಡಿ ಗೌರವಿಸಲಾಯಿತು.

ಏಷ್ಯನ್ ಚಿತ್ರ ವಿಭಾಗದಲ್ಲಿ ಈ ವರ್ಷ ಒಟ್ಟು 15 ಚಿತ್ರಗಳು ಪ್ರಶಸ್ತಿ ಕಣದಲ್ಲಿದ್ದವು. ಈ ಪೈಕಿ ಜಪಾನ್‌ನ 'ದಿ ಲಾಸ್ಟ್ ಲ್ಯಾಂಡ್' ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ಪಾತ್ರವಾದರೆ, ಭಾರತದ 'ಶೇಪ್ ಆಫ್ ಮೋವೋ' ಮತ್ತು ಜಪಾನ್‌ನ 'ದಿ ಡೀಪೆಸ್ಟ್ ಸ್ಪೇಸ್ ಇನ್ ಯೂಎಸ್' ಚಿತ್ರಗಳು ದ್ವಿತೀಯ ಮತ್ತು ತೃತೀಯ ಚಿತ್ರ ಪ್ರಶಸ್ತಿಗೆ ಭಾಜನವಾಗಿವೆ. ಫಿಲಿಪೈನ್ಸ್‌ನ 'ರಿಪಬ್ಲಿಕ್ ಆಫ್ ಪಿಪೊಲಿಪಿನಾಸ್' ಚಿತ್ರವು ತೀರ್ಪುಗಾರರ ವಿಶೇಷ ಮೆಚ್ಚುಗೆಯನ್ನು ಪಡೆದಿದೆ.

ಭಾರತೀಯ (ಚಿತ್ರಭಾರತಿ) ವಿಭಾಗದಲ್ಲಿ ಮರಾಠಿ ಚಿತ್ರ 'ಸಬರ್ ಬೊಂಡಾ' ಅತ್ಯುತ್ತಮ ಚಿತ್ರ ಪ್ರಶಸ್ತಿ ತನ್ನದಾಗಿಸಿಕೊಂಡರೆ, ಮಲಯಾಳಂನ 'ಮೋಹಂ' ಮತ್ತು 'ಕಾಡು' ಚಿತ್ರಗಳು ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಚಿತ್ರ ಪ್ರಶಸ್ತಿಗಳನ್ನು ಗೆದ್ದಿವೆ. ಮರಾಠಿ ಭಾಷೆಯ 'ಗೊಂದಾಳ್' ಚಿತ್ರವು ಫಿಪ್ರೆಸ್ಕಿ ಪ್ರಶಸ್ತಿ ಪಡೆದರೆ, ಮಲಯಾಳಂ ಭಾಷೆಯ 'ಸರ್ಕೀಟ್' ಚಿತ್ರವು ತೀರ್ಪುಗಾರರ ವಿಶೇಷ ಮೆಚ್ಚುಗೆಯನ್ನು ಪಡೆದಿದೆ.

ಕನ್ನಡ ಸ್ಪರ್ಧಾ ವಿಭಾಗದಲ್ಲಿ ಈ ಬಾರಿ 14 ಚಿತ್ರಗಳು ಸ್ಪರ್ಧಿಸಿದ್ದು, ಈ ಪೈಕಿ 'ವನ್ಯಾ' ಚಿತ್ರವು ಅತ್ಯುತ್ತಮ ಪ್ರಶಸ್ತಿಯನ್ನು ಗೆದ್ದಿದೆ. ದ್ವಿತೀಯ ಹಾಗೂ ತೃತೀಯ ಅತ್ಯುತ್ತಮ ಚಿತ್ರಗಳಾಗಿ 'ನಮ್ ಸಾಲಿ' ಮತ್ತು 'ರಾವಣ ರಾಜ್ಯದಲ್ಲಿ ನವದಂಪತಿಗಳು' ಆಯ್ಕೆಯಾದರೆ, 'ಹಕ್ಕಿಗಾಗಿ' ಚಿತ್ರಕ್ಕಾಗಿ ನೆಟ್‌ಪ್ಯಾಕ್ ತೀರ್ಪುಗಾರರ ಪ್ರಶಸ್ತಿ ಸಿಕ್ಕಿದೆ. 'ಮೃಗತೃಷ್ಣೆ' ಮತ್ತು 'ಫೋರ್ ಬೈ ಫೋರ್' ಚಿತ್ರಗಳು ತೀರ್ಪುಗಾರರ ವಿಶೇಷ ಮನ್ನಣೆಗೆ ಭಾಜನವಾಗಿವೆ.

ಈ ಚಿತ್ರೋತ್ಸವದಲ್ಲಿ 70 ದೇಶಗಳ ಸುಮಾರು 300ಕ್ಕೂ ಹೆಚ್ಚು ಅತ್ಯುತ್ತಮ ಚಲನಚಿತ್ರಗಳು, ವಿಶ್ವದ ಪ್ರತಿಷ್ಠಿತ ಚಲನಚಿತ್ರೋತ್ಸವಗಳಲ್ಲಿ ಪಾಲ್ಗೊಂಡಿದ್ದ ಅತ್ಯುತ್ತಮ ಚಲನಚಿತ್ರಗಳು ಪ್ರದರ್ಶನಗೊಂಡಿವೆ. ಈ ಚಿತ್ರೋತ್ಸವವನ್ನು ಪ್ರತೀ ವರ್ಷವೂ ಅರ್ಥಪೂರ್ಣವಾದ ಧ್ಯೇಯ ವಾಕ್ಯದ ಮೂಲಕ ನಡೆಸಲಾಗುತ್ತಿದ್ದು, ಈ ಬಾರಿ ರಾಷ್ಟ್ರಕವಿ ಡಾ.ಜಿ.ಎಸ್. ಶಿವರುದ್ರಪ್ಪನವರ ಪ್ರಸಿದ್ಧ ಗೀತೆಯಾಗಿರುವ 'ಸ್ತ್ರೀ ಎಂದರೆ ಅಷ್ಟೇ ಸಾಕೆ' ಎಂಬ ಸಾಲಿನೊಂದಿಗೆ 'ಸ್ತ್ರೀ ಸಂವೇದನೆ, ಸಮಾನತೆಯ ದನಿ' ಎಂಬ ಟ್ಯಾಗ್‌ಲೈನ್ ಹೊಂದಿರುವ ಧ್ಯೇಯವಾಕ್ಯದೊಂದಿಗೆ ಆಚರಿಸಲಾಯಿತು.

ಮಾಜಿ ಶಾಸಕ ಎಂಕೆಎಸ್ ಹುಟ್ಟುಹಬ್ಬ ಆಚರಣೆ



ಮೈಸೂರು, ಫೆ.6– ಕೃಷ್ಣರಾಜ ವಿಧಾನ ಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರ ಹುಟ್ಟುಹಬ್ಬದ ಅಂಗವಾಗಿ ಅವರ ಅಭಿಮಾನಿಗಳು ಶನಿವಾರ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ಬೆಳಗ್ಗೆ 7 ಗಂಟೆಗೆ ಪೂಜೆ ಸಲ್ಲಿಸುವುದರೊಂದಿಗೆ ಹುಟ್ಟು ಹಬ್ಬದ ಸಂಭ್ರಮ ಆರಂಭಗೊಳ್ಳಲಿದ್ದು, ಬೆಳಗ್ಗೆ 10ಕ್ಕೆ ಕಾಂಗ್ರೆಸ್ ಮುಖಂಡರಾದ ಹರೀಶ್ ಮತ್ತು ಸ್ನೇಹಿತರಿಂದ ನೂರೊಂದು ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಉಪಹಾರ ವಿತರಿಸಲಾಗುವುದು. ಬೆಳಗ್ಗೆ 10.30ಕ್ಕೆ ಕಾಂಗ್ರೆಸ್ ಅಸಂಘಟಿತ ಕಾರ್ಮಿಕರ ಘಟಕದ ಅಧ್ಯಕ್ಷ ವಿನಯ್ ಕುಮಾರ್, ಯುವ ಕಾಂಗ್ರೆಸ್ ಮುಖಂಡ ವಿಕಾಸ್ ಮತ್ತಿತರ ಮುಖಂಡರ ಸಹಕಾರದೊಂದಿಗೆ ಮಕ್ಕಳಿಗೆ ಪುಸ್ತಕ ಮತ್ತು ಲೇಖನ ಸಾಮಗ್ರಿಗಳ ವಿತರಣೆ, 11 ಗಂಟೆಗೆ ಕುವೆಂಪುನಗರ ಜೋಡಿ ಬಸವ ರಸ್ತೆಯ ಶಿವ ಸಂಗಮ ಬಿಲ್ಡರ್ಸ್ ಆವರಣದಲ್ಲಿ ಹುಟ್ಟುಹಬ್ಬ ಆಚರಣೆ, 11.30ಕ್ಕೆ ನಗರ ಪಾಲಿಕೆ ಮಾಜಿ ಸದಸ್ಯ ಎಂ.ಸುನಿಲ್ ನೇತೃತ್ವದಲ್ಲಿ ಚಾಮುಂಡಿ ವನಂ ಬಳಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸನ್ಮಾನ, ಮಧ್ಯಾಹ್ನ 12ಕ್ಕೆ ಪಕ್ಷದ ನಗರ ಕಾರ್ಯದರ್ಶಿ ಡೈರಿ ವೆಂಕಟೇಶ್ ನೇತೃತ್ವದಲ್ಲಿ ಸಾರ್ವಜನಿಕರಿಗೆ ಸಿಹಿ ವಿತರಣೆ, 12.30ಕ್ಕೆ ಚೆಲುವಾಂಬ ಆಸ್ಪತ್ರೆ ಮುಂಭಾಗ ಭರತ್, ಸೇಟು ಸುರೇಶ್, ರಾಜೇಶ್ ನೇತೃತ್ವದಲ್ಲಿ ರೋಗಿಗಳು ಮತ್ತು ರೋಗಿಗಳ ಸಹಾಯಕರು ಸೇರಿ ಒಂದೂವರೆ ಸಾವಿರ ಜನರಿಗೆ ಅನ್ನದಾಸೋಹ, 12.45ಕ್ಕೆ ರೇವಣ್ಣ ಮತ್ತು ಸ್ನೇಹಿತರಿಂದ ಚಾಮುಂಡಿಪುರಂನ ಅರುಣೋದಯ ವಿಶೇಷ ಮಕ್ಕಳ ಶಾಲೆಯಲ್ಲಿ ವಿಶೇಷ ಭೋಜನ, 1 ಗಂಟೆಗೆ ಕುವೆಂಪು ನಗರದ ರಮೇಶ್ ರಾಮಪ್ಪ ನೇತೃತ್ವದಲ್ಲಿ ಚಿಕ್ಕ ಆರಾದನಹಳ್ಳಿಯ ಛಾಯಾದೇವಿ ವೃದ್ಧಾಶ್ರಮದಲ್ಲಿ ವಿಶೇಷ ಭೋಜನ, 2 ಗಂಟೆಗೆ ಸಿದ್ಧಾರ್ಥ ಬಡಾವಣೆಯ ಗೌತಮ್ ಬುದ್ಧ ನೇತೃತ್ವದಲ್ಲಿ ಅದ್ಧೂರಿ ಹುಟ್ಟುಹಬ್ಬ, ಸಂಜೆ 4.30 ಗಂಟೆಗೆ ಎಂ.ಕೆ.ಅಶೋಕ್ ನೇತೃತ್ವದಲ್ಲಿ ಸಿಎಸ್‌ಐ ಹಾರ್ಡ್‌ವಿಕ್ ಹೆಣ್ಣು ಮಕ್ಕಳ ವಿದ್ಯಾರ್ಥಿ ನಿಲಯದಲ್ಲಿ ಉಪಹಾರ ವಿತರಣೆ, 4:45ಕ್ಕೆ ವಿದ್ಯಾರಣ್ಯಪುರಂ ಸ್ನೇಹಿತರ ಬಳಗ ಮತ್ತು ಶಿವ ಗ್ಯಾಸ್ ಸ್ನೇಹಿತರ ವತಿಯಿಂದ ಹುಟ್ಟುಹಬ್ಬ, ಸಂಜೆ 5ಕ್ಕೆ ಅಶೋಕಪುರಂನ ಜೋಗಿ ಮಹೇಶ್ ಮತ್ತು ಸ್ನೇಹಿತರಿಂದ ಅಶೋಕ ವೃತ್ತದಲ್ಲಿ ಹುಟ್ಟುಹಬ್ಬ, 5.30ಕ್ಕೆ ಆನಂದ್ ಮತ್ತು ಸ್ನೇಹಿತರಿಂದ ವಿವೇಕಾನಂದ ವೃತ್ತದಲ್ಲಿ ಹುಟ್ಟುಹಬ್ಬ, 6.30ಕ್ಕೆ ಜನಸ್ಪಂದನ ಟ್ರಸ್ಟ್ ಮತ್ತು ಎಂ.ಕೆ.ಸೋಮಶೇಖರ್ ಅಭಿಮಾನಿ ಬಳಗದ ವತಿಯಿಂದ ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ 'ಮತದಾನ ಪ್ರಜಾಪ್ರಭುತ್ವಕ್ಕೆ ಎಷ್ಟು ಪೂರಕ' ಕುರಿತು ಕೆಪಿಸಿಸಿ ವಕ್ತಾರ ಸುಧೀರ್ ಕುಮಾರ್ ಮುರೊಳ್ಳಿ ಅವರಿಂದ ವಿಚಾರ ಮಂಡನೆ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ, ರೋಗಿಗಳಿಗೆ ಆರ್ಥಿಕ ಸಹಾಯ ವಿತರಣೆ ಹಾಗೂ ಸಭಾ ಕಾರ್ಯಕ್ರಮ ಆಯೋಜಿಸಲಾಗಿದೆ.

ಮಹಾತ್ಮ ಗಾಂಧಿ ಬಗ್ಗೆ ಮಾತನಾಡುವ ಮುನ್ನ ಬಿಜೆಪಿಯವರು ಆತ್ಮಾವಲೋಕನ ಮಾಡಿಕೊಳ್ಳಲಿ

ಕಾಂಗ್ರೆಸ್ ವಿರುದ್ಧದ ಆರೋಪಕ್ಕೆ ಡಾ.ಯತೀಂದ್ರ ತಿರುಗೇಟು



ಮೈಸೂರು, ಫೆ.6– ಮಹಾತ್ಮ ಗಾಂಧಿ ಅವರ ಬಗ್ಗೆ ಮಾತನಾಡುವ ಮುನ್ನ ಬಿಜೆಪಿಯವರು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಕಾಂಗ್ರೆಸ್ ಮಹಾತ್ಮ ಗಾಂಧಿ ಹೆಸರು ದುರ್ಬಳಕೆ ಮಾಡಿಕೊಂಡಿದೆ ಎಂಬ ಬಿಜೆಪಿ ಆರೋಪದ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಸ್ವರಾಜ್ಯ ಪರಿಕಲ್ಪನೆಯಲ್ಲಿ ನಂಬಿಕೆ ಇಟ್ಟಿದ್ದ ಮಹಾತ್ಮ ಗಾಂಧೀಜಿ ಅವರ ಹೆಸರನ್ನು ನರೇಗಾ ಯೋಜನೆಗೆ ಇಟ್ಟಿದ್ದೇ ತಪ್ಪಾ. ಮಹಾತ್ಮ ಗಾಂಧಿ ಅವರ ಹೆಸರು ಬಿಟ್ಟಿರುವುದಲ್ಲದೆ ಸಾವಿರಾರು ಕೂಲಿ ಕಾರ್ಮಿಕರಿಗೆ ಅನ್ಯಾಯವಾಗುವ ರೀತಿಯಲ್ಲಿ ಕಾಯ್ದೆ ಬದಲಾವಣೆ ಮಾಡಿದ್ದಾರೆ. ಆದ್ದರಿಂದ ಮೊದಲು ಬಿಜೆಪಿಯವರು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದರು.

ಬ್ಯಾಲೆಟ್ ಪೇಪರ್ ಬೆಟರ್!: ಸ್ಥಳೀಯ ಸಂಸ್ಥೆ ಚುನಾವಣೆಗೆ ಬ್ಯಾಲೆಟ್ ಪೇಪರ್ ಬಳಕೆ ಕುರಿತು ಪ್ರತಿಕ್ರಿಯಿಸಿ, ಚುನಾವಣೆಗಳು ಸಂಶಯಕ್ಕೆ ಆಸ್ಪದ ಕೊಡುವಂತಿರಬಾರದು. ಅನುಮಾನಗಳಿದ್ದರೆ ಮುಂದುವರೆಸುವ ಅಗತ್ಯವಿಲ್ಲ. ಬ್ಯಾಲೆಟ್ ಪೇಪರ್ ಬಿಟ್ಟು ಇವಿಎಂ ತಂದಿದ್ದ ದೇಶಗಳೇ ಮತ್ತೆ ಬ್ಯಾಲೆಟ್ ಪೇಪರ್ ಬಳಕೆಗೆ ಮುಂದಾಗಿವೆ. ತಂತ್ರಜ್ಞಾನದಲ್ಲಿ ಮುಂದುವರೆದಿರುವ ದೇಶಗಳೇ ಇವಿಎಂ ಬಿಟ್ಟಿರುವಾಗ ನಾವ್ಯಾಕೆ ಬಳಕೆ ಮಾಡಬೇಕು. ಬ್ಯಾಲೆಟ್ ಪೇಪರ್ ಬೆಟರ್ ಎಂದರು.

ನಿಜಕ್ಕೂ ನನಗೆ ಗೊತ್ತಿಲ್ಲ: ಸಚಿವ ಕೆ.ಜೆ.ಜಾರ್ಜ್ ಅವರ ಇಲಾಖೆಯಲ್ಲಿ ಯತೀಂದ್ರ ಸಿದ್ದರಾಮಯ್ಯ ಮೂಗು ತೂರಿಸುತ್ತಿದ್ದಾರೆ ಎಂಬುದಕ್ಕೆ ಜಾರ್ಜ್ ಅವರೇ ಸ್ಪಷ್ಟನೆ ಕೊಟ್ಟಿದ್ದಾರೆ. ನಿಜಕ್ಕೂ ನನಗೆ ಗೊತ್ತಿಲ್ಲ. ದುರುದ್ದೇಶಪೂರ್ವಕವಾಗಿ ನನ್ನ ಹೆಸರನ್ನು ಎಳೆದು ತರುವ ಕೆಲಸ ಮಾಡಿದ್ದಾರೆ. ಸದನದಲ್ಲೂ ಕೂಡ ನನ್ನ ಹೆಸರನ್ನು ಪ್ರಸ್ತಾಪಿಸಿರುವ ಬಿಜೆಪಿಯವರಿಗೆ ಸಿದ್ದರಾಮಯ್ಯ ಮತ್ತು ಸರ್ಕಾರದ ಮೇಲೆ ಆರೋಪ ಮಾಡಲು ಯಾವುದೇ ವಿಷಯವಿಲ್ಲ. ಹಾಗಾಗಿ ನನ್ನ ಟಾರ್ಗೆಟ್ ಮಾಡಿಕೊಂಡು ಬರುತ್ತಿದ್ದಾರೆ.

ಸತ್ಯಕ್ಕೆ ಜಯ ಸಿಕ್ಕಿದೆ: ಮುಡಾ ನಿವೇಶನ ಹಂಚಿಕೆ ಹಗರಣ ಕುರಿತು ಮಾತನಾಡಿ, ರಾಜಕೀಯ ದುರುದ್ದೇಶದಿಂದ ಸುಳ್ಳು ಆರೋಪ ಮಾಡಿದ್ದಾರೆ ಎಂದು ಮೊದಲಿನಿಂದಲೂ ಹೇಳುತ್ತಿದ್ದೆ. ಅದರಂತೆ ಸತ್ಯಕ್ಕೆ ಜಯ ಸಿಕ್ಕಿದೆ. ಕೇಸ್ ಇನ್ನೂ ಮುಗಿದಿಲ್ಲ. ಜನಪ್ರತಿನಿಧಿ ಕೋರ್ಟ್ ಬಿ–ರಿಪೋರ್ಟ್ ಒಪ್ಪಿದ್ದು, ಮೇಲ್ಮನವಿ ಸಲ್ಲಿಸುತ್ತೇವೆ ಎಂದು ಹೇಳಿರುವವರು ಹೋರಾಟ ಮಾಡಲಿ. ಜನಪ್ರತಿನಿಧಿಗಳ ಕೋರ್ಟ್ ತೀರ್ಪು ಸ್ವಾಗತ ಮಾಡುತ್ತೇವೆ. ನಮ್ಮ ತಾಯಿ ಕೂಡ ಸಂತೋಷ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು.

ನಾಳೆ ಶ್ರೀ ಗುಣನಿಧಿ ತೀರ್ಥರ ಆರಾಧನಾ ಮಹೋತ್ಸವ

ಮೈಸೂರು, ಫೆ.6– ದಾಸ ಸಾಹಿತ್ಯದ ಆದ್ಯ ಪ್ರವರ್ತಕ ಶ್ರೀಮನ್ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಮುಳಬಾಗಿಲು ಶ್ರೀಪಾದರಾಜರ ಮಠದ ಪರಂಪರೆಯ 24ನೇ ಯತಿ ಶ್ರೀ ಗುಣನಿಧಿ ತೀರ್ಥರ ಆರಾಧನಾ ಮಹೋತ್ಸವ ಮಾಘ ಬಹುಳ ಸಪ್ತಮಿ ಫೆ.8ರಂದು ನೆರವೇರಲಿದೆ.

ತಿ.ನರಸೀಪುರ ತಾಲೂಕು ತಾಯೂರು ಗ್ರಾಮದ ಕಪಿಲಾ ನದಿ ತೀರದಲ್ಲಿರುವ ಶ್ರೀಗಳ ಮೂಲ ವೃಂದಾವನ ಸನ್ನಿಧಾನದಲ್ಲಿ ಅಂದು ಬೆಳಗ್ಗೆ 8ಕ್ಕೆ ಮೂಲ ವೃಂದಾವನಕ್ಕೆ ಅಭಿಷೇಕ, ಪಂಚಾಮೃತ, ವಿಶೇಷ ಅಲಂಕಾರ ನೆರವೇರಲಿದೆ.

ಮುಳಬಾಗಿಲು ಶ್ರೀಪಾದರಾಜರ ಮಹಾಸಂಸ್ಥಾನ ಮಠದ ಹಾಲಿ ಪೀಠಾಧಿಪತಿ ಶ್ರೀ ಸುಜಯನಿಧಿ ತೀರ್ಥರ ಸಾನ್ನಿಧ್ಯದಲ್ಲಿ ಬೆಳಗ್ಗೆ 10ಕ್ಕೆ ಸಂಸ್ಥಾನ ಪೂಜೆ, ನಂತರ ಪಂಡಿತರಿಂದ ಪ್ರವಚನ, ಭಜನೆ, ಅಲಂಕಾರ ಪಂಕ್ತಿ, ತೀರ್ಥ ಪ್ರಸಾದ ವಿತರಣೆ ಜರುಗಲಿದೆ. ತಾಯೂರು ವಂಶಸ್ಥರಾದ ಟಿ.ಎನ್.ಮಾಧವ ಮೂರ್ತಿ, ವೇಣುಗೋಪಾಲ ಮತ್ತು ರಂಗನಾಥ ಅವರ ಉಪಸ್ಥಿತಿಯಲ್ಲಿ ಧಾರ್ಮಿಕ ವಿಧಿ ವಿಧಾನಗಳು ಸಂಪನ್ನಗೊಳ್ಳಲಿವೆ.

ಇದೇ ಸಂದರ್ಭ ಗ್ರಾಮದಲ್ಲಿರುವ ಶ್ರೀ ಗೋಪಾಲಕೃಷ್ಣ ದೇವರು, ಜನಮೇಜಯ ಪ್ರತಿಷ್ಠಿತ ಪ್ರಾಣದೇವರು, ಶ್ರೀಪಾದರಾಜರ ಮೃತ್ತಿಕಾ ವೃಂದಾವನಗಳಿಗೂ ವಿಶೇಷ ಪೂಜಾದಿಗಳು ನಡೆಯಲಿವೆ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

ಮೂತ್ರಕೋಶದ ಕಲ್ಲಿನ ತೊಂದರೆಗೆ ತಜ್ಞ ವೈದ್ಯರಿಂದ ಉಚಿತ ತಪಾಸಣೆ; ಚಿಕಿತ್ಸಾ ಶಿಬಿರ

ಮೈಸೂರು, ಫೆ.6– ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಶಲ್ಯತಂತ್ರ ಹೊರರೋಗಿ ವಿಭಾಗದಲ್ಲಿ ಫೆ.1 ರಿಂದ 28 ರವರೆಗೆ ಮೂತ್ರಕೋಶದ ಕಲ್ಲಿನ ತೊಂದರೆಗೆ (kidney Stone) ವಿಶೇಷ ಚಿಕಿತ್ಸಾ ಶಿಬಿರವನ್ನು ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ (ಕೆಲಸದ ದಿನಗಳಂದು) ಆಯೋಜಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಸಹಾಯಕ ಪ್ರಾಧ್ಯಾಪಕರಾದ ಡಾ|| ಕರೋಲಿನ್ ಮೊ.ಸಂಖ್ಯೆ: 9449412309ನ್ನು ಸಂಪರ್ಕಿಸಬಹುದಾಗಿದೆ ಎಂದು ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವಾಗತ



ಮೈಸೂರು ಸಿದ್ಧಾರ್ಥನಗರ ಸಂಚಾರ ಠಾಣೆಯ ನೂತನ ಕಟ್ಟಡ ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿರುವ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ಮೈಸೂರು ಹೊರವಲಯದಲ್ಲಿ ಕೆಪಿಸಿಸಿ ವಕ್ತಾರ ಎಚ್.ಎ.ವೆಂಕಟೇಶ್, ಕಾಂಗ್ರೆಸ್ ಮುಖಂಡರಾದ ಪದ್ಮನಾಭ್, ಬಿ.ಎಲ್.ಪುಟ್ಟಸ್ವಾಮಿ, ಉಮೇಶ್, ಸಿ.ಮಂಜುನಾಥ್ ಮತ್ತಿತರರು ಸ್ವಾಗತಿಸಿದರು.

ಸ್ವಚ್ಛ ಸರ್ವೇಕ್ಷಣೆ ತಂಡ ಲ್ಯಾನ್ಸ್‌ಡೌನ್ ಕಟ್ಟಡದತ್ತ ಸುಳಿಯಲು ಬಿಡಬೇಡಿ! ಪ್ಲೀಸ್...!!

ಕೊಳಚೆ ವಲಯವಾಗಿರುವ ಪಾರಂಪರಿಕ ಕಟ್ಟಡ, ಸುತ್ತಮುತ್ತಲ ಪ್ರದೇಶ!



ಮೈಸೂರಿನ ಲ್ಯಾನ್ಸ್‌ಡೌನ್ ಕಟ್ಟಡ ಹಾಗೂ ಹಿಂಭಾಗದ ಗಲ್ಲಿಯ ದುಸ್ಥಿತಿ.

ಮೈಸೂರು, ಫೆ.6– ಸ್ವಚ್ಛ ಸರ್ವೇಕ್ಷಣೆ ಸಮೀಕ್ಷೆ ಆರಂಭಕ್ಕೆ ದಿನಗಣನೆ ಆರಂಭವಾಗಿದ್ದು, ಈ ಬಾರಿ ಉತ್ತಮ ಸ್ಥಾನ ಗಳಿಸುವ ನಿಟ್ಟಿನಲ್ಲಿ ಮೈಸೂರು ಮಹಾನಗರ ಪಾಲಿಕೆ ಇನ್ನಿಲ್ಲದ ಕಸರತ್ತು ನಡೆಸಿದೆ.

ಆದರೆ, ನಗರದ ಹೃದಯ ಭಾಗದಲ್ಲಿರುವ ಪಾರಂಪರಿಕ ಲ್ಯಾನ್ಸ್‌ಡೌನ್ ಕಟ್ಟಡದ ಆಸುಪಾಸಿನ ದುಸ್ಥಿತಿ ನೋಡಿದರೆ ಸಮೀಕ್ಷೆದಾರರು ಕ್ಷಣಾರ್ಧದಲ್ಲಿ ಕಾಲ್ಕೀಳುವುದು ನಿಶ್ಚಿತ. ಮೇಲ್ಛಾವಣಿ ಕುಸಿದ ಕಾರಣದಿಂದ ಬರೋಬ್ಬರಿ 14 ವರ್ಷಗಳಿಂದ ನಿರ್ಲಕ್ಷ್ಯಕ್ಕೆ ಗುರಿಯಾಗಿರುವ ಈ ಪಾರಂಪರಿಕ ಕಟ್ಟಡ ಅಕ್ಷರಶಃ ಕೊಳಚೆ ಪ್ರದೇಶವಾಗಿ ಬದಲಾಗಿದೆ.

ನವೀಕರಣಗೊಳಿಸಿ ಪಾರಂಪರಿಕ ಕಟ್ಟಡವನ್ನು ಉಳಿಸಿಕೊಳ್ಳುವುದೋ ಅಥವಾ ನೆಲಸಮಗೊಳಿಸಿ ಹೊಸದಾಗಿ ನಿರ್ಮಿಸುವುದೋ ಎಂಬ ಕಿತ್ತಾಟದಿಂದ ನೋಡು ನೋಡುತ್ತಲೇ ಕಟ್ಟಡ ಅವಸಾನದತ್ತ ಸಾಗಿದೆ. ಕಿಟಕಿಗಳು, ಬಾಗಿಲುಗಳು ಕಣ್ಮರೆಯಾಗುತ್ತಿವೆ. ಮರದ ತೊಲೆಗಳನ್ನು ಕಿತ್ತೊಯ್ಯುವ ಪ್ರಯತ್ನ ನಡೆದಿದೆ. ಕೆಲವೆಡೆ ಇಟ್ಟಿಗೆಗಳು ನೆಲಕ್ಕುರುಳಿ, ಗೋಡೆ ಕುಸಿಯುವ ಸ್ಥಿತಿ ನಿರ್ಮಾಣವಾಗಿದೆ. ಇಡೀ ಕಟ್ಟಡ ಪಾಳು ಕೊಂಪೆಯಾಗಿದ್ದು ಸಂಜೆಯಾಗುತ್ತಲೇ ವ್ಯಸನಿಗಳ ಅನೈತಿಕ ಚಟುವಟಿಕೆಗಳಿಗೆ ಆಶ್ರಯ ತಾಣವಾಗಿದೆ.

ಗಬ್ಬು ನಾರುವ ಗಲ್ಲಿ: ಲ್ಯಾನ್ಸ್‌ಡೌನ್ ಕಟ್ಟಡದ ಹಿಂಬದಿ ಗಲ್ಲಿ ಗಬ್ಬೆದ್ದು ನಾರುತ್ತಿದೆ. ಸಮೀಕ್ಷೆ ನೆಪದಲ್ಲಾದರೂ ಶುಚಿಗೊಳಿಸುವ ಪ್ರಯತ್ನಕ್ಕೂ ಪಾಲಿಕೆ ಮುಂದಾಗಿಲ್ಲ. ಪಾರಂಪರಿಕ ಕಟ್ಟಡದ ಗೋಡೆ ಮೂತ್ರ ವಿಸರ್ಜನೆಗೆ ನೆರವಾಗುತ್ತಿದೆ. ಸಮೀಪದ ವ್ಯಾಪಾರಿಗಳು ಎಷ್ಟೇ ಎಚ್ಚರಿಸಿದರೂ ಬಯಲು ಶೌಚ ತಪ್ಪಿಸಲು ಸಾಧ್ಯವಾಗಿಲ್ಲ. ಹಗಲಲ್ಲೇ ಯಾವ ಅಂಜಿಕೆ–ಅಳುಕಿಲ್ಲದೆ ಮೂತ್ರ ವಿಸರ್ಜಿಸುವ ಮಾನಹೀನರು, ಪ್ರಶ್ನಿಸಿದವರಿಗೇ ಧಮ್ಕಿ ಹಾಕುತ್ತಾರೆ. ಪರಿಣಾಮ ಇಡೀ ಗಲ್ಲಿ ಹಾಗೂ ಸುತ್ತಮುತ್ತ ದುರ್ವಾಸನೆ ಆವರಿಸಿದೆ.

ಕಸದ ರಾಶಿ: ಒಂದೆಡೆ ಮೂತ್ರದ ಘಾಟು ಮೂಗಿಗೆ ಬಡಿದರೆ ಮತ್ತೊಂದೆಡೆ ಗಲ್ಲಿಯುದ್ದಕ್ಕೂ ಬಿದ್ದಿರುವ ಕಸದ ರಾಶಿ ಕಣ್ಣಿಗೆ ರಾಚುತ್ತದೆ. ಕಸವನ್ನು ಪ್ಲಾಸ್ಟಿಕ್ ಕವರ್‌ಗಳಲ್ಲಿ ತುಂಬಿ ಇಲ್ಲಿ ಬಿಸಾಡಲಾಗಿದೆ. ಈರುಳ್ಳಿ ಸಿಪ್ಪೆ ಇನ್ನಿತರ ತರಕಾರಿ ತ್ಯಾಜ್ಯ, ರಟ್ಟುಗಳು ಸೇರಿದಂತೆ ತರಹೇವಾರಿ ತ್ಯಾಜ್ಯವನ್ನು ಸುರಿಯಲಾಗಿದೆ. ರಾತ್ರಿ ವೇಳೆ ಕಸಕ್ಕೆ ಬೆಂಕಿ ಹಚ್ಚಲಾಗುತ್ತದೆ. ಜ್ವಾಲೆ ಹಾಗೂ ಹೊಗೆಯಿಂದ ಲ್ಯಾನ್ಸ್‌ಡೌನ್ ಕಟ್ಟಡದ ಗೋಡೆ ಸುಟ್ಟು ಕಪ್ಪಾಗಿ ಹೋಗಿದೆ. ಬಿಡಾಡಿ ಹಸುಗಳು, ಶ್ವಾನಗಳ ಹಿಂಡು ಆಹಾರಕ್ಕಾಗಿ ಹೆಕ್ಕುವುದರಿಂದ ತ್ಯಾಜ್ಯವೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿದೆ. ಕ್ರಿಮಿಕೀಟಗಳ ಸಂತತಿ ಹೆಚ್ಚಾಗಿ, ಸಾಂಕ್ರಾಮಿಕ ರೋಗದ ಭೀತಿ ಸೃಷ್ಟಿಯಾಗಿದೆ.

ಒಟ್ಟಾರೆ ಒಂದೂವರೆ ದಶಕದ ಹಿಂದೆ ಒಂದು ಸುಂದರ ಪಾರಂಪರಿಕ ಸ್ಮಾರಕದಂತಿದ್ದ ಲ್ಯಾನ್ಸ್‌ಡೌನ್ ಕಟ್ಟಡ, ಮನುಷ್ಯರ ನಿರ್ಲಕ್ಷ್ಯ ಮತ್ತು ದೌರ್ಜನ್ಯಕ್ಕೆ ಗುರಿಯಾಗಿ ನಲುಗುತ್ತಿದೆ. ಸ್ವಚ್ಛ ಸರ್ವೇಕ್ಷಣೆ ನೆಪದಲ್ಲಾದರೂ ಲ್ಯಾನ್ಸ್‌ಡೌನ್ ಕಟ್ಟಡದ ಹಿಂಭಾಗದ ಗಲ್ಲಿಯನ್ನು ಸ್ವಚ್ಛಗೊಳಿಸಿ, ಮತ್ತೆ ಇಂತಹ ದುಸ್ಥಿತಿ ನಿರ್ಮಾಣವಾಗದಂತೆ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಬನ್ನಿ ನಾವೂ ಜೊತೆ ಸೇರುತ್ತೇವೆ: ಮೈಸೂರು ಮಹಾನಗರ ಪಾಲಿಕೆಯು ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ವಿವಿಧ ಸ್ವಚ್ಛತಾ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಚಿತ್ರಕಲೆ, ಆಶುಭಾಷಣ, ಪ್ರಬಂಧ ಸ್ಪರ್ಧೆ, ಸ್ವಚ್ಛ ನಡಿಗೆ–ಓಟ ಇನ್ನಿತರ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ಮಾಡಲಾಗುತ್ತಿದೆ. ಇದರೊಂದಿಗೆ ಆಯಾ ಪ್ರದೇಶದ ಜನರನ್ನು ಒಗ್ಗೂಡಿಸಿಕೊಂಡು ಆ ಭಾಗದ ಸ್ವಚ್ಛತೆಗೂ ಮುಂದಾಗಬೇಕು ಎಂದು ಮನವಿ ಮಾಡಿದ್ದಾರೆ.

ಇಂದು ಸಿದ್ಧಾರ್ಥನಗರ ಸಂಚಾರ ಪೊಲೀಸ್ ಠಾಣೆ ಕಟ್ಟಡ ಉದ್ಘಾಟನೆ



ಉದ್ಘಾಟನೆಗೊಳ್ಳಲಿರುವ ಸಿದ್ಧಾರ್ಥನಗರ ಸಂಚಾರ ಪೊಲೀಸ್ ಠಾಣೆ ಕಟ್ಟಡ

ಮೈಸೂರು, ಫೆ.6(ಎಸ್‌ಪಿಎನ್)– ಮೈಸೂರಿನ ಸಿದ್ಧಾರ್ಥನಗರ ಸಂಚಾರಿ ಪೊಲೀಸ್ ಠಾಣೆಯ ನೂತನ ಕಟ್ಟಡವನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಶನಿವಾರ ಬೆಳಗ್ಗೆ 11 ಗಂಟೆಗೆ ಉದ್ಘಾಟನೆ ಮಾಡಲಿದ್ದಾರೆ.

ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಎ.ಎಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಡಿ.ರವಿಶಂಕರ್, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಕೆ.ಹರೀಶ್‌ಗೌಡ, ಡಾ.ಎಸ್.ಯತೀಂದ್ರ, ಕೆ.ವಿವೇಕಾನಂದ, ಶಿವಕುಮಾರ್ ಉಪಸ್ಥಿತರಿರುವವರು ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆ ವಹಿಸಲಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಸೇರಿದಂತೆ ಮುಖಂಡರು ಉಪಸ್ಥಿತರಿರುವರು.

ಕರ್ನಾಟಕ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ, ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎಸ್.ಸೆಲ್ವಕುಮಾರ್, ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮದ ಮುಖ್ಯ ಇಂಜಿನಿಯರ್ ಪಿ.ಬಿ.ಪ್ರಕಾಶ್, ಮೈಸೂರು ನಗರ ಪಾಲಿಕೆ ಆಡಳಿತಾದಿಕಾರಿ ನಿತೇಶ್ ಪಾಟೀಲ್, ದಕ್ಷಿಣ ವಲಯ ಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿ ಕೆ.ಎಸ್.ಸುಂದರ್‌ರಾಜ್ ಸೇರಿದಂತೆ ಇತರೆ ಅಧಿಕಾರಿ ವರ್ಗ ಉಪಸ್ಥಿತರಿದ್ದಾರೆ.

ಸಂವಿಧಾನ ವಿರೋಧಿಗಳಿಗೆ ಅಧಿಕಾರ ಕೊಡಲೇಬಾರದು

● ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅಭಿಮತ ● ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಬೇಕಾದಲ್ಲಿ ಇದು ಅನಿವಾರ್ಯ ● ಅಖಿಲ ಕರ್ನಾಟಕ ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿಗಳ ಬಳಗದ ಎಂಟನೇ ವಾರ್ಷಿಕೋತ್ಸವ



ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು.

ಮೈಸೂರು, ಫೆ.6(ಎಂಕೆ)– ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಬೇಕಾದರೆ, ಸಂವಿಧಾನ ವಿರೋಧಿಗಳ ಕೈಗೆ ಅಧಿಕಾರ ಕೊಡಲೇಬಾರದು ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಅಖಿಲ ಕರ್ನಾಟಕ ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿಗಳ ಬಳಗದ ಎಂಟನೇ ವಾರ್ಷಿಕೋತ್ಸವ, ಜಿಲ್ಲಾ ಮತ್ತು ತಾಲೂಕು ಅಧ್ಯಕ್ಷರ ಪದಗ್ರಹಣ ಹಾಗೂ ವಿವಿಧ ಕ್ಷೇತ್ರಗಳ ಸಾಧಕರ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ನಾವು ಯಾರಿಗೆ ಅಧಿಕಾರ ಕೊಡುತ್ತೇವೆ ಎಂಬುದು ಮುಖ್ಯವಾಗುತ್ತದೆ. ಸಮಾಜದಲ್ಲಿ ಕಟ್ಟಕಡೆಯ ವ್ಯಕ್ತಿಗೂ ಸಮಾನತೆ, ಸಾಮಾಜಿಕ ನ್ಯಾಯ ಕೊಡುವವರ ಕೈಗೆ ಅಧಿಕಾರ ನೀಡಿದರೆ ಸಂವಿಧಾನ ಉಳಿಯುತ್ತದೆ ಎಂದರು.

ಇತ್ತೀಚಿನ ದಿನಮಾನಗಳಲ್ಲಿ ಸಂವಿಧಾನ ವಿರೋಧಿ ಶಕ್ತಿಗಳು ಹೆಚ್ಚಾಗುತ್ತಿವೆ. ಅವರಿಗೆ ಹೆಚ್ಚೆಚ್ಚು ಅಧಿಕಾರ ದೊರೆಯುತ್ತಿರುವುದು ಅಪಾಯಕಾರಿ. ಈ ರೀತಿ ಆಗದಂತೆ ನೋಡಿಕೊಳ್ಳಬೇಕು. ಸಂವಿಧಾನದ ಮೌಲ್ಯಗಳ ಮೇಲೆ ನಂಬಿಕೆ ಇಟ್ಟಿರುವ, ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವ ನಾಯಕರಿಗೆ ಅಧಿಕಾರ ನೀಡಬೇಕು. ಸಂವಿಧಾನದ ರಕ್ಷಣೆಯಾದರಷ್ಟೇ ನಮ್ಮೆಲ್ಲರ ಹಕ್ಕುಗಳು ರಕ್ಷಣೆಯಾದಂತೆ ಎಂದು ತಿಳಿಸಿದರು.

ಅಪರೂಪದ ರಾಜಕಾರಣಿ: ಡಾ.ಹೆಚ್.ಸಿ. ಮಹದೇವಪ್ಪ ಅವರು ಅಪರೂಪದ ರಾಜಕಾರಣಿ. ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಸಂವಿಧಾನದ ಮೇಲೆ ನಂಬಿಕೆ ಇಟ್ಟವರು. ಸಿದ್ದರಾಮಯ್ಯ ಅವರ ಪರಮಾಪ್ತರು ಆಗಿರುವ ಅವರು, ಜೆಡಿಎಸ್‌ನಿಂದ ಸಿದ್ದರಾಮಯ್ಯ ಅವರನ್ನು ಉಚ್ಚಾಟಿಸಿದಾಗ ಅವರೊಂದಿಗೆ ಗಟ್ಟಿಯಾಗಿ ನಿಂತರು. ನಂತರ ಎಬಿಪಿಜೆಡಿಗೆ ಬಂದರು. ಅಲ್ಲಿಂದ ಕಾಂಗ್ರೆಸ್‌ಗೆ ಬಂದರು. ಟಿ.ನರಸೀಪುರದಿಂದ ಆರು ಬಾರಿ ಶಾಸಕರಾಗಿ, ನಂತರ ಸಚಿವರಾಗಿ ಸಿದ್ದರಾಮಯ್ಯ ಅವರ ಜೊತೆ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಕೆಲಸ ಮಾಡುತ್ತಿರುವ ಸಿದ್ದರಾಮಯ್ಯ ಅವರ ಯಶಸ್ಸಿನಲ್ಲಿ ಮಹದೇವಪ್ಪ ಅವರ ಪಾಲು ಕೂಡ ಇದೆ ಎಂದರು.

ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಸಮಾರಂಭ ಉದ್ಘಾಟಿಸಿದರು. ಹಿರಿಯ ಚಿಂತಕ ಪ್ರೊ.ರಾಜಪ್ಪ ದಳವಾಯಿ, ಮೈವಿವಿ ಹಿರಿಯ ಪ್ರಾಧ್ಯಾಪಕ ಡಾ.ಡಿ.ಆನಂದ್, ಬಳಗದ ಗೌರವಾಧ್ಯಕ್ಷ ಬನ್ನೂರು ಎಂ.ಎನ್.ಸ್ವಾಮಿ, ರಾಜ್ಯಾಧ್ಯಕ್ಷ ಹಿನಕಲ್ ಪಿ. ನಂಜುಂಡ, ಕಾರ್ಯಾಧ್ಯಕ್ಷ ಕುರುಬೂರು ಡಾ.ಕೆ.ಎನ್.ಬಸವರಾಜು, ಉಪಾಧ್ಯಕ್ಷ ಕಡಕೊಳ ಕೆ.ವಿ.ಭರತರಾಜ್, ಪ್ರಧಾನ ಕಾರ್ಯದರ್ಶಿ ಬೆನಕನಹಳ್ಳಿ ಡಾ.ಬಿ.ಆರ್.ನಾಗರಾಜು, ಕಾರ್ಯದರ್ಶಿ ಹರದನಹಳ್ಳಿ ಆರ್.ಮಹೇಶ್, ಖಜಾಂಚಿ ದಡದಹಳ್ಳಿ ಬಿ.ಎಂ.ಮಹದೇವ್, ಮಾಧ್ಯಮ ಸಲಹೆಗಾರ ಕೋಟೆ ಹೆಚ್.ಕೆ.ಮಂಜುನಾಥ್, ನಿರ್ದೇಶಕರಾದ ಮಾವಿನಹಳ್ಳಿ ನಾಗೇಶ್, ಹುಲ್ಲಹಳ್ಳಿ ಬಾಬು, ಬೆನಕನಹಳ್ಳಿ ಎಂ.ಹರೀಶ್‌ಕುಮಾರ್ ಮತ್ತಿತರರಿದ್ದರು.

ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ...

ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದಿರುವ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್(ಪತ್ರಿಕೋದ್ಯಮ ಕ್ಷೇತ್ರ), ಹಿರಿಯ ಹೋರಾಟಗಾರ ಗುರುಪ್ರಸಾದ್ ಕೆರೆಗೂಡು(ಸಂಘಟನೆ), ಜಯದೇವ ಆಸ್ಪತ್ರೆ ವೈದ್ಯ ಡಾ.ಪಶುಪತಿ (ಆರೋಗ್ಯ), ಪ್ರಗತಿಪರ ರೈತ ಕೆ.ಜಿ. ಗೋಪಾಲಯ್ಯ(ಕೃಷಿ), ಆಕಾಶವಾಣಿ ಜಾನಪದ ಕಲಾವಿದೆ ಶ್ರೀಮತಿ ಗಿರಿಜಮ್ಮ (ಜಾನಪದ), ಪೌರಕಾರ್ಮಿಕ ಚಿನ್ನಪ್ಪ (ಸ್ವಚ್ಛತೆ), ಅಂತಾರಾಷ್ಟ್ರೀಯ ಖೋ ಖೋ ಆಟಗಾರ್ತಿ ಚೈತ್ರ(ಕ್ರೀಡೆ), ಮಲಬಾರ್ ಗೋಲ್ಡ್ ದಕ್ಷಿಣ ವಲಯ ಮುಖ್ಯಸ್ಥ ಶರಫುದ್ದೀನ್(ಸಮಾಜ ಸೇವೆ), ವಾಸ್ತುಶಿಲ್ಪ ಕಲಾವಿದ ರಮೇಶ್(ಶಿಲ್ಪಕಲೆ) ಹಾಗೂ ಎಸ್‌ಎಸ್‌ಎಲ್‌ಸಿ ಹನೂರು ತಾಲೂಕು ಟಾಪರ್ ಆರ್.ಸಂಜನ(ಶಿಕ್ಷಣ) ಅವರನ್ನು ಸನ್ಮಾನಿಸಿ, ಅಭಿನಂದಿಸಲಾಯಿತು.

ಅರಣ್ಯ ಭವನದ ಆವರಣದಲ್ಲಿ ಮರಗಳ ಹನನ; ಪರಿಸರವಾದಿಗಳ ಖಂಡನೆ



ಮೈಸೂರು ಅರಣ್ಯ ಭವನದ ಶ್ರೀಗಂಧದ ಕೋಠಿ ಬಳಿ ಮರಗಳ ಕಡಿದಿರುವುದು.


ಮೈಸೂರು, ಫೆ.6(ಎಂಟಿವೈ)– ಮೈಸೂರಿನ ಅರಣ್ಯ ಭವನದ ಆವರಣದ ಶ್ರೀಗಂಧದ ಕೋಠಿ ಬಳಿ ಸಿಬ್ಬಂದಿಗಳಿಗಾಗಿ ವಸತಿ ಗೃಹ ನಿರ್ಮಾಣಕ್ಕೆ ಹತ್ತಕ್ಕೂ ಹೆಚ್ಚು ಮರಗಳ ಹನನ ಮಾಡಿದ್ದು, ಇದಕ್ಕೆ ಪರಿಸರವಾದಿಗಳು ಆಕ್ಷೇಪಿಸಿದ್ದಾರೆ.

ಅರಣ್ಯ ಭವನದ ಆವರಣದಲ್ಲಿ ಸಿಬ್ಬಂದಿಗಳ ವಸತಿ ಗೃಹದ ಕೊರತೆಯುಂಟಾಗಿದ್ದು, ಹೊಸದಾಗಿ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಅರಣ್ಯ ಭವನದ ಶ್ರೀಗಂಧದ ಕೋಠಿ ಪಕ್ಕದ ಖಾಲಿ ಜಾಗದಲ್ಲಿ ಹೊಸ ವಸತಿ ಗೃಹ ನಿರ್ಮಾಣಕ್ಕೆ ಸ್ಥಳ ಗುರುತಿಸಲಾಗಿದೆ. ನಿರ್ಮಾಣ ಕಾಮಗಾರಿಗೂ ಮುನ್ನ ಅಲ್ಲಿ ಬೆಳೆದಿದ್ದ ಹತ್ತಕ್ಕೂ ಹೆಚ್ಚು ಮರಗಳನ್ನು ಅರಣ್ಯ ಇಲಾಖೆ ಕಡಿದಿದ್ದು, ಪರಿಸರವಾದಿಗಳು ಅರಣ್ಯ ಇಲಾಖೆಯ ಈ ಕ್ರಮವನ್ನು ಖಂಡಿಸಿದ್ದಾರೆ.

ಎಲ್ಲೆಡೆ ಮರ ಬೆಳೆಸುವಂತೆ ಅರಣ್ಯ ಇಲಾಖೆ ಸಾರ್ವಜನಿಕರಿಗೆ ಸಲಹೆ ನೀಡುತ್ತದೆ. ಆದರೆ, ತಮ್ಮದೆ ಕಚೇರಿ ಆವರಣದಲ್ಲಿ ಬೆಳೆದಿದ್ದ ಮರಗಳನ್ನೇ ಕಡಿದಿದ್ದಾರೆ. ಬೇಲಿಯೇ ಎದ್ದು ಹೊಲ ಮೇಯ್ದಂತೆ ಅರಣ್ಯ ಇಲಾಖೆ ಅಧಿಕಾರಿಗಳು ವರ್ತಿಸುತ್ತಿದ್ದಾರೆ. ವಸತಿ ಗೃಹ ನಿರ್ಮಾಣದ ಅವಶ್ಯಕತೆ ಇದ್ದರೆ ಮರಗಳನ್ನು ಉಳಿಸಿಕೊಂಡು ಕಟ್ಟಡ ಕಾಮಗಾರಿ ನಡೆಸಬಹುದಾಗಿತ್ತು ಎಂದು ಪರಿಸರವಾದಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಇರ್ವಿನ್ ರಸ್ತೆಯ ಜಾಮಿಯಾ ಮಸೀದಿಯಲ್ಲಿ ಜನ ಸಂಪರ್ಕ ಸಭೆ

ಡ್ರಗ್ಸ್, ಅಪರಾಧ ಚಟುವಟಿಕೆಗಳ ಮಾಹಿತಿ ನೀಡುವಂತೆ ಪೊಲೀಸರಿಂದ ಸಲಹೆ



ಮೈಸೂರಿನ ಇರ್ವಿನ್ ರಸ್ತೆಯ ಜಾಮಿಯಾ ಮಸೀದಿಯಲ್ಲಿ ಶುಕ್ರವಾರ ಪೊಲೀಸರು ಜನ ಸಂಪರ್ಕ ಸಭೆ ನಡೆಸಿದರು.

ಮೈಸೂರು, ಫೆ.6(ಬಿಎಲ್‌ಯು)– ಮೈಸೂರಿನ ಇರ್ವಿನ್ ರಸ್ತೆಯ ಜಾಮಿಯಾ ಮಸೀದಿಯಲ್ಲಿ ಇಂದು ಪೊಲೀಸರು ಜನ ಸಂಪರ್ಕ ಸಭೆ ಆಯೋಜಿಸಿದ್ದರು. ಮಕ್ಕಳು ಡ್ರಗ್ಸ್ ಸೇವಿಸಿದರೆ ಏನೆಲ್ಲಾ ದುಷ್ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಈ ವೇಳೆ ಸಾರ್ವಜನಿಕರಿಗೆ ಮನದಟ್ಟು ಮಾಡಿದರು.

ಇಂದು ಮಧ್ಯಾಹ್ನ ನಡೆದ ಜನ ಸಂಪರ್ಕ ಸಭೆಯಲ್ಲಿ ನೂರಾರು ಮಂದಿ ಸಾರ್ವಜನಿಕರು ಭಾಗವಹಿಸಿದ್ದರು.

ಈ ವೇಳೆ ಮಾತನಾಡಿದ ಲಷ್ಕರ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಲೋಲಾಕ್ಷಿ, ಕಾನೂನು ಬಾಹಿರ ಚಟುವಟಿಕೆಗಳು ನಡೆದಾಗ ಕೂಡಲೇ ಪೊಲೀಸರಿಗೆ ಗೌಪ್ಯ ಮಾಹಿತಿ ನೀಡಬೇಕು. ಮಾಹಿತಿ ನೀಡಿದವರ ಹೆಸರನ್ನು ಗೌಪ್ಯವಾಗಿಡಲಾಗುವುದು ಎಂದು ಭರವಸೆ ನೀಡಿದರು.

ಡ್ರಗ್ಸ್ ಸೇರಿದಂತೆ ಇತರೆ ಅಪರಾಧ ಚಟುವಟಿಕೆಯನ್ನು ಮಟ್ಟ ಹಾಕಲು ಸಾರ್ವಜನಿಕರು ಪೊಲೀಸರ ಜೊತೆ ಕೈಜೋಡಿಸ ಬೇಕು ಎಂದು ಸಲಹೆ ನೀಡಿದರು. ಮಾದಕ ವಸ್ತುಗಳ ಸಂಗ್ರಹ, ಮಾರಾಟ, ಸಾಗಾಣಿಕೆ ಸೇರಿದಂತೆ ಇತರೆ ಕಾನೂನುಬಾಹಿರ ಚಟುವಟಿಕೆಗಳು ತಿಳಿದರೆ ಕೂಡಲೇ ಪೊಲೀಸರಿಗೆ ತಿಳಿಸಬೇಕು ಎಂದು ಹೇಳಿದರು.

ಮಕ್ಕಳಲ್ಲಿ ಆಗುವ ಬದಲಾವಣೆಯನ್ನು ಸೂಕ್ಷ್ಮವಾಗಿ ಗಮನಿಸಬೇಕು. ಅವರೇನಾದರೂ ಡ್ರಗ್ಸ್ ಸೇವಿಸುವುದು ಕಂಡು ಬಂದರೆ ಕೂಡಲೇ ಅದರಿಂದ ಮುಕ್ತರಾಗಿಸಲು ಕ್ರಮ ವಹಿಸಬೇಕು. ಅಪ್ರಾಪ್ತ ಮಕ್ಕಳಿಗೆ ವಾಹನಗಳನ್ನು ನೀಡಬಾರದು ಎಂದು ತಾಕೀತು ಮಾಡಿದರು.

ಕಳವು ಮಾಡಿರುವ ವಸ್ತುಗಳನ್ನು ಗುಜರಿಗೆ ಮಾರಾಟಕ್ಕೆ ತಂದರೆ ಅದನ್ನು ಖರೀದಿಸಬಾರದು. ಅಲ್ಲದೆ ಈ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದು ಲೋಲಾಕ್ಷಿ ತಿಳಿಸಿದರು.

ಡ್ರಗ್ಸ್ ಜಾಲ ಪತ್ತೆ ಮಾಡುವಲ್ಲಿ ವೈಫಲ್ಯದ ಹಿನ್ನೆಲೆ

ಮೈಸೂರಿನ ಸಿಸಿಬಿಯ 8 ಸಿಬ್ಬಂದಿ ವರ್ಗಾವಣೆ

ಮೈಸೂರು, ಫೆ.6(ಬಿಎಲ್‌ಯು)– ಅಂತರರಾಜ್ಯ ಪೊಲೀಸರಿಂದ ಮೈಸೂರಿನಲ್ಲಿ ಒಂದೊಂದಾಗಿ ಬೆಳಕಿಗೆ ಬರುತ್ತಿರುವ ಡ್ರಗ್ಸ್ ಜಾಲ ಮಟ್ಟ ಹಾಕಲು ವಿಫಲರಾದ ಸಿಸಿಬಿ (ಸಿಟಿ ಕ್ರೈಂ ಬ್ರ್ಯಾಂಚ್) ಎಂಟು ಸಿಬ್ಬಂದಿಯನ್ನು ವರ್ಗಾವಣೆ ಮಾಡಲಾಗಿದೆ.

ಡ್ರಗ್ಸ್ ದಂಧೆಗೆ ಕಡಿವಾಣ ಹಾಕಲು ಪರಿಣಾಮಕಾರಿಯಾಗಿ ಕೆಲಸ ಮಾಡದ ಸಿಸಿಬಿ ಮುಖ್ಯ ಪೇದೆಗಳಾದ ಅನಿಲ್, ರಾಮಸ್ವಾಮಿ, ಪ್ರಕಾಶ್, ಗೋವಿಂದ, ಪೇದೆಗಳಾದ ಶಿವಣ್ಣ, ದೊಡ್ಡೆಗೌಡ, ರಾಜು ಹಾಗೂ ಉಮಾ ಮಹೇಶ್ವರ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ಡ್ರಗ್ ಪೆಡ್ಲರ್‌ಗಳ ಪತ್ತೆಯಲ್ಲಿ ವಿಫಲ, ಅಪರಾಧ ಕೃತ್ಯಕ್ಕೆ ಕಡಿವಾಣ ಹಾಕುವಲ್ಲಿ ನಿರ್ಲಕ್ಷ್ಯ ಸೇರಿದಂತೆ ಇತರೆ ಕರ್ತವ್ಯ ಲೋಪವನ್ನು ಗಮನದಲ್ಲಿಟ್ಟುಕೊಂಡು ಸಿಸಿಬಿಯಲ್ಲಿ ಸರ್ಜರಿ ಮಾಡಲಾಗಿದೆ. ಇವರ ಜೊತೆಗೆ ರೌಡಿ ಪ್ರತಿಬಂಧಕ ದಳದ ಮೂವರು ಸಿಬ್ಬಂದಿಯನ್ನು ಕೂಡ ವರ್ಗಾಯಿಸಲಾಗಿದೆ.

ಮೈಸೂರಿನಲ್ಲಿ ನಡೆಯುತ್ತಿರುವ ಡ್ರಗ್ಸ್ ತಯಾರಿಕೆಯನ್ನು ದೆಹಲಿ, ಮಹಾರಾಷ್ಟ್ರ ಪೊಲೀಸರು ಬಂದು ಪತ್ತೆ ಮಾಡುತ್ತಿದ್ದಾರೆ. ಸ್ಥಳೀಯ ಪೊಲೀಸರು ಏನು ಮಾಡುತ್ತಿದ್ದಾರೆ ಎಂದು ಪ್ರಶ್ನೆ ಮಾಡಿರುವ ಹಿರಿಯ ಅಧಿಕಾರಿಗಳು, ಕರ್ತವ್ಯ ಲೋಪವೆಸಗಿದ ಸಿಬ್ಬಂದಿಯನ್ನು ವರ್ಗಾಯಿಸಲಾಗಿದೆ.

ಈ ಮೊದಲು ಕರ್ತವ್ಯ ನಿರ್ವಹಿಸುತ್ತಿದ್ದ ಆಯಾ ಪೊಲೀಸ್ ಠಾಣೆಗಳಿಗೆ ಎಂಟು ಮಂದಿಯನ್ನು ವರ್ಗ ಮಾಡಲಾಗಿದೆ. ಈಗ ಇವರ ಸ್ಥಾನಕ್ಕೆ ಸಮರ್ಥ ಸಿಬ್ಬಂದಿಗಳನ್ನು ನಿಯೋಜಿಸಲು ನಿರ್ಧರಿಸಲಾಗಿದೆ ಎಂದು ತಿಳಿದು ಬಂದಿದೆ. ಈ ಮೂಲಕ ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರಿದರೆ ವರ್ಗಾವಣೆ ಶಿಕ್ಷೆ ಖಚಿತ ಎಂಬ ಎಚ್ಚರಿಕೆಯ ಸಂದೇಶ ರವಾನಿಸಿದ್ದಾರೆ. ಇದನ್ನು ಅರಿತು ಡ್ರಗ್ಸ್ ಜಾಲ ಮಟ್ಟ ಹಾಕುವುದು, ಅಪರಾಧ ಚಟುವಟಿಕೆಗಳಿಗೆ ಕಡಿವಾಣ ಹಾಕುವುದು ಸೇರಿದಂತೆ ಇತರೆ ಕಾರ್ಯದಲ್ಲಿ ಎಲ್ಲರೂ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಿದೆ. ಇಲ್ಲದಿದ್ದರೆ ವರ್ಗಾವಣೆ ಶಿಕ್ಷೆ ಖಚಿತ.

ಇಂದಿನಿಂದ ಪುರುಷರ ಟಿ20 ವಿಶ್ವಕಪ್ ಪಂದ್ಯಾವಳಿ



ICC MEN'S T20 WORLD CUP

ತಿಂಗಳ ಕಾಲ ಚುಟುಕು ಕ್ರಿಕೆಟ್‌ನ ಚಮತ್ಕಾರ

ಮೈಸೂರು, ಫೆ.6(ವಿವಿಹೆಚ್)– ಚುಟುಕು ಮಾದರಿಯ ಹಾಲಿ ಚಾಂಪಿಯನ್ ಭಾರತ ತಂಡ ಸೂರ್ಯಕುಮಾರ್ ನಾಯಕತ್ವದಲ್ಲಿ ಫೆಬ್ರವರಿ 7ರಂದು ಮುಂಬೈನ ವಾಂಖೆಡೆಯಲ್ಲಿ ಕ್ರಿಕೆಟ್ ಶಿಶು ಯುಎಸ್‌ಎ ವಿರುದ್ಧ ಪಂದ್ಯವಾಡುವ ಮೂಲಕ ತನ್ನ ಅಭಿಯಾನವನ್ನು ಆರಂಭಿಸಲಿದೆ. ಇದೇ ದಿನ ಟೂರ್ನಿಯ ಉದ್ಘಾಟನಾ ಪಂದ್ಯ ಶ್ರೀಲಂಕಾದ ಕೊಲೊಂಬೋದಲ್ಲಿ ನಡೆಯಲಿದ್ದು, ಈ ಪಂದ್ಯದಲ್ಲಿ ನೆದರ್ಲೆಂಡ್ ವಿರುದ್ಧ ಪಾಕಿಸ್ತಾನ ಪೈಪೋಟಿ ನಡೆಸಲಿದೆ.

ಭಾರತ ಹಾಗೂ ಶ್ರೀಲಂಕಾ ಜಂಟಿ ಆತಿಥ್ಯದಲ್ಲಿ 2026ರ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯು ಇದೇ ಫೆಬ್ರವರಿ 7 ರಂದು ಆರಂಭವಾಗಿ, ಮಾರ್ಚ್ 8ರಂದು ಭಾನುವಾರ ಅಂತ್ಯವಾಗಲಿದೆ.

ಬಲಿಷ್ಠ ಬ್ಯಾಟಿಂಗ್ ಮತ್ತು ಬೌಲಿಂಗ್‌ನೊಂದಿಗೆ ಅಖಾಡಕ್ಕೆ ಇಳಿದಿರುವ ಭಾರತ ತಂಡ, ಈ ಬಾರಿಯೂ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡವಾಗಿದೆ. ಕಳೆದ ಬಾರಿ ರೋಹಿತ್ ಶರ್ಮಾ ನಾಯಕತ್ವದಲ್ಲಿ ಟಿ20 ವಿಶ್ವಕಪ್ ಗೆದ್ದಿದ್ದ ಟೀಂ ಇಂಡಿಯಾ ಈ ಬಾರಿ ಸೂರ್ಯಕುಮಾರ್ ಯಾದವ್ ನೇತೃತ್ವದಲ್ಲಿ ಆಡಲಿದೆ.

ತಂಡಗಳು: ಒಟ್ಟಾರೆ ಈ ಬಾರಿ 20 ತಂಡಗಳು ಚಾಂಪಿಯನ್ ಪಟ್ಟಕ್ಕಾಗಿ 55 ಪಂದ್ಯಗಳಲ್ಲಿ ಸೆಣಸಾಡಲಿವೆ. ಭಾರತ, ಪಾಕಿಸ್ತಾನ, ಯುಎಸ್‌ಎ, ನೆದರ್ಲೆಂಡ್ಸ್ ಹಾಗೂ ನಮೀಬಿಯಾ ಎ ಗುಂಪಿನಲ್ಲಿದ್ದರೆ, ಆತಿಥೇಯ ಶ್ರೀಲಂಕಾ, ಆಸ್ಟ್ರೇಲಿಯಾ, ಜಿಂಬಾಬ್ವೆ, ಐರ್ಲೆಂಡ್ ಮತ್ತು ಒಮನ್ ಬಿ ಗುಂಪಿನಲ್ಲಿವೆ. ಇನ್ನೂ ಸಿ ಗುಂಪಿನಲ್ಲಿ, ಇಂಗ್ಲೆಂಡ್, ವೆಸ್ಟ್ ಇಂಡೀಸ್, ಬಾಂಗ್ಲಾದೇಶ, ನೇಪಾಳ, ಇಟಲಿ; ಡಿ ಗುಂಪಿನಲ್ಲಿ ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ, ಅಫ್ಘಾನಿಸ್ತಾನ, ಕೆನಡಾ, ಯುಎಇ ಇವೆ.

ಸ್ಥಳಗಳು: ಭಾರತ ಮತ್ತು ಶ್ರೀಲಂಕಾ ಜಂಟಿಯಾಗಿ ಎಂಟು ಸ್ಥಳಗಳಲ್ಲಿ (ಭಾರತದ ಐದು ಸ್ಥಳಗಳಲ್ಲಿ ಮತ್ತು ಶ್ರೀಲಂಕಾದಲ್ಲಿ ಮೂರು ಸ್ಥಳಗಳಲ್ಲಿ) ಪಂದ್ಯಗಳು ನಡೆಯಲಿವೆ.

ಭಾರತದ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ, ಎಂಎ ಚಿದಂಬರಂ ಕ್ರೀಡಾಂಗಣ (ಚೆನ್ನೈ), ಅರುಣ್ ಜೇಟ್ಲಿ ಕ್ರೀಡಾಂಗಣ (ನವದೆಹಲಿ), ವಾಂಖೆಡೆ ಕ್ರೀಡಾಂಗಣ (ಮುಂಬೈ), ಈಡೆನ್ ಗಾರ್ಡನ್ಸ್ (ಕೋಲ್ಕತ್ತಾ) ಮತ್ತು ಶ್ರೀಲಂಕಾದ ಆರ್. ಪ್ರೇಮದಾಸ ಕ್ರೀಡಾಂಗಣ (ಕೊಲಂಬೊ), ಸಿಂಹಳೀಸ್ ಸ್ಪೋರ್ಟ್ಸ್ ಕ್ಲಬ್ ಕ್ರಿಕೆಟ್ ಮೈದಾನ (ಕೊಲಂಬೊ) ಮತ್ತು ಪಲ್ಲೆಕೆಲೆ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ (ಕ್ಯಾಂಡಿ) ಸ್ಥಳಗಳಲ್ಲಿ ಪಂದ್ಯಗಳು ಜರುಗಲಿವೆ.

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಫೈನಲ್ ಪಂದ್ಯವನ್ನು ಆಯೋಜಿಸಲಾಗಿದೆ. ಎರಡು ಸೆಮಿಫೈನಲ್ ಪಂದ್ಯಗಳು ಮುಂಬೈನ ವಾಂಖೆಡೆ ಕ್ರೀಡಾಂಗಣ ಮತ್ತು ಕೋಲ್ಕತಾದ ಈಡನ್ ಗಾರ್ಡನ್ಸ್‌ನಲ್ಲಿ ನಡೆಯಲಿವೆ. ಒಂದು ವೇಳೆ ಪಾಕಿಸ್ತಾನ ತಂಡ ಸೆಮಿಫೈನಲ್ಸ್ ಹಾಗೂ ಫೈನಲ್‌ಗೆ ಅರ್ಹತೆ ಪಡೆದರೆ, ಆಗ ನಾಕ್‌ಔಟ್ ಪಂದ್ಯಗಳನ್ನು ಶ್ರೀಲಂಕಾದಲ್ಲಿ ನಡೆಸಲಾಗುತ್ತದೆ.



ಟೂರ್ನಿ ಆರಂಭಕ್ಕೂ ಮುನ್ನಾ ಎಲ್ಲಾ 20 ತಂಡಗಳ ನಾಯಕರು ಫೋಟೋ ಶೂಟ್‌ನಲ್ಲಿ ಮಿಂಚಿದ್ದು ಹೀಗೆ

9 ವಿಶ್ವಕಪ್ ಅಚ್ಚರಿಗಳು

ಅತಿ ಹೆಚ್ಚು ಬಾರಿ ಚಾಂಪಿಯನ್ ಆದ ತಂಡಗಳಿವು

ಟಿ20 ವಿಶ್ವಕಪ್‌ನಲ್ಲಿ ಈವರೆಗೆ ಮೂರು ತಂಡಗಳು ಮಾತ್ರ ಎರಡು ಬಾರಿ ಚಾಂಪಿಯನ್ ಆಗಿವೆ. ಭಾರತ (2007, 2024), ವೆಸ್ಟ್ ಇಂಡೀಸ್ (2021, 2016) ಮತ್ತು ಇಂಗ್ಲೆಂಡ್ (2010, 2022).

ಹೆಚ್ಚು ಬಾರಿ ಫೈನಲ್ಸ್ ಆಡಿದ ತಂಡಗಳು

ಟಿ20 ವಿಶ್ವಕಪ್ ಇತಿಹಾಸದಲ್ಲಿ ಭಾರತ, ಪಾಕಿಸ್ತಾನ, ಇಂಗ್ಲೆಂಡ್ ಮತ್ತು ಶ್ರೀಲಂಕಾ ತಂಡಗಳು ತಲಾ ಮೂರು ಬಾರಿ ಟಿ20 ವಿಶ್ವಕಪ್ ಫೈನಲ್ ತಲುಪಿವೆ. ಇದರಲ್ಲಿ ಭಾರತ ಹಾಗೂ ಇಂಗ್ಲೆಂಡ್ 2 ಬಾರಿ ಚಾಂಪಿಯನ್ ಆಗಿದ್ದರೆ, ಪಾಕಿಸ್ತಾನ ಮತ್ತು ಶ್ರೀಲಂಕಾ ಒಂದು ಬಾರಿ ಟ್ರೋಫಿಗೆ ಮುತ್ತಿಕ್ಕಿವೆ.

ಇನ್ನಿಂಗ್ಸ್‌ವೊಂದರಲ್ಲಿ ತಂಡ ಗಳಿಸಿದ ಅತ್ಯಧಿಕ ರನ್

2007ರಲ್ಲಿ ಜೋಹಾನ್ಸ್‌ಬರ್ಗ್‌ನಲ್ಲಿ ನಡೆದ ವಿಶ್ವಕಪ್‌ನಲ್ಲಿ ಶ್ರೀಲಂಕಾ, ಕೀನ್ಯಾ ವಿರುದ್ಧ 260/6 ರನ್ ಗಳಿಸುವ ಮೂಲಕ ಟೂರ್ನಿಯ ಇತಿಹಾಸದಲ್ಲಿ ಅತೀ ಹೆಚ್ಚು ಮೊತ್ತ ಗಳಿಸಿದ ದಾಖಲೆಯನ್ನು ತನ್ನದಾಗಿಸಿಕೊಂಡಿದೆ. ಇದರ ನಂತರ 2016ರಲ್ಲಿ ಇಂಗ್ಲೆಂಡ್ ತಂಡ ದ.ಆಫ್ರಿಕಾ ವಿರುದ್ಧ 230/8 ಗಳಿಸಿದ್ದು ಎರಡನೇ ಅಧಿಕ ತಂಡದ ಮೊತ್ತವಾಗಿದೆ.

ಟಿ20ಯಲ್ಲಿ ಅತೀ ಹೆಚ್ಚು ರನ್



9 ವಿಶ್ವಕಪ್ ಪೈಕಿ ಈವರೆಗೆ ವಿರಾಟ್ ಕೊಹ್ಲಿ ಟೂರ್ನಿಯ ಇತಿಹಾಸದಲ್ಲಿ ಒಟ್ಟಾರೆ ಅತೀ ಹೆಚ್ಚು ರನ್ ಗಳಿಸಿದ ದಾಖಲೆಯನ್ನು ಹೊಂದಿದ್ದಾರೆ. ಅವರು 35 ಪಂದ್ಯಗಳಲ್ಲಿ 1,292 ರನ್ ಬಾರಿಸಿದ್ದಾರೆ. ತದನಂತರದ ಸ್ಥಾನದಲ್ಲಿ ಟೀಂ ಇಂಡಿಯಾ ಮಾಜಿ ನಾಯಕ ರೋಹಿತ್ ಶರ್ಮ ಇದ್ದು, ಅವರು 1220 ರನ್ ಬಾರಿಸಿದ್ದಾರೆ. (2024ರ ವಿಶ್ವಕಪ್ ಬಳಿಕ ಈ ಇಬ್ಬರು ಆಟಗಾರರು ನಿವೃತ್ತಿ ಘೋಷಿಸಿದ್ದಾರೆ.)

ಇನ್ನಿಂಗ್ಸ್‌ವೊಂದರಲ್ಲಿ ತಂಡ ಗಳಿಸಿದ ಕಡಿಮೆ ರನ್

2014ರಲ್ಲಿ ಶ್ರೀಲಂಕಾ ವಿರುದ್ಧ ನೆದರ್‌ಲ್ಯಾಂಡ್ಸ್ 39 ರನ್‌ಗಳಿಗೆ ಆಲೌಟ್ ಆಗುವ ಮೂಲಕ ಇದುವರೆಗಿನ ಅತ್ಯಂತ ಕಡಿಮೆ ಮೊತ್ತದ ಅನಗತ್ಯ ದಾಖಲೆಯನ್ನು ಹೊಂದಿದೆ. 2024 ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಉಗಾಂಡಾ ಕೂಡ ಇದೇ ಸ್ಕೋರ್‌ಗೆ ಆಲೌಟ್ ಆಗಿತ್ತು ಎಂಬುದು ಗಮನಾರ್ಹ.

ಅತೀ ಹೆಚ್ಚು ವಿಕೆಟ್ ಪಡೆದ ಆಟಗಾರ



ಇತ್ತ ಟಿ20 ವಿಶ್ವಕಪ್‌ನಲ್ಲಿ ಬಾಂಗ್ಲಾದೇಶದ ಶಕೀಬ್ ಅಲ್–ಹಸನ್ ಅವರು 50 ವಿಕೆಟ್ ಗಳಿಸುವ ಮೂಲಕ ಅತೀ ಹೆಚ್ಚು ವಿಕೆಟ್ ಪಡೆದ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇವರ ನಂತರ ಪಾಕಿಸ್ತಾನ್ ಆಲ್‌ರೌಂಡರ್ ಶಾಹೀದ್ ಅಫ್ರೀದಿ ಇದ್ದು, ಇವರು 39 ವಿಕೆಟ್ ಕಬಳಿಸಿದ್ದಾರೆ.

ಕಮಿನ್ಸ್ ಕಮಾಲ್



ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮ್ಮಿನ್ಸ್ 2024ರ ಆವೃತ್ತಿಯಲ್ಲಿ ಎರಡೂ ಬಾರಿ ಹ್ಯಾಟ್ರಿಕ್ ಪಡೆದ ಸಾಧನೆ ಮಾಡಿದ್ದಾರೆ. ಟೂರ್ನಿಯೊಂದರಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಹ್ಯಾಟ್ರಿಕ್ ಗಳಿಸಿ ಸಾಧನೆ ಮಾಡಿದ ಏಕೈಕ ಬೌಲರ್ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ.

ಇನ್ನಿಂಗ್ಸ್‌ನಲ್ಲಿ ಅತೀ ಹೆಚ್ಚು ರನ್

2012ರಲ್ಲಿ ಬಾಂಗ್ಲಾದೇಶ ವಿರುದ್ಧ ಕೇವಲ 58 ಎಸೆತಗಳಲ್ಲಿ 123 ರನ್ ಬಾರಿಸಿದ ನ್ಯೂಜಿಲೆಂಡ್‌ನ ಬ್ರೆಂಡನ್ ಮೆಕಲಮ್ ಇನ್ನಿಂಗ್ಸ್‌ವೊಂದರಲ್ಲಿ ಅತ್ಯಧಿಕ ವೈಯಕ್ತಿಕ ರನ್ ಬಾರಿಸಿದ ದಾಖಲೆಯನ್ನು ತಮ್ಮದಾಗಿಸಿಕೊಂಡಿದ್ದಾರೆ.



ರೋಹಿತ್ ಶರ್ಮಾ ರಾಯಭಾರಿ



ಟೀಮ್ ಇಂಡಿಯಾದ ಸ್ಟಾರ್ ಆಟಗಾರ ರೋಹಿತ್ ಶರ್ಮಾ ಅವರನ್ನು ಟಿ20 ವಿಶ್ವಕಪ್ 2026 ರಾಯಭಾರಿಯನ್ನಾಗಿ ಆಯ್ಕೆ ಮಾಡಲಾಗಿದೆ. ಭಾರತ ತಂಡಕ್ಕೆ 2024ರ ಟಿ20 ವಿಶ್ವಕಪ್ ತೊಡಿಸಿದ ನಾಯಕನಿಗೆ ಟಿ20 ವಿಶ್ವಕಪ್ ರಾಯಭಾರಿ ಪಟ್ಟವನ್ನು ಕಟ್ಟಲಾಗಿದೆ.

ಅತ್ಯಧಿಕ ಶತಕಗಳು ಮತ್ತು ವೇಗದ ಅರ್ಧ ಶತಕ



2 ಶತಕಗಳನ್ನು ಬಾರಿಸಿರುವ ಕ್ರಿಸ್ ಗೇಲ್ ಅತ್ಯಧಿಕ ಶತಕಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದರೆ, 2007ರಲ್ಲಿ ಇಂಗ್ಲೆಂಡ್ ವಿರುದ್ಧ 12 ಎಸೆತಗಳಲ್ಲಿ ಅರ್ಧಶತಕ ಬಾರಿಸಿದ್ದ ಯುವರಾಜ್ ಸಿಂಗ್ ಇಲ್ಲಿಯವರೆಗಿನ ವೇಗದ ಅರ್ಧಶತಕದ ದಾಖಲೆಯನ್ನು ಹೊಂದಿದ್ದಾರೆ.

ಟಿ20 ವಿಶ್ವಕಪ್ ವೇಳಾಪಟ್ಟಿ ಇಂತಿದೆ

ಫೆ.7	ಮೊದಲ ಪಂದ್ಯ: ಪಾಕಿಸ್ತಾನ v/s ನೆದರ್ಲ್ಯಾಂಡ್ಸ್ (ಕೊಲಂಬೊ) ಬೆಳಿಗ್ಗೆ 11ಕ್ಕೆ ಎರಡನೇ ಪಂದ್ಯ: ವೆಸ್ಟ್ ಇಂಡೀಸ್ v/s ಸ್ಕಾಟ್ಲೆಂಡ್ (ಕೋಲ್ಕತ್ತಾ) ಮಧ್ಯಾಹ್ನ 3ಕ್ಕೆ ಮೂರನೇ ಪಂದ್ಯ: ಭಾರತ v/s ಯುಎಸ್‌ಎ (ಮುಂಬೈ) ಸಂಜೆ 7ಕ್ಕೆ
ಫೆ.8	ಮೊದಲ ಪಂದ್ಯ: ನ್ಯೂಜಿಲೆಂಡ್ v/s ಅಫ್ಘಾನಿಸ್ತಾನ್ (ಚೆನ್ನೈ) ಬೆಳಿಗ್ಗೆ 11ಕ್ಕೆ ಎರಡನೇ ಪಂದ್ಯ: ಇಂಗ್ಲೆಂಡ್ v/s ನೇಪಾಳ (ಮುಂಬೈ) ಮಧ್ಯಾಹ್ನ 3ಕ್ಕೆ ಮೂರನೇ ಪಂದ್ಯ: ಶ್ರೀಲಂಕಾ v/s ಐರ್ಲೆಂಡ್ (ಕೊಲಂಬೊ) ಸಂಜೆ 7ಕ್ಕೆ
ಫೆ.9	ಮೊದಲ ಪಂದ್ಯ: ಸ್ಕಾಟ್ಲೆಂಡ್ v/s ಇಟಲಿ (ಕೋಲ್ಕತ್ತಾ) ಬೆಳಿಗ್ಗೆ 11ಕ್ಕೆ ಎರಡನೇ ಪಂದ್ಯ: ಜಿಂಬಾಬ್ವೆ v/s ಓಮನ್ ಕೊಲಂಬೊ) ಮಧ್ಯಾಹ್ನ 3ಕ್ಕೆ ಮೂರನೇ ಪಂದ್ಯ: ದಕ್ಷಿಣ ಆಫ್ರಿಕಾ v/s ಕೆನಡಾ (ಅಹ್ಮದಾಬಾದ್) ಸಂಜೆ 7ಕ್ಕೆ
ಫೆ.10	ಮೊದಲ ಪಂದ್ಯ: ನೆದರ್ಲ್ಯಾಂಡ್ v/s ನಮೀಬಿಯಾ (ಡೆಲ್ಲಿ) ಬೆಳಿಗ್ಗೆ 11ಕ್ಕೆ ಎರಡನೇ ಪಂದ್ಯ: ನ್ಯೂಜಿಲೆಂಡ್ v/s ಯುಎಇ (ಚೆನ್ನೈ) ಮಧ್ಯಾಹ್ನ 3ಕ್ಕೆ ಮೂರನೇ ಪಂದ್ಯ: ಪಾಕಿಸ್ತಾನ್ v/s ಯುಎಸ್‌ಎ (ಕೊಲಂಬೊ) ಸಂಜೆ 7ಕ್ಕೆ
ಫೆ.11	ಮೊದಲ ಪಂದ್ಯ: ದಕ್ಷಿಣಾ ಆಫ್ರಿಕಾ v/s ಅಫ್ಘಾನಿಸ್ತಾನ್ (ಅಹ್ಮದಾಬಾದ್) ಬೆಳಿಗ್ಗೆ 11ಕ್ಕೆ ಎರಡನೇ ಪಂದ್ಯ: ಆಸ್ಟ್ರೇಲಿಯಾ v/s ಐರ್ಲೆಂಡ್ (ಕೊಲಂಬೊ) ಮಧ್ಯಾಹ್ನ 3ಕ್ಕೆ ಮೂರನೇ ಪಂದ್ಯ: ಇಂಗ್ಲೆಂಡ್ v/s ವೆಸ್ಟ್ ಇಂಡೀಸ್ (ಮುಂಬೈ) ಮಧ್ಯಾಹ್ನ 3ಕ್ಕೆ
ಫೆ.12	ಮೊದಲ ಪಂದ್ಯ: ಶೀಲಂಕಾ v/s ಓಮನ್ (ಕ್ಯಾಂಡಿ) ಬೆಳಿಗ್ಗೆ 11ಕ್ಕೆ ಎರಡನೇ ಪಂದ್ಯ: ನೇಪಾಳ v/s ಇಟಲಿ (ಮುಂಬೈ) ಮಧ್ಯಾಹ್ನ 11ಕ್ಕೆ ಮೂರನೇ ಪಂದ್ಯ: ಭಾರತ v/s ನಮೀಬಿಯಾ (ಡೆಲ್ಲಿ) ಸಂಜೆ 7ಕ್ಕೆ
ಫೆ.13	ಮೊದಲ ಪಂದ್ಯ: ಆಸ್ಟ್ರೇಲಿಯಾ v/s ಜಿಂಬಾಬ್ವೆ (ಕೊಲಂಬೊ) ಬೆಳಿಗ್ಗೆ 11ಕ್ಕೆ ಎರಡನೇ ಪಂದ್ಯ: ಕೆನಡಾ v/s ಯುಎಇ (ಡೆಲ್ಲಿ) ಮಧ್ಯಾಹ್ನ 3ಕ್ಕೆ ಮೂರನೇ ಪಂದ್ಯ: ಅಮೇರಿಕಾ v/s ನೆದರ್ಲ್ಯಾಂಡ್ಸ್ (ಚೆನ್ನೈ) ಸಂಜೆ 7ಕ್ಕೆ
ಫೆ.14	ಮೊದಲ ಪಂದ್ಯ: ಐರ್ಲೆಂಡ್ v/s ಓಮನ್ (ಕೊಲಂಬೊ) ಬೆಳಿಗ್ಗೆ 11ಕ್ಕೆ ಎರಡನೇ ಪಂದ್ಯ: ಇಂಗ್ಲೆಂಡ್ v/s ಸ್ಕಾಟ್ಲೆಂಡ್ (ಕೋಲ್ಕತ್ತಾ) ಮಧ್ಯಾಹ್ನ 3ಕ್ಕೆ ಮೂರನೇ ಪಂದ್ಯ: ನ್ಯೂಜಿಲೆಂಡ್ v/s ದ.ಆಫ್ರಿಕಾ (ಅಹ್ಮದಾಬಾದ್) ಸಂಜೆ 7ಕ್ಕೆ
ಫೆ.15	ಮೊದಲ ಪಂದ್ಯ: ವೆಸ್ಟ್ ಇಂಡೀಸ್ v/s ನೇಪಾಳ (ಮುಂಬೈ) ಬೆಳಿಗ್ಗೆ 11ಕ್ಕೆ ಎರಡನೇ ಪಂದ್ಯ: ಯುಎಸ್‌ಎ v/s ನಮೀಬಿಯಾ (ಚೆನ್ನೈ) ಮಧ್ಯಾಹ್ನ 3ಕ್ಕೆ ಮೂರನೇ ಪಂದ್ಯ: ಭಾರತ v/s ಪಾಕಿಸ್ತಾನ್ (ಕೊಲಂಬೊ) ಸಂಜೆ 7ಕ್ಕೆ
ಫೆ.16	ಮೊದಲ ಪಂದ್ಯ: ಅಫ್ಘಾನಿಸ್ತಾನ್ v/s ಯುಎಇ (ಡೆಲ್ಲಿ) ಬೆಳಿಗ್ಗೆ 11ಕ್ಕೆ ಎರಡನೇ ಪಂದ್ಯ: ಇಂಗ್ಲೆಂಡ್ v/s ಇಟಲಿ (ಕೋಲ್ಕತ್ತಾ) ಮಧ್ಯಾಹ್ನ 3ಕ್ಕೆ ಮೂರನೇ ಪಂದ್ಯ: ಆಸ್ಟ್ರೇಲಿಯಾ v/s ಶ್ರೀಲಂಕಾ (ಕ್ಯಾಂಡಿ) ಸಂಜೆ 7ಕ್ಕೆ
ಫೆ.17	ಮೊದಲ ಪಂದ್ಯ: ನ್ಯೂಜಿಲೆಂಡ್ v/s ಕೆನಡಾ (ಚೆನ್ನೈ) ಬೆಳಿಗ್ಗೆ 11ಕ್ಕೆ ಎರಡನೇ ಪಂದ್ಯ: ಐರ್ಲೆಂಡ್ v/s ಜಿಂಬಾಬ್ವೆ (ಕ್ಯಾಂಡಿ) ಮಧ್ಯಾಹ್ನ 3ಕ್ಕೆ ಮೂರನೇ ಪಂದ್ಯ: ಸ್ಕಾಟ್ಲೆಂಡ್ v/s ನೇಪಾಳ (ಮುಂಬೈ) ಸಂಜೆ 7ಕ್ಕೆ
ಫೆ.18	ಮೊದಲ ಪಂದ್ಯ: ದಕ್ಷಿಣಾ ಆಫ್ರಿಕಾ v/s ಯುಎಎಇ (ಡೆಲ್ಲಿ) ಬೆಳಿಗ್ಗೆ 11ಕ್ಕೆ ಎರಡನೇ ಪಂದ್ಯ: ಪಾಕಿಸ್ತಾನ v/s ನಮೀಬಿಯಾ (ಕೊಲಂಬೊ) ಮಧ್ಯಾಹ್ನ 3ಕ್ಕೆ ಮೂರನೇ ಪಂದ್ಯ: ಭಾರತ v/s ನೆದರ್ಲ್ಯಾಂಡ್ಸ್ (ಅಹ್ಮದಾಬಾದ್) ಸಂಜೆ 7ಕ್ಕೆ
ಫೆ.19	ಮೊದಲ ಪಂದ್ಯ: ವೆಸ್ಟ್ ಇಂಡೀಸ್ v/s ಇಟಲಿ (ಕೋಲ್ಕತ್ತಾ) ಬೆಳಿಗ್ಗೆ 11ಕ್ಕೆ ಎರಡನೇ ಪಂದ್ಯ: ಶ್ರೀಲಂಕಾ v/s ಜಿಂಬಾಬ್ವೆ (ಕೊಲಂಬೊ) ಮಧ್ಯಾಹ್ನ 3ಕ್ಕೆ ಮೂರನೇ ಪಂದ್ಯ: ಅಫ್ಘಾನಿಸ್ತಾನ್ v/s ಕೆನಡಾ (ಚೆನ್ನೈ) ಸಂಜೆ 7ಕ್ಕೆ
ಫೆ.20	ಆಸ್ಟ್ರೇಲಿಯಾ v/s ಓಮನ್ (ಕ್ಯಾಂಡಿ) ಸಂಜೆ 7ಕ್ಕೆ
	ಫೆ.21 ರಿಂದ ಮಾ.1 ವರೆಗೆ ಸೂಪರ್ 8 ಪಂದ್ಯಾವಳಿಗಳು ನಡೆಯಲಿವೆ
ಮಾರ್ಚ್ 4–	ಮೊದಲ ಸೆಮಿಫೈನಲ್ಸ್ (ಕೋಲ್ಕತ್ತಾ/ಕೊಲಂಬೊ) ಸಂಜೆ 7ಕ್ಕೆ
ಮಾರ್ಚ್ 5–	ಎರಡನೇ ಸೆಮಿಫೈನಲ್ಸ್ (ಮುಂಬೈ) ಸಂಜೆ 7ಕ್ಕೆ
ಮಾರ್ಚ್ 8–	ಫೈನಲ್ಸ್ (ಕೊಲಂಬೊ/ಅಹ್ಮದಾಬಾದ್) ಸಂಜೆ 7ಕ್ಕೆ

STAR SPORTS | ಈ ಎಲ್ಲಾ ಪಂದ್ಯಗಳನ್ನು ಸ್ಟಾರ್ ಸ್ಪೋರ್ಟ್ಸ್ ಚಾನೆಲ್‌ನಲ್ಲಿ ಹಾಗೂ ಜಿಯೋಸ್ಟಾರ್ ಅಪ್ಲಿಕೇಷನ್ ಮೂಲಕ ಲೈವ್‌ಸ್ಟ್ರೀಮಿಂಗ್ ಮಾಡಬಹುದಾಗಿದೆ. | JioHotstar

ಶ್ರೀ ಗೌರಿಶಂಕರ ದೇವಾಲಯದಲ್ಲಿ ಇಂದಿನಿಂದ 15ರವರೆಗೆ ಮಹಾಶಿವರಾತ್ರಿ ಉತ್ಸವ

ಮಡಿಕೇರಿ, ಫೆ.6– ಸಮೀಪದ ಮೇಕೇರಿ ಗ್ರಾಮದ ಶ್ರೀ ಗೌರಿಶಂಕರ ದೇವಾಲಯದಲ್ಲಿ ಮಹಾಶಿವರಾತ್ರಿ ಉತ್ಸವ ಫೆ.7ರಿಂದ 15ರವರೆಗೆ ಸಂಭ್ರಮದಿಂದ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಕುಯ್ಯಮುಡಿ ಕೆ.ಪೂರ್ಣಯ್ಯ ಹೇಳಿದ್ದಾರೆ.

10 ದಿನಗಳ ಕಾಲ ಮಹಾಶಿವರಾತ್ರಿ ಉತ್ಸವವನ್ನು ಆಚರಿಸುವ ಏಕೈಕ ದೇವಾಲಯವಾಗಿದ್ದು, ಉತ್ಸವಕ್ಕೆ ಕಳೆದೊಂದು ತಿಂಗಳಿನಿಂದ ಗ್ರಾಮದ ಯುವ ಕಾರ್ಯಕರ್ತರು ಶ್ರಮಿಸುತ್ತಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಫೆ.7ರಂದು ಬೆಳಗ್ಗೆ 9.30ಕ್ಕೆ ದೇವಾಲಯದಲ್ಲಿ ಧ್ವಜಾರೋಹಣದ ಮೂಲಕ ಉತ್ಸವಕ್ಕೆ ಚಾಲನೆ ದೊರಕಲಿದೆ. ಮೊದಲ ದಿನದಿಂದ ಫೆ.14ರವರೆಗೆ ಪ್ರತಿನಿತ್ಯ ಸಂಜೆ 6.30ಕ್ಕೆ ಜಿಲ್ಲೆಯ ವಿವಿಧೆಡೆಗಳ ಭಜನಾ ತಂಡಗಳಿಂದ ಭಜನಾ ಕಾರ್ಯಕ್ರಮ ಮತ್ತು ಅನ್ನದಾನವನ್ನು ಏರ್ಪಡಿಸಲಾಗಿದೆ ಎಂದರು.

ಹೊರೆ ಕಾಣಿಕೆಯ ಆಕರ್ಷಣೆ: ಶಿವರಾತ್ರಿಯ ದಿನವಾದ ಫೆ.15ರಂದು ಬೆಳಗ್ಗೆ 9.30ಕ್ಕೆ ಮೇಕೇರಿ ಸುತ್ತಮುತ್ತಲಿನ ಶಕ್ತಿನಗರ, ನವಗ್ರಾಮ, ಕಾವೇರಿ ಬಡಾವಣೆ, ಸುಭಾಷ್ ನಗರ ಮತ್ತು ಮೇಕೇರಿ–ಬಿಳಿಗೇರಿ ಕೂಡು ರಸ್ತೆಯ ಬಳಿಯಿಂದ ಆಯಾ ವ್ಯಾಪ್ತಿಯ ನಿವಾಸಿಗಳು ಮೆರವಣಿಗೆಯೊಂದಿಗೆ ದೇವಸ್ಥಾನಕ್ಕೆ ಆಗಮಿಸಿ ಹೊರೆ ಕಾಣಿಕೆಯನ್ನು ದೇವರಿಗೆ ಅರ್ಪಿಸಲಿದ್ದಾರೆ. ಅಂದು ಬೆಳಗ್ಗೆ 8 ಗಂಟೆಗೆ ಶ್ರೀ ಗೌರಿಶಂಕರ ದೇಗುಲದಲ್ಲಿ ಗಣಪತಿ ಹೋಮ, ಶ್ರೀ ಮೃತ್ಯುಂಜಯ ಹೋಮ, ರುದ್ರಾಭಿಷೇಕ, ಮಹಾಪೂಜೆಯ ಬಳಿಕ ಅನ್ನ ದಾನ ನಡೆಯಲಿದೆ. ರಾತ್ರಿ ದೇಗುಲದಲ್ಲಿ ರಂಗಪೂಜೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಶಿವರಾತ್ರಿಯ ಜಾಗರಣೆ ಪ್ರಯುಕ್ತ ಯಕ್ಷಗಾನ ಪ್ರದರ್ಶನವನ್ನು ಆಯೋಜಿಸಲಾಗಿದೆ. ಮರುದಿನ ಫೆ.16ರಂದು ಪೂಜಾ ಕಾರ್ಯ, ಅನ್ನದಾನದೊಂದಿಗೆ ಉತ್ಸವ ಮುಕ್ತಾಯಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

ದೇವಸ್ಥಾನ ಸಮಿತಿಯ ಉಪಾಧ್ಯಕ್ಷ ಕೆ.ಆರ್.ಬೆಳ್ಳಿಯಪ್ಪ, ಕಾರ್ಯದರ್ಶಿ ಟಿ.ಎನ್.ಲೋಕೇಶ್, ಖಜಾಂಚಿ ಸಿ.ಟಿ.ಈಶ್ವರ, ಪದಾಧಿಕಾರಿಗಳಾದ ಪಿ.ಎಂ. ದಾಮೋದರ, ಬಿ.ಎನ್.ರತ್ನಾಕರ ರೈ ಉಪಸ್ಥಿತರಿದ್ದರು.

ಹಿಂದೂ ಸಮಾಜ ಸಾಮರಸ್ಯದಿಂದ ಬದುಕಬೇಕು

ನಾಪೋಕ್ಲು, ಫೆ.6(ದುಗ್ಗಳ)– ಪ್ರಸ್ತುತ ಹಿಂದೂ ಸಮಾಜ ಪರಸ್ಪರ ಸಾಮರಸ್ಯದಿಂದ ಬದುಕನ್ನು ಕಾಣುವಂತಾಗಬೇಕೆಂದು ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಜಿಲ್ಲಾ ಕುಟುಂಬ ಪ್ರಮೋದ್ದನ್ ಪ್ರಮುಖ್ ಟಿಸಿ ಚಂದ್ರನ್ ಹೇಳಿದರು.

ಇಲ್ಲಿಯ ಶ್ರೀ ಗುರು ಪೊನ್ನಪ್ಪ ಸಭಾಂಗಣದಲ್ಲಿ ಆಯೋಜಿಸಿದ ಹಿಂದೂ ಸಂಗಮ ಕಾರ್ಯಕ್ರಮದಲ್ಲಿ ಹಿಂದೂ ಸಮಾಜದ ಜಾಗೃತಿ ಮತ್ತು ರಾಷ್ಟ್ರೀಯ ಸುರಕ್ಷತೆ ಬಗ್ಗೆ ಮಾತನಾಡಿದ ಅವರು, ಕ್ಷೀಣಿಸುತ್ತಿರುವ ಕುಟುಂಬ ಪದ್ಧತಿ ಬಲವರ್ಧನೆಗೊಳಿಸುವುದರೊಂದಿಗೆ ನಾಗರಿಕ ಶಿಷ್ಟಾಚಾರ ಪಾಲಿಸಬೇಕು ಎಂದು ತಿಳಿಸಿದರು.

ಉಪನ್ಯಾಸಕ ಶಿವಚಾಳಿಯಂಡ ನಿತ್ಯ ಕಾರ್ಯಪ್ಪ ಮಾತನಾಡಿ, ಹಿಂದೂ ಸಮಾಜದಲ್ಲಿ ಸ್ತ್ರೀಯರು ಸಮಾಜದ ಉಳಿವು ಮತ್ತು ಏಳಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾಳೆ ಅಲ್ಲದೆ ಹೆಣ್ಣು ಮಕ್ಕಳು ಲವ್ ಜಿಹಾದ್‌ನಂತಹ ಷಡ್ಯಂತರದಿಂದ ಎಚ್ಚರ ವಹಿಸಬೇಕೆಂದು ಎಚ್ಚರಿಸಿದರು. ವಿಶ್ವವೇ ಗೌರವಿಸುವ ಸನಾತನ ಧರ್ಮ ಉಳಿಸು ಬೆಳೆಸುವಂತಾಗಲಿ ಎಂದು ಆಶಿಸಿದರು.


ನಾಪೋಕ್ಲುನಲ್ಲಿ ನಡೆದ ಹಿಂದೂ ಸಂಗಮ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರು.

ಬಿಲ್ಲವ ಸಮಾಜದ ನಾಪೋಕ್ಲು ಹೋಬಳಿ ಅಧ್ಯಕ್ಷ ಬಿಎಂ ಪ್ರತೀಪ ಮಾತನಾಡಿ, ಹಿಂದೂ ಧರ್ಮದ ಭದ್ರತೆಗೆ ಜಾತಿ ವ್ಯವಸ್ಥೆ ಪೂರಕವಾಗಿರಬೇಕು ಮತ್ತು ಎಲ್ಲಾ ಜಾತಿಗಳು ಒಂದಾಗಿ ಹಿಂದುತ್ವದಡಿಯಲ್ಲಿದ್ದರೆ ಮಾತ್ರ ರಕ್ಷಣೆ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಹಿಂದೂ ಸಂಗಮ ಆಯೋಜನಾ ಸಮಿತಿ ಅಧ್ಯಕ್ಷ ಕುಂಡ್ಯೋಳಂಡ ರಮೇಶ್ ಮುದ್ದಯ್ಯ ಮಾತನಾಡಿ ಹಿಂದುತ್ವ ಕ್ಕಾಗಿ ಬದುಕಬೇಕು ಧರ್ಮವನ್ನು ನಾವು ರಕ್ಷಿಸಿದರೆ ಧರ್ಮ ನಮ್ಮನ್ನು ರಕ್ಷಿಸುತ್ತದೆ ಎಂದು ತಿಳಿಸಿದರು. ಸರಸ್ವತಿ ಮನೋಹರಿ ಪ್ರಾರ್ಥಿಸಿ, ಜಾಲಿ ಪೂವಪ್ಪ ಸ್ವಾಗತಿಸಿದರು. ಶಿವಚಾಳಿಯಂಡ ಜಗದೀಶ್ ವಂದಿಸಿದರು. ಕೊನೆಯಲ್ಲಿ ವಂದೆ ಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ಖಾಸಗಿ ಬಸ್–ಬೈಕ್ ಡಿಕ್ಕಿ: ಸವಾರರಿಬ್ಬರ ಸಾವು

ಮಡಿಕೇರಿ/ಗೋಣಿಕೊಪ್ಪಲು, ಫೆ.6– ಖಾಸಗಿ ಬಸ್ ಮತ್ತು ಬೈಕ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಇಬ್ಬರು ಯುವಕರು ಮೃತಪಟ್ಟಿರುವ ಘಟನೆ ಗೋಣಿಕೊಪ್ಪದಲ್ಲಿ ಗುರುವಾರ ರಾತ್ರಿ ನಡೆದಿದೆ.

ಗೋಣಿಕೊಪ್ಪಲಿನ ಚೆನ್ನಂಗೊಲ್ಲಿ ನಿವಾಸಿ ಸುಲೈಮಾನ್(32) ಮತ್ತು ಇಲ್ಲಿನ ಈರಣ್ಣ ಕಾಲೋನಿ ನಿವಾಸಿ ಪೌಲೋಸ್(28) ಮೃತ ದುರ್ದೈವಿಗಳಾಗಿದ್ದಾರೆ. ಗುರುವಾರ ತಡ ರಾತ್ರಿ ವಿರಾಜಪೇಟೆಯಿಂದ ಮೈಸೂರಿಗೆ ತೆರಳುತ್ತಿದ್ದ ಖಾಸಗಿ ಬಸ್ (ಎನ್‌ಎಲ್–01 3566) ಮತ್ತು ಪಟ್ಟಣದಿಂದ ಮನೆಗೆ ಬೈಕ್(ಕೆಎ.05.ಈ.ಹೆಚ್.5382)ನಲ್ಲಿ ಹೋಗುತ್ತಿದ್ದಾಗ ಉಮಾಮಹೇಶ್ವರಿ ದೇವಾಲಯದ ಮುಖ್ಯ ರಸ್ತೆಯಲ್ಲಿ ಗುರುವಾರ ರಾತ್ರಿ ನಡೆದ ಅಪಘಾತದಲ್ಲಿ ಸುಲೈಮಾನ್ ಸ್ಥಳದಲ್ಲೇ ಅಸುನೀಗಿದರೆ, ಬೈಕ್ ಸವಾರ ಪೌಲೋಸ್‌ರನ್ನು ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಕರೆದೊಯ್ಯುವ ಮಾರ್ಗ ಮಧ್ಯ ಸಾವನ್ನಪ್ಪಿದ್ದಾರೆ. ಗೋಣಿಕೊಪ್ಪ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.


ಸುಲೈಮಾನ್


ಪೌಲೋಸ್

ಇಂದು ಕೊಡವ ಪುಸ್ತಕ ಪತ್ತಾಯ ಉದ್ಘಾಟನೆ

ಮಡಿಕೇರಿ, ಫೆ.6–ರಾಜ್ಯ ಕೊಡವ ಸಾಹಿತ್ಯ ಅಕಾಡೆಮಿಯಿಂದ ಶಾಸಕ ಪೊನ್ನಣ್ಣನವರ ಗೃಹಕಚೇರಿಯಲ್ಲಿ ಫೆ.7ರ ಬೆಳಿಗ್ಗೆ 10ಗಂಟೆಗೆ ಕೊಡವ ಪುಸ್ತಕ ಪತ್ತಾಯ ಗ್ರಂಥಾಲಯ ಉದ್ಘಾಟನೆ ನಡೆಯಲಿದೆ. ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಗ್ರಂಥಾಲಯ ಉದ್ಘಾಟಿಸಿದರೆ, ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಸಿ.ಮಹೇಶ್ ನಾಚಯ್ಯ ಅಧ್ಯಕ್ಷತೆ ವಹಿಸುವರು. ಕ್ರೀಡಾ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷ ಚೆಪ್ಪುಡಿರ ಅರುಣ್ ಮಾಚಯ್ಯ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ಮಾಜಿ ಶಾಸಕಿ ಶಾಂತೆಯಂಡ ವೀಣಾ ಅಚ್ಚಯ್ಯ, ಕೊಡವ ಸಮಾಜದ ಅಧ್ಯಕ್ಷ ಪರದಂಡ ಕೆ.ಸುಬ್ರಮಣಿ, ಕೊಡವ ಸಮಾಜ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ, ತಕ್ಕ ಜನಾಂಗಕಾರಡ ಒಕ್ಕೂಟದ ಅಧ್ಯಕ್ಷ ಪಡಿಞಾರಂಡ ಜಿ.ಅಯ್ಯಪ್ಪ, ಭಾಷಿಕ ಸಮುದಾಯದ ಅಧ್ಯಕ್ಷ ಡಾ.ಮೇಚಿರ ಸುಭಾಷ್ ನಾಣಯ್ಯ, ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ರತ್ನಮ್ಮ ನಿಧನ



ಕುಶಾಲನಗರ, ಫೆ.6–ನಗರದ ಟೌನ್ ಕೋ ಆಪರೇಟಿವ್ ಬ್ಯಾಂಕಿನ ಉಪಾಧ್ಯಕ್ಷೆ ನೇತ್ರಾವತಿ ತಾಯಿ ರತ್ನಮ್ಮ (78) ಇಂದು ಬೆಳಗ್ಗೆ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಅವರ ಪತಿ ಇತ್ತೀಚೆಗೆ ತಾನೆ ನಿಧನರಾಗಿದ್ದರು. ಮೃತರು ಇಬ್ಬರು ಪುತ್ರಿಯರು ಮತ್ತು ಪುತ್ರನನ್ನು ಅಗಲಿದ್ದಾರೆ. ಹಳೆ ಮಾರುಕಟ್ಟೆ ಬಳಿ ಇರುವ ಹಿಂದೂ ರುದ್ರ ಭೂಮಿಯಲ್ಲಿ ಶನಿವಾರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜ್ಯ ಮಟ್ಟದ ಪ್ರತಿಭಾ ಕಾರಂಜಿಗೆ ಕೊಡಗಿನ ಬಾಲೆ ಆಯ್ಕೆ



ಮಡಿಕೇರಿ, ಫೆ.6–ಕೊಪ್ಪಳದ ಕರಟಗಿಯಲ್ಲಿ ಫೆ.7, 8ರಂದು ನಡೆಯುವ ರಾಜ್ಯ ಮಟ್ಟದ ಪ್ರತಿಭಾ ಕಾರಂಜಿಗೆ ಚೇರಂಬಾಣೆಯ ಶ್ರೀ ರಾಜರಾಜೇಶ್ವರಿ ಶಾಲೆಯ 8ನೇ ತರಗತಿ ವಿದ್ಯಾರ್ಥಿನಿ ಪಟ್ಟಮಾಡ ವರುಣಿಕ ಮುತ್ತಣ್ಣ ಆಯ್ಕೆಯಾಗಿದ್ದಾಳೆ. ಈಕೆ ಭಾವಗೀತೆಯಲ್ಲಿ ಸಾಧನೆ ಮಾಡಿದ್ದು, ಇದೀಗ ರಾಜ್ಯ ಮಟ್ಟದ ಸ್ಪರ್ಧೆಯನ್ನು ಎದುರಿಸಲಿದ್ದಾಳೆ. ಪಟ್ಟಮಾಡ ವರುಣಿಕ ಮುತ್ತಣ್ಣ ಚೇರಂಬಾಣೆ ಬೇಂಗೂರು ಗ್ರಾಮದ ಪಟ್ಟಮಾಡ ರವಿನ್ ಮುತ್ತಣ್ಣ ಹಾಗೂ ಮಿಲನ್ ಮುತ್ತಣ್ಣ ದಂಪತಿಯ ಪುತ್ರಿ.

ಬೇಟೋಳಿ ಗ್ರಾಪಂ ಸಭಾಂಗಣ ಉದ್ಘಾಟನೆ

ವಿರಾಜಪೇಟೆ, ಫೆ.6–ಬೇಟೋಳಿ ಗ್ರಾ.ಪಂನಲ್ಲಿ ನಿರ್ಮಿಸಲಾದ ಕಾರ್ಯಾಲಯದ ಸಭಾಂಗಣವನ್ನು ಪಂಚಾಯಿತಿ ಅಧ್ಯಕ್ಷ ಅಚ್ಚಪಂಡ ಎಂ. ಬೋಪಣ್ಣ ರಿಬ್ಬನ್ ಕತ್ತರಿಸಿ ಉದ್ಘಾಟಿಸಿದರು.

ಐದು ವರ್ಷಗಳ ಅವಧಿಯಲ್ಲಿ ಪಂಚಾಯಿತಿಯಲ್ಲಿ ಸಭಾಂಗಣದ ಕೊರತೆ ಇದ್ದು, ಪಂಚಾಯಿತಿಯ 6 ಲಕ್ಷ ಅನುದಾನದಲ್ಲಿ ಸಭಾಂಗಣ ನಿರ್ಮಿಸಿ ಅದರಲ್ಲಿಯೆ ಗ್ರಂಥಾ ಲಯದ ಕೊಠಡಿ ಮಾಡಿರುವುದು ಶ್ಲಾಘನಿಯ, ಗ್ರಾಮಸ್ಥರಿಗೂ ಅನುಕೂಲವಾಗುವಂತೆ ಉತ್ತಮ ಕಾರ್ಯಗಳು ನಡೆಯುವಂತಾಗಲಿ ಎಂದು ಆಶಿಸಿದರು.

ಪಂಚಾಯಿತಿಗೆ ದಾನವಾಗಿ ಜಾಗ ನೀಡಿದ್ದ ಪಟ್ಟಡ ಬಿ.ಚಂಗಪ್ಪ ಕುಟುಂಬದವರು, ಉಪಾಧ್ಯಕ್ಷೆ ಕೆ.ಎಚ್.ಅಲೀಮ, ಸದಸ್ಯರಾದ ಅಮ್ಮಣ ಕುಟ್ಟಂಡ ಎ.ವಸಂತ ಕಟ್ಟಿ, ಪಟ್ರ ಪಂಡ ಬಿ. ಚಂಗಪ್ಪ, ಎಂ.ಎಂ.ರಜಾಕ್, ಬಿ.ಜೆ.ಯಶೋಧ, ಎಂ.ಎಂ.ರಂಜಿತ್, ಸಿ.ಎಸ್.ಸುದೀಶ್, ಪಿ.ಕೆ.ಗೀತಾ, ಪಿ.ಎಂ.ಲಕ್ಷ್ಮೀ, ವೈ.ಎಂ. ಶಾಂತಿ, ಕೆ.ಆರ್.ಲತಾ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಿ.ಮಣಿ, ಕರ ವಸೂಲಿಗರ ಬಿ.ಎಸ್.ದಿನೇಶ್, ಗ್ರಾಮೀಣ ಪುನರ್‌ವಸತಿ ಕಾರ್ಯಕರ್ತೆ ಆಯಿಷ, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರು ಉಪಸ್ಥಿತ ರಿದ್ದರು.


ಗ್ರಾಪಂ ಅಧ್ಯಕ್ಷ ಅಚ್ಚಪಂಡ ಎಂ.ಬೋಪಣ್ಣ ಸಭಾಂಗಣವನ್ನು ಉದ್ಘಾಟಿಸಿದರು.

ಕೃಷಿ ಅಭಿವೃದ್ಧಿ–ರೈತರ ಕಲ್ಯಾಣದಲ್ಲಿ ಅಪರಿಮಿತ ಸಾಧನೆ


ಅಂತಾರಾಷ್ಟ್ರೀಯ ಕೃಷಿ ಮೇಳವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ವೇಳೆ ಸಚಿವ ಚಲುವರಾಯಸ್ವಾಮಿ ಇತರರಿದ್ದರು.

ಬೆಂಗಳೂರು, ಫೆ.6– ಕೃಷಿ ಕ್ಷೇತ್ರ ಅಭಿವೃದ್ಧಿ–ರೈತರ ಕಲ್ಯಾಣದಲ್ಲಿ ಕರ್ನಾಟಕ ದೇಶದಲ್ಲೇ ಅತಿ ಹೆಚ್ಚಿನ ಸಾಧನೆ ಮಾಡಿದ ರಾಜ್ಯವಾಗಿದ್ದು, ಬೆಳೆ ವಿಮೆಯಲ್ಲಿ ನಮ್ಮದು ದೇಶದಲ್ಲೇ ಅಗ್ರಗಣ್ಯ ರಾಜ್ಯವಾಗಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಆರಂಭವಾದ 3 ದಿನಗಳ ಅಂತಾರಾಷ್ಟ್ರೀಯ ಕೃಷಿ ಮೇಳ ಹಾಗೂ ರಾಜ್ಯ ಮಟ್ಟದ ಕೃಷಿ ಪಂಡಿತ ಹಾಗೂ ಇತರ ಪ್ರಶಸ್ತಿ ವಿತರಣಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರೈತರ ಸಬಲೀಕರಣ ಮತ್ತು ಕೃಷಿ ಉತ್ಪಾದನೆ ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಉಪಕ್ರಮಗಳ ಮಾಹಿತಿ ನೀಡಿದರು. ಅಲ್ಲದೇ ಈ ಮೇಳ ಸಾರ್ವಜನಿಕರಿಗೆ ಹೊಸ ಯೋಜನೆಗಳನ್ನು ಪರಿಚಯಿಸುವ ವೇದಿಕೆಯಾಗಲಿದೆ ಎಂದು ಬಣ್ಣಿಸಿದರು.

ರೈತರು ಸ್ಥಿರ ಕೃಷಿ, ಬ್ರ್ಯಾಂಡಿಂಗ್, ಮಾರುಕಟ್ಟೆ ಮತ್ತು ಸಾಲ ಸೌಲಭ್ಯಗಳನ್ನು ಪಡೆದರೆ ಕೃಷಿಯಲ್ಲಿ ಲಾಭ ಗಳಿಸಲು ಸಾಧ್ಯವಾಗುತ್ತದೆ. ರೈತರು ಆರ್ಥಿಕವಾಗಿ ಸಬಲರಾಗುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ನಗರ ಪ್ರದೇಶಗಳಲ್ಲಿಯೂ ಸಹ ಉದ್ಯಮಿಗಳಾಗಲು ಸರ್ಕಾರ ಹಲವು ಕ್ರಮಗಳನ್ನು ತೆಗೆದುಕೊಂಡಿದೆ ಎಂದ ಅವರು ರೈತರು ಸ್ವತಃ ಉದ್ಯೋಗ ಸೃಷ್ಟಿಸಲು ಮತ್ತು ತಮ್ಮ ಉತ್ಪನ್ನಗಳಿಂದ ಲಾಭ ಗಳಿಸಲು ಸಾಧ್ಯವಾಗುತ್ತದೆ ಎಂದರು.

ಕಳೆದ ಎರಡೂವರೆ ವರ್ಷಗಳಲ್ಲಿ, ರಾಜ್ಯವು ರೈತರ 6,000 ಕೋಟಿ ರೂ.ಗಳಿಗೂ ಹೆಚ್ಚಿನ ವಿಮಾ ಹಕ್ಕುಗಳನ್ನು ಇತ್ಯರ್ಥ ಪಡಿಸಿದೆ. 1,500 ಕೋಟಿ ರೂ.ಗಳಿಗಿಂತ ಹೆಚ್ಚಿನ ಕೃಷಿ ಯಂತ್ರೋಪಕರಣ ಒದಗಿಸಿದೆ ಮುಖ್ಯಮಂತ್ರಿಯವರ ಮಾರ್ಗದರ್ಶನದಲ್ಲಿ, ರಾಜ್ಯಾದ್ಯಂತ 450ಕ್ಕೂ ಹೆಚ್ಚು ಹೈಟೆಕ್ ಹಾರ್ವೆಸ್ಟ್ ಹಬ್‌ಗಳನ್ನು ಸ್ಥಾಪಿಸಲಾಗಿದ್ದು, ಇದರಿಂದ 40 ಲಕ್ಷ ಜನರಿಗೆ ಪ್ರಯೋಜನ ವಾಗಿದೆ. ಎಸ್‌ಸಿ/ಎಸ್‌ಟಿ ರೈತರು 50 ಲಕ್ಷ ರೂ. ಸಬ್ಸಿಡಿ ಪಡೆಯುತ್ತಿದ್ದಾರೆ ಎಂದರು.

ಈ ಉಪಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಸಿಎಂ ಸಿದ್ದರಾಮಯ್ಯ ನೇತೃತ್ವದ ನಮ್ಮ ಸರ್ಕಾರ ಮಹತ್ವದ ಪಾತ್ರ ವಹಿಸಿದೆ. ಕಳೆದ ಎರಡೂವರೆ ವರ್ಷಗಳಲ್ಲಿ ಇಲಾಖೆ ರೈತರಿಗೆ ಬಿತ್ತನೆ ಬೀಜಗಳು, ರಸಗೊಬ್ಬರಗಳು ಮತ್ತು ಇತರ ಬೆಂಬಲವನ್ನು ನಿರಂತರವಾಗಿ ಒದಗಿಸುತ್ತಿದೆ ಎಂದರು.

ಇಂದಿನ ಮೇಳ ರೈತರನ್ನು ಬ್ಯಾಂಕುಗಳು ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಗಳಿಗೆ ಸಂಪರ್ಕ ಕಲ್ಪಿಸಲಿದ್ದು, ಎಲ್ಲಾ ಜಿಲ್ಲೆಗಳ ರೈತರು ಈ ಮೇಳದಲ್ಲಿ ಭಾಗವಹಿಸುತ್ತಿದ್ದಾರೆ. ಮಾರುಕಟ್ಟೆ, ಮೌಲ್ಯವರ್ಧನೆ ಮತ್ತು ಕೃಷಿ ವಲಯದ ಒಟ್ಟಾರೆ ಲಾಭದಾಯಕತೆಯನ್ನು ಹೆಚ್ಚಿಸುವ ಗುರಿ ಹೊಂದಿದೆ ಎಂದರು.

ರಾಷ್ಟ್ರ, ರಾಜ್ಯದಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಸದೃಢ

ಮಾಜಿ ಸಚಿವ ನಾರಾಯಣಗೌಡರಿಂದ ಸಂಘರ್ಷದ ಹೇಳಿಕೆ: ಶಾಸಕ ಹೆಚ್.ಟಿ.ಮಂಜು

ಮಂಡ್ಯ, ಫೆ.6– ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಸದೃಢವಾಗಿದ್ದು, ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ಅವರು ಎನ್‌ಡಿಎ ಮೈತ್ರಿಕೂಟ ಸಂಘರ್ಷಕ್ಕೀಡಾಗುವ ಹೇಳಿಕೆ ನೀಡಬಾರದು ಎಂದು ಶಾಸಕ ಹೆಚ್.ಟಿ.ಮಂಜು ಮನವಿ ಮಾಡಿದರು.


ಸುದ್ದಿಗೋಷ್ಠಿಯಲ್ಲಿ ಶಾಸಕ ಹೆಚ್.ಟಿ.ಮಂಜು ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯೊಂದಿಗಿನ ಮೈತ್ರಿ ಶಾಶ್ವತವಾಗಿ ಮುಂದುವರೆಯಲಿದೆ. ಇದಕ್ಕೆ ಧಕ್ಕೆಯಾಗುವಂತೆ ಯಾರಾದರೂ ಪ್ರಚೋಧಿಸಿದರೆ ಪ್ರತಿಕ್ರಿಯೆ ನೀಡದಂತೆ ಪಕ್ಷದ ವರಿಷ್ಠರು ಸೂಚಿಸಿದ್ದಾರೆ. ಆದರೆ ಇತ್ತೀಚೆಗೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರ ವಿರುದ್ಧ ಕೆ.ಸಿ.ನಾರಾಯಣಗೌಡರ ಹೇಳಿಕೆ ಸರಿಯಲ್ಲ ಎಂದು ಹೇಳಿದರು.

ಮೈತ್ರಿ ಪಕ್ಷದ ಮುಖಂಡರು 2013ರಲ್ಲಿ ಜೆಡಿಎಸ್‌ನಿಂದ ಮೊದಲ ಬಾರಿಗೆ ಸ್ಪರ್ಧಿಸಿ ಶಾಸಕರಾದರು. 2018ರಲ್ಲಿ ನಿಖಿಲ್ ಅವರು ರಾಜಕೀಯ ಪ್ರವೇಶ ಮಾಡದಿದ್ದರೂ ಕೆ.ಸಿ.ನಾರಾಯಣಗೌಡರನ್ನು ಪಕ್ಷದ ಅಭ್ಯರ್ಥಿ ಎಂದು ಘೋಷಿಸಿದ್ದರು ಎಂಬುದನ್ನು ಮರೆಯಬಾರದು. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬದ ನೆರವಿಲ್ಲದೇ ರಾಜಕೀಯವಾಗಿ ಬೆಳೆಯಲು ಸಾಧ್ಯವಿರಲಿಲ್ಲ. ಅವರು ನಡೆದು ಬಂದ ಹಾದಿ ಮರೆಯಬಾರದು. ಅವರು ಅನುಭವಿ ಹಿರಿಯ ರಾಜಕಾರಣಿ. ಪದೇ ಪದೇ ಈ ರೀತಿ ಹೇಳಿಕೆ ನೀಡಬಾರದು ಎಂದರು.

ಕಳೆದ ಜ.16 ರಂದು ಗವಿಗಂಗಾಧರ ಸ್ವಾಮಿ ದೇವಾಲಯದ ಬಳಿ ಕಲ್ಯಾಣಿ ಉದ್ಘಾಟನೆ ವೇಳೆ ತಾವು ತಂದ ಅನುದಾನದಿಂದ ಕಾಮಗಾರಿ ನಡೆದಿದೆ ಎಂದಿದ್ದರು. ಅದಕ್ಕೆ ಸಹಮತ ವ್ಯಕ್ತಪಡಿಸಿ ಕಾಂಗ್ರೆಸ್ ಸರ್ಕಾರದಿಂದ ಅವರ ಅವಧಿಯ 37 ಕೋಟಿ ರೂ. ಅನುದಾನ ಹಿಂಪಡೆಯಲಾಗಿದೆ ಎಂಬುದನ್ನು ಸೂಕ್ಷ್ಮವಾಗಿ ಹೇಳಿದ್ದೆ. ಹಿಂದಿನ ಶಾಸಕರು ತಂದ ಅನುದಾನದ ಕಾಮಗಾರಿಗಳಿಗೆ ಹಾಲಿ ಶಾಸಕರು ಚಾಲನೆ ನೀಡುವುದು ವಾಡಿಕೆ. ಅದನ್ನು ತಪ್ಪೆಂದು ಬಿಂಬಿಸಬಾರದು ಎಂದರು.

ಇತ್ತೀಚೆಗೆ ಕಾಂಗ್ರೆಸ್ ಪಕ್ಷದ ಮನು ಅವರೊಂದಿಗೆ 15 ರಿಂದ 30 ಮಂದಿ ಜೆಡಿಎಸ್ ಸೇರ್ಪಡೆಗೊಂಡರು. ಬಿಜೆಪಿ ಪಕ್ಷದ ಮುಖಂಡರು ನನ್ನ ಮನೆಗೆ ಆಗಮಿಸಿದಾಗ ಸಾಧಾರಣ ಶಾಲು ಹಾಕಿ ಸ್ವಾಗತಿಸಿದೆ. ಇದನ್ನು ಮನೆಗೆ ಬಂದವರನ್ನೆಲ್ಲಾ ಪಕ್ಷಕ್ಕೆ ಸೇರಿಸಿಕೊಳ್ಳುತ್ತಿದ್ದಾರೆ ಎಂಬ ತಪ್ಪು ಸಂದೇಶ ರವಾನಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್ ಮಾತನಾಡಿ, ಜೆಡಿಎಸ್ ಮತ್ತು ಬಿಜೆಪಿ ಮುಖಂಡರು ಎನ್‌ಡಿಎ ಮೈತ್ರಿಕೂಟದ ಸದಸ್ಯರಾಗಿ ಕೆಲಸ ಮಾಡಬೇಕು. ಯಾರಿಗಾದರೂ ಮನಸ್ಸಿಗೆ ನೋವಾಗಿದ್ದರೆ ಪಕ್ಷದ ಚೌಕಟ್ಟಿನಲ್ಲಿ ಚರ್ಚೆ ಮಾಡಬೇಕು. ಆದರೆ ಕೆಸಿನಾರಾಯಣಗೌಡರು ಸಣ್ಣ ಪುಟ್ಟ ವಿಷಯವನ್ನು ದೊಡ್ಡದು ಮಾಡು ತ್ತಿರುವುದು ಸರಿಯಲ್ಲ ಎಂದು ಖಾರವಾಗಿ ನುಡಿದರು.

2028ರ ಚುನಾವಣೆ ಸಂಬಂಧ ಅಭ್ಯರ್ಥಿಗಳನ್ನು ಎರಡೂ ಪಕ್ಷಗಳ ವರಿಷ್ಠರು ನಿರ್ಧರಿಸುತ್ತಾರೆ. ಅದನ್ನು ನಾವು ನಿರ್ಧರಿಸುವುದಕ್ಕೆ ಸಾಧ್ಯವಿಲ್ಲ. ಈ ಸಂಬಂಧ ನಿಖಿಲ್ ಕುಮಾರಸ್ವಾಮಿ ಹೇಳಿಕೆ ವಿರುದ್ಧ ಅವರು ಯಾರು ಮಾತನಾಡಲು ಎಂದು ಪ್ರಶ್ನಿಸಿರುವುದು ಸರಿಯಲ್ಲ ಎಂದು ತಾಕೀತು ಮಾಡಿದರು.

ಇದೇ ರೀತಿ ಉದ್ಧಟತನ ಮುಂದುವರೆದರೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ದೂರು ನೀಡಲಾಗುವುದು ಎಂದು ಎಚ್ಚರಿಸಿದರು.

ಗೋಷ್ಠಿಯಲ್ಲಿ ಕೆ.ಆರ್.ಪೇಟೆ ಟಿಎಪಿಸಿಎಂಎಸ್ ಅಧ್ಯಕ್ಷ ಬಲದೇವ್, ಜಿ.ಪಂ ಮಾಜಿ ಸದಸ್ಯ ಮೋಹನ್, ಜೆಡಿಎಸ್ ತಾಲೂಕು ಯುವ ಘಟಕದ ಅಧ್ಯಕ್ಷ ರವಿ, ಮಹದೇವು ಇದ್ದರು.

ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ

ಮಂಡ್ಯ, ಫೆ.6– ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಫೆ.26ವರೆಗೆ ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ ನಡೆಯಲಿದ್ದು, ಫೆ.7, 20ರಂದು ಕೆ.ಆರ್.ಪೇಟೆ ಆಸ್ಪತ್ರೆ, ಫೆ.11, 24ರಂದು ಪಾಂಡವಪುರ ಆಸ್ಪತ್ರೆ, ಫೆ.12, 26ರಂದು ನಾಗಮಂಗಲ ಸಾರ್ವಜನಿಕ ಆಸ್ಪತ್ರೆ, ಫೆ.18, 25ರಂದು ಶ್ರೀರಂಗಪಟ್ಟಣ ಆಸ್ಪತ್ರೆ, ಫೆ.21 ಮದ್ದೂರು ಆಸ್ಪತ್ರೆ ಹಾಗೂ ಪ್ರತಿ ಮಂಗಳವಾರ ಮಳವಳ್ಳಿ ಸಾರ್ವಜನಿಕ ಆಸ್ಪತ್ರೆ ಆರೋಗ್ಯ ಕೇಂದ್ರಗಳಲ್ಲಿ ಬೆಳಗ್ಗೆ 10 ಗಂಟೆಗೆ ಶಿಬಿರ ನಡೆಯಲಿದೆ.

ವಿ.ವೆಂಕಟರೆಡ್ಡಿ ನಿಧನ



ಭಾರತೀನಗರ, ಫೆ.6– ಇಲ್ಲಿನ ಶ್ರೀಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ ಮಾಜಿ ವ್ಯವಸ್ಥಾಪಕ ನಿರ್ದೇಶಕ ವಿ.ವೆಂಕಟರೆಡ್ಡಿ(90) ಶುಕ್ರವಾರ ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ ರಂಗನಗರಿಗಡ್ಡ ಗ್ರಾಮದಲ್ಲಿ ಫೆ.9ರಂದು ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿದೆ.

ರಾಜ್ಯ ಕಂಡ ಆದರ್ಶ ರಾಜಕಾರಣಿ ದಿ.ಬಿ.ರಾಚಯ್ಯ

ಸಂಸ್ಮರಣೆ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಶಿವಕುಮಾರ್ ಅಭಿಪ್ರಾಯ

ಚಾಮರಾಜನಗರ, ಫೆ.6– ಮಾಜಿ ರಾಜ್ಯಪಾಲರಾದ ದಿವಂಗತ ಬಿ.ರಾಚಯ್ಯನವರು ರಾಜ್ಯ ಕಂಡ ಅತ್ಯುತ್ತಮ, ಆದರ್ಶ ರಾಜಕಾರಣಿಯಾಗಿದ್ದು, ಅವರಿಗೆ ರಾಜ್ಯದ ಮುಖ್ಯಮಂತ್ರಿಯಾಗುವ ಎಲ್ಲಾ ಅವಕಾಶವಿತ್ತು ಎಂದು ವಿಧಾನಪರಿಷತ್ ಸದಸ್ಯ ಶಿವಕುಮಾರ್ ಅಭಿಪ್ರಾಯಪಟ್ಟರು.

ತಾಲೂಕಿನ ಆಲೂರಿನಲ್ಲಿರುವ ಚಿರಶಾಂತಿ ಧಾಮದಲ್ಲಿ ನಡೆದ ದಿವಂಗತ ಗೌರಮ್ಮನವರ ಮೊದಲ ಪುಣ್ಯಸ್ಮರಣೆ ಹಾಗೂ ಮಾಜಿ ರಾಜ್ಯಪಾಲರಾದ ದಿವಂಗತ ಬಿ.ರಾಚಯ್ಯನವರ 26ನೇ ವರ್ಷದ ಸಂಸ್ಮರಣೆ ಕಾರ್ಯಕ್ರಮದಲ್ಲಿ ಅವರ ಸಮಾಧಿಗೆ ಮಾಲಾರ್ಪಣೆ ಮಾಡಿ, ಗೌರವ ನಮನ ಸಲ್ಲಿಸಿ, ಸ್ಮಾರಕದಲ್ಲಿ ಅವರ ಛಾಯಾಚಿತ್ರಗಳನ್ನು ವೀಕ್ಷಿಸಿ ಅವರು ಮಾತನಾಡಿದರು.

50 ವರ್ಷಗಳಿಗೂ ಹೆಚ್ಚು ಕಾಲ ರಾಜಕಾರಣದಲ್ಲಿದ್ದ ಬಿ.ರಾಚಯ್ಯನವರ ಸಾರ್ವಜನಿಕ ಜೀವನ ನಮ್ಮಂತಹ ಯುವ ರಾಜಕಾರಣಿಗಳಿಗೆ ಮಾದರಿಯಾಗಿದೆ. ಮೈಸೂರು ಹಾಗೂ ಚಾಮರಾಜನಗರ ಭಾಗದಲ್ಲಿ ಅವರು ಮಾಡಿರುವ ಜನಪರ ಕೆಲಸಗಳು ಇನ್ನೂ ಜೀವಂತವಾಗಿವೆ. ಸಚಿವರಾಗಿ ರಾಜ್ಯಾದ್ಯಂತ ಪ್ರವಾಸ ಮಾಡಿ ಉತ್ತಮ ಕಾರ್ಯಕ್ರಮ ನೀಡುವ ಮೂಲಕ ಜನಾನುರಾಗಿ ರಾಜಕಾರಣಿಯಾಗಿದ್ದರು. ಅವರು ವಹಿಸಿಕೊಂಡ ಖಾತೆಗಳನ್ನು ಸಮರ್ಥವಾಗಿ ನಿಭಾಯಿಸಿ ಜನರಿಗೆ ಅನುಕೂಲ ಮಾಡಿಕೊಟ್ಟಿದ್ದರು. ಅವರ ಸೇವೆ, ಜನಪ್ರಿಯತೆಗೆ ಮುಖ್ಯಮಂತ್ರಿ ಆಗುವ ಅವಕಾಶವಿತ್ತು. ಆದರೆ ನಾನಾ ಕಾರಣಗಳಿಂದ ಅವಕಾಶ ತಪ್ಪಿತು. ಇದುವರೆಗೂ ದಲಿತ ಮುಖ್ಯಮಂತ್ರಿ ಆಗಲಿಲ್ಲ ಎಂಬ ನೋವು ಇದೆ ಎಂದರು.

ರಾಜಕಾರಣದ ಜೊತೆಗೆ ಸಾರ್ವಜನಿಕ ಜೀವನದಲ್ಲೂ ರಾಚಯ್ಯನವರು ಸರಳವಾಗಿದ್ದರು. ಅವರ ಹಾದಿಯಲ್ಲಿ ಅವರ ಪುತ್ರರಾದ ಎ.ಆರ್.ಕೃಷ್ಣಮೂರ್ತಿ ಮತ್ತು ಸಹೋದರ ಸಾಗುತ್ತಿದ್ದಾರೆ. ರಾಚಯ್ಯನವರ ತುಂಬು ಕುಟುಂಬ ನೋಡಿದರೆ ತುಂಬಾ ಸಂತಸವಾಗುತ್ತದೆ ಎಂದರು.


ಆಲೂರಿನಲ್ಲಿ ರಾಚಯ್ಯನವರ ಸಂಸ್ಮರಣೆ, ಗೌರಮ್ಮನವರ ಪ್ರಥಮ ಪುಣ್ಯಸ್ಮರಣೆ ನಡೆಯಿತು.

> “ನನ್ನ ಪೂಜ್ಯ ತಂದೆ ರಾಚಯ್ಯನವರ 26ನೇ ಸಂಸ್ಮರಣೆ ಹಾಗೂ ತಾಯಿ ಗೌರಮ್ಮನವರ ಪ್ರಥಮ ಪುಣ್ಯಸ್ಮರಣೆಯನ್ನು ಏರ್ಪಡಿಸಿದ್ದು, ಅವರ ಅಭಿಮಾನಿಗಳು, ಹಿತೈಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿರುವುದು ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಅವರ ಮಕ್ಕಳಾದ ನಾವು ಅವರ ಹಾದಿ, ಮಾರ್ಗದರ್ಶನದಲ್ಲಿ ಸಾಗುತ್ತಿದ್ದು, ನಿಮ್ಮೆಲ್ಲರ ಪ್ರೀತಿ, ವಿಶ್ವಾಸಕ್ಕೆ ಆಭಾರಿಯಾಗಿದ್ದೇವೆ. – ಎ.ಆರ್.ಕೃಷ್ಣಮೂರ್ತಿ, ಶಾಸಕ.

ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಸದಸ್ಯ ಆರ್.ಬಾಲರಾಜು, ಎ.ಆರ್.ಪ್ರಭಾವತಿ, ವೇದಾವತಿ, ಉಮಾವತಿ, ಆರತಿ, ತ್ರಿವೇಣಿ, ಮಾಜಿ ಸಚಿವ ಬಿ.ಬಿ.ಲಿಂಗಯ್ಯ, ನಿವೃತ್ತ ಅಧಿಕಾರಿಗಳಾದ ಪುಟ್ಟಮಾದಯ್ಯ, ನಿವೃತ್ತ ನಿರ್ದೇಶಕ ವೆಂಕಟೇಶ್, ಮಂಜುಳ ಕೃಷ್ಣಮೂರ್ತಿ, ವಿಜಯಲಕ್ಷ್ಮಿ ಬಾಲರಾಜು, ಶ್ರೀವರ್ಧನ್, ರೋಷಿಣಿ ಪ್ರದೀಪ್ ಕುಮಾರ್, ನಿವೃತ್ತ ಐಪಿಎಸ್ ಅಧಿಕಾರಿ ಬೋಳಯ್ಯ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಜಿಪಂ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಉಪಾಧ್ಯಕ್ಷರಾದ ಅಯ್ಯನಪುರ ಶಿವಕುಮಾರ್, ಕೇತಮ್ಮ, ಯೋಗೇಶ್, ಸದಸ್ಯರಾದ ಕೊಪ್ಪಾಳಿ ಮಹದೇವನಾಯಕ, ಕೆರೆಹಳ್ಳಿ ನವೀನ್, ಎಸ್.ಸೋಮನಾಯಕ, ಕೆ.ಪಿ.ಸದಾಶಿವ ಮೂರ್ತಿ, ಕಮಲ್, ಲಕ್ಷ್ಮೀಪುಟ್ಟಸ್ವಾಮಿ, ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ತೋಟೇಶ್, ಗುರುಸ್ವಾಮಿ, ಪ್ರಭುಪ್ರಸಾದ್, ಹೊಂಗನೂರು ಚಂದ್ರು, ಚಾಮುಲ್ ಅಧ್ಯಕ್ಷ ಶಿವಕುಮಾರ್, ನಿರ್ದೇಶಕ ರೇವಣ್ಣ, ಹೊಂಗನೂರು ನಂಜಯ್ಯ, ಪು.ಶ್ರೀನಿವಾಸನಾಯಕ, ದಲಿತ ಮುಖಂಡ ವೆಂಕಟರ ಮಣಸ್ವಾಮಿ ಪಾಪು, ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಕೆ.ರವಿಕುಮಾರ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ವಿ.ಚಂದ್ರು ಮುಖಂಡ ಕಂದಹಳ್ಳಿ ನಂಜುಂಡಸ್ವಾಮಿ, ಮಹದೇವ ಪ್ರಸಾದ್, ಚಿನ್ನುಮುತ್ತು, ಆರ್.ಎಂ.ಸ್ವಾಮಿ, ನಾಗೇಂದ್ರ, ಕೋಡಿ ಉಗನೆಮಂಜು, ಆರ್.ಮಹದೇವು, ಗೌಡಿಕೆ ಶಿವಪ್ಪ ರವೀಶ್, ಶಮಿತ್, ಸೋಮು, ನಂಜೇಗೌಡ, ಮಾಂಬಳ್ಳಿ ನಂಜುಂಡಸ್ವಾಮಿ, ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು, ಚಿಕ್ಕಮಹದೇವು, ಆಲೂರು ಮಲ್ಲಣ್ಣ , ಹೊಂಗನೂರು ಚೇತನ್, ಕುಟುಂಬ ವರ್ಗ ಇತರರಿದ್ದರು.

ತಲೆಗೆ ಗನ್ ಪಾಯಿಂಟ್ ಮಾಡಿಕೊಂಡು

ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಉದ್ಯಮಿ ಹೈಡ್ರಾಮ

ಗುಂಡ್ಲುಪೇಟೆ, ಫೆ.6(ಸೋಮ್.ಜಿ)– ಉದ್ಯಮಿಯೊಬ್ಬರು ತಲೆಗೆ ಗನ್ ಪಾಯಿಂಟ್ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೈಡ್ರಾಮ ನಡೆಸಿದ ಘಟನೆ ತಾಲೂಕಿನ ಹಿರಿಕಾಟಿ ಗ್ರಾಮದ ಶುಕ್ರವಾರ ನಡೆದಿದೆ.

ಕೇರಳ ಮೂಲದ ಉದ್ಯಮಿ ಕ್ಲಿಪ್ಪಿ ಹೈಡ್ರಾಮ ಸೃಷ್ಟಿಸಿದ ಉದ್ಯಮಿ. ಈತ ಇಂದು ಇಲ್ಲಿನ ಸಾಯಿಪ್ರಿಯ ಎಂಟರ್ ಪ್ರೈಸಸ್ ಎಂಬ ಕ್ರಷರ್ ಎದುರು ಕ್ಯಾರವಾನ್ ಅನ್ನು ಅಡ್ಡ ನಿಲ್ಲಿಸಿ, ಕ್ಲಿಪ್ಪಿ ಮೈ ಸ್ಯಾಂಡ್, ಮೈ ಸ್ಟೋನ್ ಕ್ರಷರ್ ಇಲ್ಲಿಗಲ್ ಟೇಕ್ ಓವರ್ ವಿ ವಿಲ್ ಪ್ರೋಟೆಸ್ಟ್ ಅನ್‌ಟಿಲ್ ಜಸ್ಟೀಸ್ ಎಂಬ ಬ್ಯಾನರ್ ಹಾಕುವ ಮೂಲಕ ತಲೆಗೆ ಗನ್ ಪಾಯಿಂಟ್ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೈಡ್ರಾಮ ನಡೆಸಿದರು.

ಸಾಯಿಪ್ರಿಯ ಎಂಟರ್ ಪ್ರೈಸಸ್ ವ್ಯವಹಾರ ಸಾಕಷ್ಟು ವರ್ಷಗಳಿಂದ ಕ್ಲಿಪ್ಪಿ ಹಾಗೂ ನೀತು ಶೇಖರ್ ಅವರ ಪಾಲುದಾರಿಕೆಯಲ್ಲಿ ನಡೆಯುತ್ತಿತ್ತು. ಆದರೆ ಇವರಿಬ್ಬರ ನಡುವೆ ಮನಸ್ತಾಪವಾಗಿ ವ್ಯವಹಾರ ಸಂಬಂಧ ನ್ಯಾಯಾಲಯದ ಮೊರೆ ಹೋಗಿದ್ದರು. ನ್ಯಾಯಾಲಯ ನೀತು ಶೇಖರ್ ಪರ ತೀರ್ಪು ನೀಡಿದೆ.

ಈ ಹಿಂದೆಯೂ ಉದ್ಯಮಿ ಕ್ಲಿಪ್ಪಿ ನೀತು ತಂದೆ ಶೇಖರ್‌ಗೆ ಗನ್ ತೋರಿಸಿದ್ದರು. ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆದರೆ ತನಿಖೆಯಲ್ಲಿ ಅದು ನಕಲಿ ಗನ್ ಎಂದು ಸಾಬೀತಾದ ಹಿನ್ನೆಯಲ್ಲಿ ಪ್ರಕರಣ ವಜಾಗೊಂಡಿತ್ತು. ಇದೀಗ ಮತ್ತೆ ಕ್ಲಿಪ್ಪಿ ತಲೆಗೆ ಗನ್ ಪಾಯಿಂಟ್ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೈಡ್ರಾಮ ನಡೆಸಿದ್ದು, ನೀತು ಶೇಖರ್ ಅವರು ಯಾವಾಗ ಏನಾಗುತ್ತದೆಯೋ ಎಂಬ ಭಯದಲ್ಲಿ ಕಾಲ ಕಳೆಯುತ್ತಿದ್ದಾರೆ. ಇಷ್ಟಾದರೂ ಸಹ ಪೊಲೀಸರು ಉದ್ಯಮಿ ಕ್ಲಿಪ್ಪಿ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವುದು ನಿಜಕ್ಕೂ ದುರಂತ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ. ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ.



ಧರ್ಮಸ್ಥಳ ಸಂಸ್ಥೆಯಿಂದ ವಾತ್ಸಲ್ಯ ಮನೆ ಹಸ್ತಾಂತರ

ಯಳಂದೂರು, ಫೆ6– ತಾಲೂಕಿನ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ವಾತ್ಸಲ್ಯ ಕಾರ್ಯಕ್ರಮದಡಿ ತಾಲೂಕಿನ ಚುಂಗಡಿಪುರ ಗ್ರಾಮದ ನಂಜಯ್ಯ ಅವರಿಗೆ ವಾತ್ಸಲ್ಯ ಮನೆ ಹಸ್ತಾಂತರಿಸಲಾಯಿತು.

ಜಿಲ್ಲಾ ನಿರ್ದೇಶಕ ದಿನೇಶ್ ಮಾತನಾಡಿ, ಹೇಮಾವತಿ ಅಮ್ಮನವರ ಕನಸಿನ ಕೂಸಾದ ಜ್ಞಾನವಿಕಾಸ ಕಾರ್ಯಕ್ರಮದಡಿ ಈ ವಾತ್ಸಲ್ಯ ಮನೆ ನಿರ್ಮಿಸಲಾಗಿದೆ. ಈ ಮನೆಯಲ್ಲಿ ನಂಜಯ್ಯ ದಂಪತಿ ಸುಖ, ಶಾಂತಿ, ನೆಮ್ಮದಿಯಿಂದ ಜೀವನ ನಡೆಸಲಿ ಎಂದು ಶುಭ ಹಾರೈಸಿದರು.

ವಾತ್ಸಲ್ಯ ಮನೆ ನಾಮ ಫಲಕವನ್ನು ಗ್ರಾಮದ ಸವಿತಾ ಅನಾವರಣಗೊಳಿಸಿದರು. ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಭೀಮಪ್ಪ, ಎನ್‌ರಿಚ್‌ನ ಮಹದೇವಸ್ವಾಮಿ, ರಾಜು, ಚಂದ್ರಶೇಖರ್, ಸತೀಶ್ ಸೇರಿದಂತೆ ಇನ್ನಿತರರಿದ್ದರು.


ನಂಜಯ್ಯ ಅವರಿಗೆ ವಾತ್ಸಲ್ಯ ಮನೆ ಹಸ್ತಾಂತರಿಸಲಾಯಿತು.

ಅಸ್ವಾಳು ಗ್ರಾಮದ ದಲಿತ ಯುವಕನ ಹತ್ಯೆ ಆರೋಪಿ ಬಂಧನಕ್ಕೆ ಆಗ್ರಹಿಸಿ ದಲಿತ ಪ್ಯಾಂಥರ್ಸ್ ಎಸ್‌ಪಿಗೆ ಮನವಿ



ಮೈಸೂರು, ಫೆ.6– ಇತ್ತೀಚೆಗೆ ಹುಣಸೂರು ತಾಲೂಕಿನ ಅಸ್ವಾಳು ಗ್ರಾಮದಲ್ಲಿ ಜಾತಿ ವೈಷಮ್ಯದ ಕಾರಣದಿಂದಾಗಿ ಹತ್ಯೆಯಾಗಿದ್ದ ದಲಿತ ಯುವಕನ ಸಾವಿಗೆ ನ್ಯಾಯ ಕಲ್ಪಿಸಿಕೊಡುವಂತೆ ಆಗ್ರಹಿಸಿ ಕರ್ನಾಟಕ ದಲಿತ ಪ್ಯಾಂಥರ್ಸ್ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಕೆಲ ದಿನಗಳ ಹಿಂದೆ ಅಸ್ವಾಳು ಗ್ರಾಮದ ರಾಕೇಶ್ ಮೇಲೆ ಅದೇ ಗ್ರಾಮದ ನವೀನ್ (ಬಾಸ್) ಹಳೇ ವೈಷಮ್ಯದಿಂದ ಹಗೆ ಕಟ್ಟಿಕೊಂಡು ಅಪಘಾತದ ನೆಪವೊಡ್ಡಿ ಹಲ್ಲೆ ನಡೆಸಿ ಹತ್ಯೆ ಮಾಡಿದ್ದ. ಈ ಸಂಬಂಧ ರಾಕೇಶ್ ಕುಟುಂಬದವರು ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲು ಮುಂದಾದಾಗ ಪೊಲೀಸರು ಪ್ರಕರಣವನ್ನು ದಾಖಲಿಸಿಕೊಳ್ಳದೇ ರಾಜಿ ಮಾಡಿಕೊಳ್ಳುವಂತೆ ತಿಳಿಸಿದ್ದಾರೆ.

ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಬಿಳಿಕೆರೆ ಪೊಲೀಸರು ವಿಫಲವಾಗಿದ್ದು, ಹತ್ಯೆಯಾಗಿರುವ ರಾಕೇಶ್ ಕುಟುಂಬಕ್ಕೆ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಸೂಕ್ತ ರಕ್ಷಣೆ ನೀಡಬೇಕು. ಅಪರಾಧಿಯನ್ನು ಬಂಧಿಸಿ ಕಾನೂನಾತ್ಮಕ ಕ್ರಮ ಜರುಗಿಸಬೇಕು ಎಂದು ಕರ್ನಾಟಕ ದಲಿತ ಪ್ಯಾಂಥರ್ಸ್ ಮನವಿಯಲ್ಲಿ ತಿಳಿಸಿದ್ದಾರೆ. ಈ ವೇಳೆ ಅಧ್ಯಕ್ಷ ಯೋಗನರಸಿಂಹ, ವಕೀಲ ಎಂ.ಕಿರಣ್ ಕುಮಾರ್, ಅರವಿಂದ್, ಅನುಪಮ್, ಮೋಹನ್, ದೇವೇಂದ್ರ, ಕುಮಾರ್, ದಾನಿಯಮ್ಮ, ಪ್ರಸನ್ನ, ನವೀನ್, ಧನಂಜಯ್ ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಬಟ್ಟೆ ಅಂಗಡಿ(ಯೂನಿಫಾರ್ಮ್ ಮೆಟೀರಿಯಲ್) ಡೆಲಿವರಿ ಬಾಯ್ ಬೇಕಾಗಿದ್ದಾರೆ. ಸಮಯ ಬೆಳಿಗ್ಗೆ 10 ರಿಂದ 7 ರವರೆಗೆ ರೂ. 12,000 ಸಂಬಳ
ಶ್ರೀ ದೇವಿ ಗಾರ್ಮೆಂಟ್ಸ್, ಹನುಮಂತು ಹೋಟೆಲ್ ಎದುರು, ಮಂಡಿ ಮಾರ್ಕೆಟ್, ಮೈಸೂರು
9880480188

ಬೇಕಾಗಿದ್ದಾರೆ
ಪ್ರಿಂಟಿಂಗ್ ಪ್ರೆಸ್ ಕೆಲಸಕ್ಕೆ ಆಫ್‌ಸೆಟ್ ಮೆಷಿನ್ ಮತ್ತು ಆಟೋಮೆಟಿಕ್ ಕಟಿಂಗ್ ಮೆಷಿನ್‌ಗಳಲ್ಲಿ ಅನುಭವವುಳ್ಳ ಹಾಗೂ ಸಹಾಯಕ ಹುಡುಗರು ಬೇಕಾಗಿದ್ದಾರೆ.
ಕೂಡಲೇ ಸಂಪರ್ಕಿಸಿ:
ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್
ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು–570001
9902639593

DTCP APPROVED SITE FOR SALE
40x60 North Facing
12 Mt Road, Rs. 33 L
Saptharishi Nagara
Brahmins Layout 'E' Block.
Mob: 7892020600

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

MUDA APPROVED SITE FOR SALE
30x47 North facing
12 Mt Road, Rs. 31 L
Saptharishi Nagara
Brahmins Layout 'D' Block.
Mob: 7892020600

ಬೇಕಾಗಿದ್ದಾರೆ
ಮೈಸೂರಿನ ದಟ್ಟಗಳ್ಳಿಯಲ್ಲಿರುವ ಮನೆಗೆ ಗಾರ್ಡನರ್ ಕೆಲಸಕ್ಕೆ ಅನುಭವಸ್ಥ ಒಂದು ಕುಟುಂಬ ಮತ್ತು ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ ಬೇಕಾಗಿದ್ದಾರೆ
ಉತ್ತಮ ಸಂಬಳ ನೀಡಲಾಗುವುದು.
ಸಂಪರ್ಕಿಸಿ:
81234 50066

WANTED
GRAPHIC DESIGNER (FRESHER)
TATA ACE DRIVER
9448067939
9739569260

MYSURU RETINA CARE STAFF REQUIRED
[FRESHER OR EXPERIENCE]
1. OPTOMETRIST,
2. RECEPTIONIST,
3. OT STAFF,
CONTACT NUMBER
7338369364/ 0821-2543244
#22A, SRI GURU KRUPAM, 1ST FLOOR, ABOVE ANANTHAM CAFE, NIVEDITHA NAGAR, MYSORE-570022,

WANTED
- FRONT OFFICE SUPERVISOR
- PRODUCTION SUPERVISOR

9448067939
9739569260

House for Rent / Lease
40X60
3BHK, 1st Floor,(corner House) Srirampura, 2nd Stage, Madhuvana Near Amrutha Bakery Bus Stop
9632873908

ಮುಡಾ ನಿವೇಶನ ಮಾರಾಟಕ್ಕಿದೆ
40x60
ದಟ್ಟಗಳ್ಳಿ 3ನೇ ಹಂತ, ತ್ರಿವೇಣಿ ಸೂಪರ್ ಮಾರ್ಕೆಟ್ ಎದುರು, ಮೈಸೂರು. ಆಸಕ್ತರು ಸಂಪರ್ಕಿಸಿ
8904497670

ಸೈಟು/ ಮನೆ ಮಾರಾಟಕ್ಕಿದೆ
50x80 N ಪರುಶುರಾಮನಗರ, ಛಗತಳ್ಳಿ ಬನ್ನೂರು ರಸ್ತೆ, 40x60 E/S Corner CFTRI Layout ಬೋಗಾದಿ, 40x60 RT ನಗರ, ನೇಸರ ಲೇಔಟ್, 30x40 ಸಾತಗಳ್ಳಿ 2ನೇ ಹಂತ, ಪರುಶುರಾಮನಗರ, 20x30 3 BHK Duplex, ಲಲಿತಾದ್ರಿನಗರ, RK ನಗರ, 30x40 G/F 1st & 2nd Floor, Duplex CFTRI Layout
9448938989
7892035789

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಹಾಗೂ ಟ್ಯಾಂಕ್ ಕ್ಲೀನಿಂಗ್ ಮತ್ತು ಸೋಲಾರ್ ಸರ್ವೀಸ್‌ಗಾಗಿ ಸಂಪರ್ಕಿಸಿ
Mob: 9964733988

ತಕ್ಷಣ ಬೇಕಾಗಿದ್ದಾರೆ
ವರ್ಕ್ ಫ್ರಂ ಹೋಂ ಕೆಲಸಕ್ಕೆ ವಿದ್ಯಾರ್ಥಿಗಳಿಗೆ & ಪುರುಷರಿಗೆ ಹಾಗೂ ಮಹಿಳೆಯರಿಗೆ ಮೊದಲ ಆದ್ಯತೆ (ಮನೆಯಿಂದಲೇ ಕೆಲಸ) 7th, 10th, PUC, Any Degree ಪಾಸ್, ಫೇಲ್ ಆದವರು ಸಂಪರ್ಕಿಸಿ:
HR: 9742133993

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 8197383645

ಪ್ರವಾಸ
6 ದಿನಗಳ ದುಬೈ ಪ್ರವಾಸ 23-3-26
5 ದಿನಗಳ ಕ್ರಬಿ ಪುಕೆಟ್ 24-3-26
5 ದಿನಗಳ ಬ್ಯಾಂಕಾಕ್ ಮತ್ತು ಪಟ್ಟಾಯ 22-4-26
6 ದಿನಗಳ ವಿಯೆಟ್ನಾಮ್ 11-4-26
7 ದಿನಗಳ ಸಿಂಗಪೂರ್ ಮತ್ತು ಮಲೇಷಿಯಾ 26-4-26
ಸುವರ್ಣ ಯಾತ್ರಾ
9480843945 / 9019462508

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗಿಯರು, ಮೈಸೂರಿನ ಸರಸ್ವತಿಪುರಂ ಆಫೀಸಿನಲ್ಲಿ ಕೆಲಸ ಮಾಡಲು, ಕನ್ನಡ and English ಟೈಪಿಂಗ್ ಮಾಡಲು ಬರಬೇಕು, ಈ-ಖಾತ ಮಾಡಲು ಅನುಭವವಿರಬೇಕು, ಆಕರ್ಷಕ ಸಂಬಳ ನೀಡಲಾಗುತ್ತದೆ. ಮೈಸೂರಿನವರಿಗೆ ಮೊದಲ ಆದ್ಯತೆ.
ಸಂಪರ್ಕಿಸಬೇಕಾದ ದೂರವಾಣಿ
8217464915

ಹೊಸ ಮನೆ ಭೋಗ್ಯಕ್ಕಿದೆ
30x40ರಲ್ಲಿ ಒಂದನೇ ಅಂತಸ್ತಿನ ಡೂಪ್ಲೆಕ್ಸ್ ಮನೆ ಹೊಸ ಮನೆ, ಸೂರ್ಯನ ಬಾಗಿಲು, ಭೋಗ್ಯಕ್ಕಿದೆ. ಸಂಪರ್ಕಿಸಿ, 4 ಬೆಡ್ ರೂಮ್‌ನ ಮನೆ,
ಸ್ವಾಮಿ– 9845570573
ಶ್ವೇತ – 8217621688
LIC ಕಾಲೋನಿ ಶ್ರೀರಾಂಪುರ 2ನೇ ಹಂತ, ಮಹರ್ಷಿ ಸ್ಕೂಲ್ ಹತ್ತಿರ

FOR RENT
In between Shivrampet and Urs road Double shop # 54/1A sizing 12/25 sq ft, area is getting vacating, ground floor, suitable for work shop, hotel, printing press and other business.
If required please contact
Mob: 8904709506

OFFICE SPACE FOR RENT
Suitable for BPO 100 + Seat fully furnished. Contact:
Mob: 9742283306

ಹೊಸ ಮನೆ ಮಾರಾಟಕ್ಕಿದೆ
ಇಲವಾಲ ಸೆಂಟ್ ಜೋಸೆಫ್ ಸ್ಕೂಲ್ ಹತ್ತಿರ 20x30 ಅಳತೆಯ 3 BHK ಡ್ಯೂಪ್ಲೆಕ್ಸ್ ಫುಲ್ ಫರ್ನಿಷ್ಡ್ ಓನ್ ಬೋರ್‌ವೆಲ್ MUDA Approved, North ಫೇಸ್ ಮನೆ ಮಾರಾಟಕ್ಕಿದೆ. ಬೆಲೆ 69 ಲಕ್ಷ.
9483862050, 8660625801

ಬೇಕಾಗಿದ್ದಾರೆ
ಅನುಭವ ಇರುವ ಕಾಫಿ ಮಾಸ್ಟರ್ ಬೇಕಾಗಿದ್ದಾರೆ. ಮೈಸೂರು
Mob: 9900661620

Shop for Sale
Good Running Hotel, Grocery and Tea shop in same premises is for sale, can takeover hostel tender.
Mob: 8747933845

WANTED IMMEDIATELY
1) Supervisor/ Field Executive/ Field Officer / Attender/ Office Assistant/ Office Executives (Preference for freshers) (Salary- 20,000/- to 50,000/-) Work Location: #20, 1st Floor, Buddhamarga, Siddhartha Layout, Opp New DC Office, Mysore
Office: 0821-3588801
Phone: 9353787677

ತಕ್ಷಣ ಬೇಕಾಗಿದ್ದಾರೆ
ಸೆಕ್ಯುರಿಟಿ ಗಾರ್ಡ್ ಮತ್ತು ಫೀಲ್ಡ್ ಆಫೀಸರ್ ಹುದ್ದೆಗಳಿಗೆ ಗಂಡಸರು ಬೇಕಾಗಿದ್ದಾರೆ. ಕೆ.ಆರ್.ಎಸ್, ಮೇಟಗಳ್ಳಿ, ಹೂಟಗಳ್ಳಿ, ಕೂರ್ಗಳ್ಳಿ ಸುತ್ತಮುತ್ತ ಕೆಲಸ ಮಾಡಲು ಸೆಕ್ಯುರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. (ಇ.ಎಸ್.ಐ ಮತ್ತು ಪಿ.ಎಫ್)ಸೌಲಭ್ಯ ಇದೆ. ಸ್ಟ್ಯಾಲಿನ್ ಸೆಕ್ಯೂರಿಟಿ – ಮೆನ್ ಪವರ್ ಸರ್ವಿಸ್ #221, 6th ಕ್ರಾಸ್, ಮಹಾದೇಶ್ವರ ಬಡಾವಣೆ, ತ್ರಿನೇತ್ರ ಸರ್ಕಲ್, ಹೆಬ್ಬಾಳ್ ಮೈಸೂರು–570016
Contact- 9611741411/ 8197269895/ 8050900395

WANTED URGENT Graphic Designer
Software Coreldraw.
Salary: Rs. 15,000
ESI & PF and weekly off also provided. Contact:
Mob: 9108484084

DTP Operator
ಮಡಿಕೇರಿಯ ಪತ್ರಿಕಾ ಕಚೇರಿಯಲ್ಲಿ ಕೆಲಸ. ಉತ್ತಮ ಸಂಬಳದೊಂದಿಗೆ ಊಟ, ವಸತಿ ಉಚಿತ.
Mob: 7975959269

FOR SALE
21x35
GF 2 Shop, 1 BHK house
FF 2 BHK house
2nd Floor 1 BHK house.
Mob: 9482121750
Vidyaranyapuram, 16th Cross.

ಹೌಸ್‌ಕೀಪಿಂಗ್ ಸಿಬ್ಬಂದಿ
ಪುರುಷರು – ಮಹಿಳೆಯರು ದಂಪತಿಗಳಿಗೆ ಅವಕಾಶ.
ಮಡಿಕೇರಿ ಸಮೀಪದ ಎಸ್ಟೇಟ್ ಹೋಂ ಸ್ಟೇ. ಸಂಬಳದೊಂದಿಗೆ ಊಟ–ವಸತಿ ಇದೆ. ಸಂಪರ್ಕಿಸಿ:
Mob: 7975959269

ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ವಿದ್ಯಾರ್ಹತೆ 7th, 10th, PUC, Diploma, any Degree pass or fail. ಸಂಬಳ 18000 ರಿಂದ 30000 ರ ವರೆಗೆ. ವಿ. ಸೂ : ಪುರುಷ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ. Android Mobile ಹಾಗೂ Two wheeler ಇರಬೇಕು.
ಭರತ್ ಕುಮಾರ್
Mob: 9880151653

ಬೆಂಗಳೂರಿನಲ್ಲಿ ಪ್ರತಿಷ್ಠಿತ ಕಂಪೆನಿಗಳಿಗೆ 2025 ಮೋಡೆಲ್ ಮೇಲ್ಪಟ್ಟ sedan ಮತ್ತು XUV ಕಾರುಗಳನ್ನು ಅಟ್ಯಾಚ್ ಮಾಡಿಕೊಡಲಾಗುವುದು. (Employee pickup and drop) Sedan ಕಾರಿಗೆ ಪ್ರತಿ ತಿಂಗಳಿಗೆ 65,000ರಿಂದ 90,000 ವರೆಗೆ. XUV ಕಾರಿಗೆ 80,000ರಿಂದ 1,00,000 ವರೆಗೆ (1 ವರ್ಷದ ಅಗ್ರಿಮೆಂಟ್ ಮಾಡಿಕೊಡಲಾಗುವುದು.) ಸೂಚನೆಗಳು: ಏಜೆನ್ಸಿ ಶುಲ್ಕಗಳು: 10,000ರೂ ಸಂಪರ್ಕಿಸಿ:
9187073404

ಮನೆ ಬಾಡಿಗೆಗೆ ಇದೆ
(ಸಸ್ಯಾಹಾರಿಗಳಿಗೆ ಮಾತ್ರ) ಜೆಎಸ್‌ಎಸ್ ಮಹಾ ವಿದ್ಯಾಪೀಠದ ಎದುರು, ರಾಮಾನುಜ ರಸ್ತೆ, ಗ್ರೌಂಡ್ ಫ್ಲೋರ್, 1 BHK. ಪೂರ್ವ ದಿಕ್ಕು, ಆಫೀಸ್‌ಗೂ ಯೋಗ್ಯವಾಗಿದೆ – ಮೊಬೈಲ್
9449886322

WANTED
DRIVER FOR 24 FEET CONTAINER VEHICLE WITH HEAVY DRIVING LICENCE(BADGE)
CONTACT:
7204959799
7204932991

DOCUMENTS LOST
I, Subramanian C M, R/at K 401, Tapovan Aprts, V V Nagar Mysore-08, has lost Original Sale Deed No 2304,181,1940 dt 13/7/2000 registered at Sub-Registrar Mysore North, pertaining to shed no B 14, Hebbal Indl Estate, Mysore, Along with possession certificate lease cum sale agreement. Finders Please contact
9448371122

ಸೈಟ್ ಮಾರಾಟಕ್ಕಿವೆ
ವಸುಂದರ ಎನ್‌ಕ್ಲೇವ್ ಲೇಔಟ್, H.D. ಕೋಟೆ ಮೇನ್ ರೋಡ್, ಕೆಂಚಲಗೂಡು, ಮುಡಾ ಅಪ್ರೂವ್ಡ್ ಸೈಟ್‌ಗಳು, 30x40 ಮತ್ತು 30x50
9964958335
8861610303

SITE FOR SALE
50x80 N/F Double Road SITE FOR SALE
50x80 Suryanagara Phase 3 Attibele, Bengaluru
E Khata Ready.
Block 3, Price 6800
BROKERS EXCUSE
Contact: 9449448797

ಆಫೀಸ್ ಕೆಲಸಕ್ಕೆ
ನಮ್ಮ ಸಂಸ್ಥೆಗೆ ಮ್ಯಾನೇಜರ್ ಕೆಲಸಕ್ಕೆ ಮಹಿಳೆಯರು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು ಮೊದಲು ಬಂದವರಿಗೆ ಆದ್ಯತೆ
9739292222

ಉದ್ಯೋಗ ಅವಕಾಶ
ಯುವಕ ಯುವತಿಯರು ಬೇಕಾಗಿದ್ದಾರೆ ಕಂಪನಿ : TVS, HONDA, TOYOTA, TATA ಪ್ಯಾಕಿಂಗ್ ಪಿಕ್ಕಿಂಗ್ ಡೇಟಾ ಎಂಟ್ರಿ ಆಫೀಸ್ ವರ್ಕ್ ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ
6361167510
9066914645

ಹೋಟಲ್ ವಸ್ತುಗಳು ಮರಾಟಕ್ಕಿದೆ
10 ತಿಂಗಳ ಹಳೆಯ ಉತ್ತಮ ಗುಣಮಟ್ಟದ (202 ಮತ್ತು 304 ಗ್ರೇಡ್) ಹೋಟಲ್ ವಸ್ತುಗಳು ಮರಾಟಕ್ಕಿದೆ ವಿವರಗಳಿಗೆ ಸಂಪರ್ಕಿಸಿ
6360540097

ಸಂಪ್ ಲೀಕೇಜ್ ಬಾತ್ ರೂಂ ಲೀಕೇಜ್ ತಾರಸಿ ಲೀಕೇಜ್ ಸರಿಪಡಿಸಲಾಗುವುದು.
9591830124

ಮನೆ ಬಾಡಿಗೆಗೆ ಇದೆ
2 BHK, 24 ಗಂಟೆ ನೀರು, ಸೋಲಾರ್ ಸೌಲಭ್ಯ ಇರುವ ಮನೆ, 2ನೇ ಮಹಡಿ, ಉತ್ತರ ದಿಕ್ಕು, # 2458/K8, 12ನೇ ಕ್ರಾಸ್, ಬಸವೇಶ್ವರ ರಸ್ತೆ, ಮೈಸೂರು–4,
9945615679
9916019102

ಬೇಕಾಗಿದ್ದಾರೆ
ಕೊರಿಯರ್ ಸಂಸ್ಥೆಯಲ್ಲಿ ಆಫೀಸ್ ಕೆಲಸಕ್ಕೆ ಹಾಗೂ Part time ಮತ್ತು Full time ಕೆಲಸಕ್ಕೆ ಡೆಲಿವರಿ ಹುಡುಗರು ಬೇಕಾಗಿದ್ದಾರೆ. (ಕಂಪ್ಯೂಟರ್ ಜ್ಞಾನ ಹೊಂದಿರತಕ್ಕದ್ದು) ಸಂಪರ್ಕಿಸುವ ಸಮಯ: ಬೆಳಗ್ಗೆ 10 To ಸಂಜೆ 6.00, ಸಂಪರ್ಕಿಸಿ
9449871790

SITE FOR SALE
40x60 E/F MUDA Auction site @ Vijayanagar 4th Stage, 1st Phase.
30x40 House for sale @ Vijayanagar 2nd Stage, 100x55 E/F @ Vijayanagar 4th Stage, 2nd Phase, 80 ft. road.
9986773639
9980039509

ಛತ್ರ ಖಾಲಿ ಇದೆ
ಶ್ರೀ ವಿಠಲ ರುಕ್ಮಿಣಿ ಕನ್‌ವೆನ್ಷನ್ ಹಾಲ್, ಹುಣಸೂರು ರಸ್ತೆ, ಮೈಸೂರು, ಮಾರ್ಚ್ 14 ಮತ್ತು 15 –2026, ಸಂಪರ್ಕಿಸಿ
9880048310

ನಿವೇಶನಗಳು ಬೇಕಾಗಿವೆ
ವಿಜಯನಗರ, ದಟ್ಟಗಳ್ಳಿ, ಸಾತಗಳ್ಳಿ, ರಾಜೀವನಗರ, ಲಕ್ಷ್ಮೀಪುರಂ, ಕೃಷ್ಣಮೂರ್ತಿಪುರಂ, any Facing/ Dimension
8660463567
9845315593

S.K. CONSTRUCTION
ನಿಮ್ಮ ಕನಸಿನ ಮನೆ ಕಟ್ಟಬೇಕೆ ಚಿಂತೆ ಬೇಡ ಅತಿ ಉತ್ತಮ ಗುಣಮಟ್ಟದಲ್ಲಿ ನಿಮ್ಮ ಕೈಗೆಟಕುವ ಬೆಲೆಯಲ್ಲಿ – Plan- 3-D. Elivation ಮತ್ತು Loan ಸಹಿತ ಮಾಡಿ ಮನೆ ಕಟ್ಟಿಕೊಡುತ್ತೇವೆ.
9620528490

ನಾಯಕ ಜಾತಿಯ ವಧು ಬೇಕಾಗಿದೆ
ಬೆಂಗಳೂರು ಮತ್ತು ಮೈಸೂರಿನಲ್ಲಿ ನೌಕರಿಯಲ್ಲಿರುವ ನಾಯಕ ಹುಡುಗರಿಗೆ 20 ರಿಂದ 28 ವರ್ಷದ ವಿದ್ಯಾವಂತ ಸ್ವಜಾತಿಯ ವಧು ಬೇಕಾಗಿದೆ.
ಸಂಪರ್ಕಿಸಿ : ಲೋಕೇಶ್ ನಾಯಕ
9480887390

ಟೈಲರ್‌ಗಳು ಬೇಕಾಗಿದ್ದಾರೆ
ವಿದ್ಯಾರಣ್ಯಪುರಂ, 19ನೇ ಕ್ರಾಸ್, ಮೈಸೂರಿನರುವ ಗಾರ್ಮೆಂಟ್ ಯುನಿಟ್‌ಗೆ ಓವರ್‌ಲಾಕ್ ಟೈಲರ್‌ಗಳು ಅಗತ್ಯವಿದೆ. ಸಂಪರ್ಕಿಸಿ:
7411187185

ಜೆಪ್ಟೋ (Zepto) ಕಂಪನಿಗೆ ಬೇಕಾಗಿದ್ದಾರೆ
ಶಿಫ್ಟ್ ಸಮಯಗಳು: ನೈಟ್ ಶಿಫ್ಟ್: ರಾತ್ರಿ 10 ರಿಂದ ಬೆಳಿಗ್ಗೆ 7 ರವರೆಗೆ. ಸೆಕೆಂಡ್ ಶಿಫ್ಟ್: ಸಂಜೆ 5 ರಿಂದ ರಾತ್ರಿ 2. ಕೆಲಸದ ಸ್ಥಳ: ಬನ್ನಿ ಮಂಟಪ, ಮೈಸೂರು. ನಿಮಗೆ ಆಸಕ್ತಿ ಇದ್ದಲ್ಲಿ, ದಯವಿಟ್ಟು ಇವರನ್ನು ಸಂಪರ್ಕಿಸಿ: ಹರ್ಷಿತ್
Mob: 9066275200

Old Age Home
ನಮ್ಮಲ್ಲಿ ಎಲ್ಲಾ ತರಹದ ಹಿರಿಯ ನಾಗರೀಕರನ್ನು ಅಥವಾ ವೃದ್ಧರನ್ನು ಮನೆಯ ವಾತಾವರಣದಲ್ಲಿ ಊಟ, ವಸತಿ, ನರ್ಸಿಂಗ್ ಕೇರ್ ಮತ್ತು ವೈದ್ಯರ ಆರೈಕೆಯೊಂದಿಗೆ ನೋಡಿಕೊಳ್ಳುತ್ತೇವೆ. ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.
Mob: 9607172737

Site With Construction
Near TVS auxiliary unit for 52 Lakhs.
MARTIKYATHNHALLI for 45 Lakhs.
LISHA PROPERTIES
Mob: 9731426321 / 9035012579 / 8151035074

ಬೇಕಾಗಿದ್ದಾರೆ
ಗ್ರಾಮೀಣ/ನಗರ ಭಾಗದಲ್ಲಿ ಸ್ಥಳೀಯವಾಗಿ ಕಾರ್ಯನಿರ್ವಹಿಸಲು, ಆಸಕ್ತ ಅಭ್ಯರ್ಥಿಗಳು ಬೇಕಾಗಿದ್ದಾರೆ.
- ನಿವೃತ್ತ ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರು
- ನಿರುದ್ಯೋಗಿಗಳು ಮತ್ತು ಗೃಹಿಣಿಯರು
- ಖಾಸಗಿ ಶಾಲಾ ಶಿಕ್ಷಕ/ ಶಿಕ್ಷಕಿಯರು, ● ಅಂಗನವಾಡಿ ಶಿಕ್ಷಕಿಯರು, ● ಕನಿಷ್ಠ ವಿದ್ಯಾರ್ಹತೆ : SSLC, PUC & Degree ಸ್ಥಳ : ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಸಂಪರ್ಕಿಸಿ

8310552253

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗರು / ಹೆಂಗಸರು ಬೇಕಾಗಿದ್ದಾರೆ. ಕಾಫಿ, ಟೀ ಕೌಂಟರ್, ದೋಸೆ ಭಟ್ಟರು, ದೋಸೆ ಗ್ರೈಂಡಿಂಗ್ ಮಾಡುವರು, ಚೈನೀಸ್ ಮಾಸ್ಟರ್, ವಾಷಿಂಗ್ ಬೇಕಾಗಿದ್ದಾರೆ.
9008253179, 9606238790

ಮನೆ ಬಾಡಿಗೆಗಿದೆ
20x30 ಪೂರ್ವ ದಿಕ್ಕು, 314/D, 2 ಕ್ರಾಸ್, 2 ಮೇನ್, 2 ಸ್ಟೇಜ್, ಪಾರ್ಕ್ ಎದುರು, ಎಂ ಬ್ಲಾಕ್, ಕುವೆಂಪುನಗರ, ಮೈಸೂರು –23
Contact
8825961290

FOR SALE
2-3 BHK Apartments @RK Ngr
Commercial 40x60@ Srirampura
40x120 Site@ Dattgalli 80ft Rd
20x30, 30x40 MUDA Approved Sites Near Rainbow School Bogadi
30x40|30x50 Sites, Near RT Ngr, Brahmins Lyt, HD Kote Rd.
Commercial Properties Also Available
PRAKRUTHI PROPERTIES
95386 90359, 90359 90359

ಸೈಟ್ ಮಾರಾಟಕ್ಕಿವೆ
(ಮೂಡ ಅಪ್ರೂವ್ಡ್)
30x40
ಶ್ರೀರಾಂಪುರ ರಿಂಗ್ ರೋಡ್ ಸರ್ಕಲ್ ಹತ್ತಿರ, ಮೈಸೂರು
8050345574

DOCUMENT LOST
I, D Devaraju S/o Late Devegowda, R/a No 2716/2, 1st Cross, K.G.Koppal, Mysuru-570009 have Lost original Absolute Documents Sale Deed, Site No. 24, Survey No. 269/2, 7 acre 8 guntas, Survey No. 270/2 Measuring, 26 guntas Bogadi Village, Kasaba Hobali, Mysuru Taluku, No. MYN-1- 21046-2009-10, CD No. MYND231, Register Date: 30-03-2010 Near Kuvempunagar Bus Dipot, Mysore, Finders Contact: 8861791888

ಉದ್ಯೋಗಾವಕಾಶ
ಮಹಿಳಾ ಸಿಬ್ಬಂದಿಗಳು ಬೇಕಾಗಿದ್ದಾರೆ ಹಗಲು, ರಾತ್ರಿ ಪಾಳಿ ಹಾಗೂ ಅಲ್ಲೇ ಉಳಿದುಕೊಂಡು ಕೆಲಸ ಮಾಡುವುದು. ಊಟ, ವಸತಿ, ಇಎಸ್ಐ, ಪಿಎಫ್ ಮತ್ತು ಸ್ಪರ್ಧಾತ್ಮಕ ಮಾಸಿಕ ವೇತನ ನೀಡಲಾಗುತ್ತದೆ. ಸಂಪರ್ಕಿಸಿ:
9741637711
9606714441
6362665708

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್, JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ.
9844436672

ಮನೆ ಮಾರಾಟಕ್ಕಿದೆ
20x30 ಅಳತೆಯ ಪೂರ್ವ ದಿಕ್ಕಿನ 2 ಬೆಡ್‌ರೂಂಗಳುಳ್ಳ ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ. ದಟ್ಟಗಳ್ಳಿ ತ್ರಿವೇಣಿ ಸೂಪರ್ ಮಾರ್ಕೆಟ್ ಹತ್ತಿರ. ಕರೆಮಾಡಿ.
9739703467, 9686895205

MUDA APPROVED SITES
ತಕ್ಷಣ ಮನೆ ಕಟ್ಟಲು, ನಮ್ಮ ಲೇಔಟ್ಸ್‌ನಲ್ಲಿ
- ದಟ್ಟಗಳ್ಳಿ -RT ನಗರ- ಶ್ರೀರಾಂಪುರ ರಿಂಗ್ ರಸ್ತೆ ಹತ್ತಿರ 64–72 ಲಕ್ಷ
- ಬೋಗಾದಿ ರಸ್ತೆ ಜಟ್ಟಿಹುಂಡಿ ಹತ್ತಿರ 30 ಲಕ್ಷ
- ಹೊಸಹುಂಡಿ, ಮಾನಸಿನಗರ ಪಕ್ಕ, 34 ಲಕ್ಷ
- ಇಲವಾಲ ಸಮೀಪ 24 –40 ಲಕ್ಷ
- 40x60 ವಿಜಯನಗರ ಪಕ್ಕ 1.20 Cr

Broker Excuse
8123075038

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ, ಒಂದು ಫೋನಿನ ಕರೆ ನಿಮ್ಮ ಬದುಕನ್ನೇ ಬದಲಾಯಿಸುತ್ತದೆ.
9448229184
7899625268

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಶೋರೂಮ್ ಹಾಗೂ ಬೈಕ್ ಶೋರೂಮ್‌ಗಳಿಗೆ, CASHIER, BILLING, RECEPTIONIST, HR, ADMIN, ACCOUNTANT ETC, ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ, EDUCATION SSLC, PUC, ITI, DIPLOMA, DEGREE SALARY (18k -38k),
Contact: 6366718368
9632659609, 7899627704

ಬೇಕಾಗಿದ್ದಾರೆ
SSLC, PUC, DEGREE ಮುಗಿಸಿರುವ TELECALLER ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳವಿರುತ್ತದೆ. And Wanted (B.Com, BBA, MBA) Experienced Office Staff
9972014703

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವಾಜಮಂಗಲ / ವರುಣ ಕ್ಯಾಲಿಬರ್ / ಜೆಎಸ್‌ಎಸ್ 3ನೇ ಹಂತ / ವರುಣ ಬಸವೇಶ್ವರ / ನಿರ್ಮಾಣ್‌ನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ, ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ.
9686071750

FOR RENT
Godown, Industry
25 HP 2200 Sqft
44/C, 2nd Stage, Industrial Suburb, Vishweshwaranagar, Mysore
Godown, Industry
40 HP 7200 Sqft
Suitable for Readymade doors with machinery
Contact: 9482379099

HOUSE FOR SALE
Independent Duplex (40X60) 3BHK House, Ample Car Parking with Clear Documents. MUDA Approved, Near J.P.Nagar Ring Road, Mysore.
Price. Rs.2.35 Cr. (Negotiable)
Mob.9108545566

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

ಬೇಕಾಗಿದ್ದಾರೆ
ಬದನಗುಪ್ಪೆ(ಚಾಮರಾಜನಗರದ ಹತ್ತಿರ) ಕೈಗಾರಿಕಾ ಪ್ರದೇಶದಲ್ಲಿ ಸೆಕ್ಯೂರಿಟಿ ಕೆಲಸ ಮಾಡಲು (ಹಿಂದಿ ಭಾಷೆ ಮಾತನಾಡಲು ಬರುವ) ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಆಕರ್ಷಕ ವೇತನ, ESI +PF ಸೌಲಭ್ಯ ಇರುತ್ತದೆ. ಸಂಪರ್ಕಿಸಿ
9060075860

WANTED
FEMALE OFFICE ASSISTANT TO OUR AUDIT OFFICE - 1 POST
Education Qualification PUC plus Computer knowledge is Essential preferable to Hebbal Surroundings Area.
9740285064
Address : Nagarajegowda, M.Com(CA) Auditor & Tax Consultant No. 240, 2nd Floor, Vijayanagar-Railway Colony Main Road, Near Surya Bakery, Hebbal, Mysore-16

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಶಾರ್ಟ್ ಸರ್ಕ್ಯೂಟ್‌ನಿಂದ ಮನೆಗೆ ಬೆಂಕಿ

ಮಾಲೀಕ, ಮನೆಯವರ ಜೀವ ಉಳಿಸಿದ ಹಸುಗಳು

ತಿ.ನರಸೀಪುರ, ಫೆ.6– ಶಾರ್ಟ್ ಸರ್ಕ್ಯೂಟ್‌ನಿಂದ ಮನೆಗೆ ಬೆಂಕಿ ಬಿದ್ದು, ಲಕ್ಷಾಂತರ ರೂ.ಗಳ ಬೆಲೆ ಬಾಳುವ ಸಾಮಾಗ್ರಿಗಳು ಸುಟ್ಟು ಕರಕಲಾಗಿದ್ದು, ಮನೆಯಲ್ಲಿ ಸಾಕಿದ್ದ ಹಸುಗಳು ಅಪಾಯದ ಸುಳಿವನ್ನು ಅರಿತು ಜೋರಾಗಿ ಚೀರಾಟ ಮಾಡುವ ಮೂಲಕ ಮಲಗಿದ್ದವರನ್ನು ಎಚ್ಚರಗೊಳಿಸಿ ಅಪಾಯದಿಂದ ಪಾರು ಮಾಡಿದ ಘಟನೆ ತಾಲೂಕಿನ ಯಾಚೇನಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯದರ್ಶಿ ಕ್ಯಾತೇಗೌಡ ಎಂಬುವರ ಆರ್‌ಸಿಸಿ ಮನೆಯಲ್ಲಿ ಕಳೆದ ರಾತ್ರಿ ಶಾರ್ಟ್ ಸರ್ಕ್ಯೂಟ್ ಉಂಟಾಗಿ ಈ ಘಟನೆ ಸಂಭವಿಸಿದ್ದು ಹಸುವಿನ ಚೀರಾಟದಿಂದ ಬದುಕುಳಿದ ಕುಟುಂಬವಾಗಿದೆ.

ಫೆ.5 ರಂದು ಚೆಸ್ಕಾಂ ಇಲಾಖೆ 11 ಕೆವಿ ರಿಪೇರಿ ಇರುವುದರಿಂದ ವಿದ್ಯುತ್ ಸರಬರಾಜು ಇರುವುದಿಲ್ಲವೆಂದು ಪ್ರಕಟಣೆ ಹೊರಡಿಸಿತ್ತು. ಆನಂತರ ರಾತ್ರಿ 8.30ಕ್ಕೆ ವಿದ್ಯುತ್ ಸರಬರಾಜಾದ ವೇಳೆ ಹೈವೋಲ್ಟೇಜ್‌ನಿಂದ ಶಾರ್ಟ್ ಸರ್ಕ್ಯೂಟ್ ಆಗಿ ಅಕ್ಕ ಪಕ್ಕದ ಮನೆಯ ಟಿವಿ, ಫ್ರಿಡ್ಜ್ ಗಳು ಸುಟ್ಟು ಹೋಗಿದೆ.

ಮನೆಯಲ್ಲಿ ಮಲಗಿದ್ದ ಕ್ಯಾತೇಗೌಡ, ಅವರ ಪತ್ನಿ ರಕ್ಷಿತಾ, ಮಗಳು ಲೇಖನ ಗೌಡ, ಮಗ ಶ್ರೇಷ್ಠ ಗೌಡ ಹಾಗೂ ಅತ್ತೆ ಸರೋಜಮ್ಮ ಅವರಿಗೆ ಈ ವಿಚಾರ ಗಮನಕ್ಕೆ ಬರಲಿಲ್ಲ. ಸುಮಾರು 12 ಗಂಟೆ ಹೊತ್ತಿನಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಮನೆಗೆ ಬೆಂಕಿ ಹೊತ್ತಿಕೊಂಡಿದೆ.

ಇದ್ದಕ್ಕಿದ್ದಂತೆ ಮನೆಯ ಒಳಗೆ ಜೋರಾದ ಶಬ್ದ ಬಂತು. ಅಪಾಯದ ಸುಳಿವು ಅರಿತ ಹಸುಗಳು ಒಂದೇ ಸಮನೆ ಕಿರುಚಾಟ ನಡೆಸಿದವು. ಇದನ್ನು ಕೇಳಿ ಗಾಢ ನಿದ್ದೆಯಲ್ಲಿದ್ದ ಕ್ಯಾತೇಗೌಡ ಎಚ್ಚರಗೊಂಡಾಗ ಮನೆಯ ತುಂಬಾ ದಟ್ಟವಾದ ಹೊಗೆ ಆವರಿಸಿ ಏನು ಕಾಣದಂತಾಗಿದೆ. ಅಲ್ಲದೇ ಬೆಂಕಿಯ ಜ್ವಾಲೆ ಮನೆಯನ್ನು ಆವರಿಸಿದೆ. ಘಟನೆಯಿಂದ ಗಾಬರಿಗೊಂಡ ಕ್ಯಾತೇಗೌಡ ಮಲಗಿದ್ದ ಮಕ್ಕಳು, ಪತ್ನಿ ಹಾಗೂ ಅತ್ತೆಯವರನ್ನು ಎಬ್ಬಿಸಿ ಹೊರಗೆ ಕರೆತಂದಿದ್ದಾರೆ. ನಂತರ ಗ್ರಾಮಸ್ಥರು ಸೇರಿ ಬೆಂಕಿಯನ್ನು ಆರಿಸಿದ್ದಾರೆ. ಆದರೆ ಅಷ್ಟರಲ್ಲಾಗಲೇ ಬೆಂಕಿಯ ಕೆನ್ನಾಲಿಗೆ ಕಿಟಕಿ, ಬಾಗಿಲು, ಫ್ರಿಡ್ಜ್, ಸುಟ್ಟು ಹೋಗಿತ್ತು ಬೆಂಕಿಯ ಕೆನ್ನಾಲಿಗೆಗೆ ಮನೆಯ ಗೋಡೆಯೆಲ್ಲಾ ಬಿರುಕು ಬಿಟ್ಟು, ವಿದ್ಯುತ್ ವೈರಿಂಗ್ ಸುಟ್ಟು ಭಸ್ಮವಾಗಿದೆ. ಅದೃಷ್ಟವಶಾತ್ ಹಸುಗಳ ಕಿರುಚಾಟದ ಶಬ್ದ ಕೇಳದಿದ್ದಲ್ಲಿ ಬಾರಿ ಅಪಘಾತವೇ ಸಂಭವಿಸಿ, ಸಾವು ನೋವು ಉಂಟಾಗುವ ಸಾಧ್ಯತೆ ಹೆಚ್ಚಿತ್ತು.



ಶಾರ್ಟ್ ಸರ್ಕ್ಯೂಟ್‌ನಿಂದ ಮನೆಯಲ್ಲಿರುವ ಪದಾರ್ಥಗಳು ಸುಟ್ಟು ಕರಕಲಾಗಿರುವುದು.

ಚೆಸ್ಕಾಂ ಬೇಜವಾಬ್ದಾರಿಯೇ ಘಟನೆಗೆ ಕಾರಣ

ಬೆಂಕಿ ಅವಘಡಕ್ಕೆ ಚೆಸ್ಕಾಂ ಇಲಾಖೆಯವರ ಬೇಜವಾಬ್ದಾರಿಯೇ ಕಾರಣ ಎಂದು ವೈ.ಕೆ.ಕ್ಯಾತೇಗೌಡ ಆರೋಪಿಸಿದ್ದಾರೆ. ಬೆಂಕಿ ಬಿದ್ದ ಸಮಯದಲ್ಲಿ ಚೆಸ್ಕಾಂ ಇಲಾಖೆಯ ಯಾರೊಬ್ಬ ಕರೆಯನ್ನು ಸ್ವೀಕರಿಸಲಿಲ್ಲ. ಅವರು ಕರೆ ಸ್ವೀಕರಿಸಿದ್ದರೆ ಇಷ್ಟು ಮಟ್ಟಿನ ಅವಘಡ ಸಂಭವಿಸುತ್ತಿರಲಿಲ್ಲ. ನಾನು ಮಾಡಿದ ಕರೆಯನ್ನು ಲೈನ್‌ಮ್ಯಾನ್ ಸೇರಿದಂತೆ ಇಇ ಸ್ವೀಕಾರ ಮಾಡದೇ ಉದಾಸೀನ ಮಾಡಿದ್ದೇ ಅವಘಡಕ್ಕೆ ಮುಖ್ಯಕಾರಣ, ನಂತರ ವಿಜಿಲೆನ್ಸ್‌ಗೂ ಕಾಲ್ ಮಾಡಿದ್ದೆ. ಆಗಲೂ ಕೂಡ ಅವರಿಂದ ಬೇಜವಾಬ್ದಾರಿ ಉತ್ತರವೇ ಬಂತು. ಈಗ ಹೇಗೂ ಬೆಂಕಿ ಆರಿಸುವ ಕೆಲಸವನ್ನು ನೀವೇ ಮಾಡಿದ್ದೀರಾ, ಬೆಳಿಗ್ಗೆ ಬಂದು ಇತರೆ ಪ್ರಕ್ರಿಯೆ ಮುಂದುವರೆಸುವುದಾಗಿ ತಿಳಿಸಿದರು. ಹೈ ವೋಲ್ಟೇಜ್‌ನಿಂದ ಮನೆ ಸುಟ್ಟು ಹೋಗಿದ್ದು ಇದಕ್ಕೆ ಚೆಸ್ಕಾಂ ಇಲಾಖೆಯ ಬೇಜವಾಬ್ದಾರಿ ಕಾರಣವಾಗಿದ್ದು, ಮುಂದಾದರೂ ಇಂತಹ ಘಟನೆ ಮರುಕಳಿಸದಂತೆ ಎಚ್ಚರ ವಹಿಸಬೇಕಾಗಿದೆ. ಬೆಂಕಿ ಅವಘಡದಿಂದ ನನಗೆ ಉಂಟಾಗಿರುವ ಲಕ್ಷಾಂತರ ರೂ.ಗಳ ನಷ್ಟವನ್ನು ಇಲಾಖೆ ತುಂಬಿಕೊಡಬೇಕು ಎಂದು ಆಗ್ರಹಿಸಿದರು.

ಸಮುದಾಯದ ಹೆಸರು ಹೇಳಲು ಸಂಕೋಚವೇಕೆ?

ನೇಗಿಲಯೋಗಿ ಬನ್ನೂರು ಹೋಬಳಿ ಶಾಖೆ, ತಾಲೂಕು ಒಕ್ಕಲಿಗರ ಸಂಘದ ಉದ್ಘಾಟನಾ ಸಮಾರಂಭ

ತಿ.ನರಸೀಪುರ, ಫೆ.6– ನಮ್ಮ ಉದ್ದೇಶಗಳು ಎಲ್ಲಿ ಸ್ಪಷ್ಟವಾಗಿದೆಯೋ ಅಂತಹ ಕಡೆ ನಾವು ಇಂತಹದ್ದೇ ಸಮುದಾಯಕ್ಕೆ ಸೇರಿದವರು ಎಂದು ಹೇಳಿಕೊಳ್ಳಲು ನಾಚಿಕೆ ಪಡುವ ಅವಶ್ಯಕತೆ ಇಲ್ಲ ಎಂದು ಆದಿ ಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದ ನಾಥ ಸ್ವಾಮೀಜಿ ಸಮುದಾಯದ ಜನರಿಗೆ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್ ವತಿಯಿಂದ ತಾಲೂಕಿನ ಚಾಮನಹಳ್ಳಿಯ ಶ್ರೀನಿವಾಸ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದ್ದ ನೇಗಿಲಯೋಗಿ ಬನ್ನೂರು ಹೋಬಳಿ ಶಾಖೆ, ತಾಲೂಕು ಒಕ್ಕಲಿಗರ ಸಂಘದ ಉದ್ಘಾಟನೆ ಮತ್ತು ಸಾಧಕರಿಗೆ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನೇಗಿಲಯೋಗಿ ಟ್ರಸ್ಟ್ ಅನ್ನು ರಾಜ್ಯ ಮತ್ತು ರಾಷ್ಟ್ರ ಮಟ್ಟದ ಆಚೆಗೂ ತೆಗೆದುಕೊಂಡು ಹೋಗುವ ಮಹತ್ವದ ಕೆಲಸ ಮಾಡಲಾಗಿದೆ. ಇಲ್ಲಿ ಕೇವಲ ಇದು ಒಕ್ಕಲಿಗ ಸಮಾಜದ ಸಂಘಟನೆ ಎಂದು ಬಿಂಬಿತವಾಗಬಹುದು. ಆದರೆ ಸಂಘಟನೆಯ ಉದ್ದೇಶ ಸ್ಪಷ್ಟವಾಗಿರಬೇಕು. ನಮ್ಮನ್ನು ನಾವು ಸರಿ ಮಾಡಿಕೊಳ್ಳುವ ಉದ್ದೇಶ ಇರಬೇಕು. ಇಂತಹ ವ್ಯವಸ್ಥೆಯ ಸದಸ್ಯರಾಗಲು ಕಾರ್ಯಕ್ರಮದಲ್ಲಿ ಭಾಗವಹಿಸಲು ನಾಚಿಕೆ ಯಾಕೆ ಪಡಬೇಕು ಎಂದರು.



ಚಾಮನಹಳ್ಳಿಯಲ್ಲಿ ನೇಗಿಲಯೋಗಿ ಬನ್ನೂರು ಹೋಬಳಿ ಶಾಖೆ, ತಾಲೂಕು ಒಕ್ಕಲಿಗರ ಸಂಘ ಮತ್ತು ಸಾಧಕರಿಗೆ ಅಭಿನಂದನಾ ಸಮಾರಂಭವನ್ನು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು.

ನಮ್ಮ ಉದ್ದೇಶಗಳು ಎಲ್ಲಿ ಸ್ಪಷ್ಟವಾಗಿರುತ್ತವೆಯೋ ಅಲ್ಲಿ ನಾವು ತಲೆ ಎತ್ತಿ ಇಂತಹ ಸಮುದಾಯಕ್ಕೆ ಸೇರಿದ್ದೇವೆ ಎಂದು ಹೇಳಿಕೊಳ್ಳುವುದಕ್ಕೆ ಯಾವುದೇ ಅಡ್ಡಿ ಇಲ್ಲ ಎಂದರು.

ಸಮುದಾಯದ, ಸಮಾಜದ, ಸಂಘಟನೆಯ ಕಾರ್ಯಕ್ರಮ ಇಲ್ಲಿ ಬಹಳ ಮುಖ್ಯವಾಗುತ್ತದೆ. ಸ್ವಾಮಿ ವಿವೇಕಾನಂದರು ಅಮೆರಿಕಾಗೆ ಹೋಗಿ ಬಂದ ಮೇಲೆ ಅವರನ್ನು ಅಮೆರಿಕಾದಲ್ಲಿ ಮುಖ್ಯವಾದ ವಿಚಾರ ಏನಿದೆ ಎಂದು ಕೇಳಲಾಯಿತು. ಅವರು ಅಮೆರಿಕಾ ಅಭಿವೃದ್ಧಿಗೆ ಎರಡು ಕಾರಣಗಳನ್ನು ನೀಡಿದ್ದರು. ಆ ದೇಶದಲ್ಲಿ ಜನರು ಸಂಘಟಿತರಾಗಿದ್ದಾರೆ, ಅವರ ರಾಷ್ಟ್ರದ ಉನ್ನತಿಗೆ ಅವರು ಎಷ್ಟು ಸಂಘಟನೆಯಾಗಿದ್ದಾರೆಂದರೆ ಆ ದೇಶದ ಹೆಚ್ಚಿನ ಮಾನವ ಸಂಪನ್ಮೂಲವನ್ನು ದೇಶದ ಅಭಿವೃದ್ಧಿಗೆ ಸಂಪೂರ್ಣವಾಗಿ ವಿನಿಯೋಗ ಮಾಡುತ್ತಾರೆ. ಅವರ ಮಾನವ ಸಂಪನ್ಮೂಲ ಸಾಲದೇ ಇದ್ದಲ್ಲಿ ಬೇರೆ ಬೇರೆ ದೇಶದ ಉನ್ನತ ಶಕ್ತಿ ಜ್ಞಾನ ಹೊಂದಿರುವ ಮೇಧಾವಿಗಳನ್ನು ಅವರ ದೇಶಕ್ಕೆ ಕರೆಸಿಕೊಂಡು ಬಿಡುತ್ತಾರೆ. ನಮ್ಮ ದೇಶದ ರೈತರು ಬೆಳೆಯುವ ಹಣ್ಣು ತರಕಾರಿಯ ಮೊದಲ ಕ್ವಾಲಿಟಿಯನ್ನು ಅವರು ತೆಗೆದುಕೊಳ್ಳುತ್ತಾರೆ. ಬೇರೆ ಬೇರೆ ದೇಶದಲ್ಲಿರುವ ಬಹು ಉತ್ತಮವಾದ ಯಾವುದೇ ಆದರೂ ಅದನ್ನು ಅವರು ತೆಗೆದುಕೊಳ್ಳುತ್ತಾರೆ. ಆಮೂಲಕ ತಮ್ಮ ದೇಶವನ್ನು ಅಭಿವೃದ್ಧಿ ಪಡಿಸುತ್ತಾರೆ ಎಂದು ವಿವರಿಸಿದರು.

ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ, ನೇಗಿಲಯೋಗಿ ಬನ್ನೂರು ಹೋಬಳಿಯ ಗೌರವಾಧ್ಯಕ್ಷ ವೈ.ಎಸ್.ರಾಮಸ್ವಾಮಿ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಮೈಮುಲ್ ಮಾಜಿ ಅಧ್ಯಕ್ಷ ಆರ್.ಚೆಲುವರಾಜು, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಪುರಸಭೆ ಮಾಜಿ ಅಧ್ಯಕ್ಷ ಕೃಷ್ಣೇಗೌಡ, ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ವೈ.ಎನ್.ಶಂಕರೇಗೌಡ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಂ.ಬಿ.ಮಂಜೇಗೌಡ, ನೇಗಿಲಯೋಗಿ ಸಮಾಜಸೇವಾ ಟ್ರಸ್ಟ್‌ನ ಮೈಸೂರು ಜಿಲ್ಲಾಧ್ಯಕ್ಷ ಡಿ.ರವಿಕುಮಾರ್,ವಿವೇಕಾನಂದ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ಪ್ರಕಾಶ್, ಟಿಎಪಿಸಿಎಂಎಸ್ ಅಧ್ಯಕ್ಷ ಸುಬ್ರಹ್ಮಣ್ಯ, ಡಿಸಿಸಿ ಬ್ಯಾಂಕ್ ನಿರ್ದೇಶಕ ಬೋರೇಗೌಡ, ತಾಪಂ ಮಾಜಿ ಅಧ್ಯಕ್ಷ ಚಾಮೇಗೌಡ, ತಾಲೂಕು ಒಕ್ಕಲಿಗ ಸಂಘದ ಕಾರ್ಯಾಧ್ಯಕ್ಷ ಡಾ.ಮಲ್ಲಿಕಾರ್ಜುನ ಸ್ವಾಮಿ,ಉದ್ಯಮಿ ರಂಗಸ್ವಾಮಿ,ತಾಲೂಕು ಒಕ್ಕಲಿಗ ಸಂಘದ ಪ್ರಧಾನ ಕಾರ್ಯದರ್ಶಿ ನುಗ್ಗಹಳ್ಳಿ ಕೊಪ್ಪಲು ಎನ್.ಎಂ.ರಾಮಚಂದ್ರ, ಯಾಚೇನಹಳ್ಳಿ ಓಂ ನಾಗೇಂದ್ರ, ತಿರುಮಕೂಡಲು ಲಕ್ಷ್ಮಣ ಸೇರಿದಂತೆ ಒಕ್ಕಲಿಗ ಸಂಘದ ಸದಸ್ಯರು, ಸಮಾಜದ ಮುಖಂಡರು, ಯಜಮಾನರು ಹಾಜರಿದ್ದರು.

ಕಸುವಿನಹಳ್ಳಿ ಡೇರಿ ಕಾಂಗ್ರೆಸ್ ತೆಕ್ಕೆಗೆ

ಮಲ್ಲುಂಡಿ: ನಂಜನಗೂಡು ತಾಲೂಕಿನ ಕಸುವಿನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಕೆ.ಎಸ್.ಚಂದ್ರಶೇಖರ್ ಉಪಾಧ್ಯಕ್ಷರಾಗಿ ಮಲ್ಲಿಗಮ್ಮ ಆಯ್ಕೆಯಾಗಿದ್ದಾರೆ.



ಕಸುವಿನಹಳ್ಳಿ ಡೇರಿಯ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಸನ್ಮಾನಿಸಲಾಯಿತು.

ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿ ಅಭ್ಯರ್ಥಿ ಕೆ.ಎಸ್.ಚಂದ್ರಶೇಖರ್, ಬಿಜೆಪಿ ಬೆಂಬಲಿತ ಅಭ್ಯರ್ಥಿ ಸುರೇಶ್ ನಾಮಪತ್ರ ಸಲ್ಲಿಸಿದರು. ಕಾಂಗ್ರೆಸ್ ಅಭ್ಯರ್ಥಿ ಕೆ.ಎಸ್ ಚಂದ್ರಶೇಖರ್ 7 ಮತ ಪಡೆದು ಜಯಶೀಲಾರಾದರೆ ಪ್ರತಿ ಸ್ಪರ್ಧಿ ಸುರೇಶ್ 5 ಮತ ಪಡೆದು ಪರಾಭವಗೊಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಮಲ್ಲಿಗಮ್ಮ ಹೊರತುಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಉಪಾಧ್ಯಕ್ಷರಾಗಿ ಮಲ್ಲಿಗಮ್ಮ ಅವಿರೋಧವಾಗಿ ಆಯ್ಕೆಯಾದರು. ಇವರ ಆಯ್ಕೆಯನ್ನು ಚುನಾವಣಾಧಿಕಾರಿ ನಾರಾಯಣ ಸ್ವಾಮಿ ಘೋಷಣೆ ಮಾಡಿದರು.

ನೂತನ ಅಧ್ಯಕ್ಷ ಕೆ.ಎಸ್.ಚಂದ್ರಶೇಖರ್ ಮಾತನಾಡಿ ರೈತರು ಸಂಘಕ್ಕೆ ಗುಣಮಟ್ಟದ ಹಾಲು ಶೇಖರಣೆ ಮಾಡುವುದರಿಂದ ಸಂಘವು ಹೆಚ್ಚಿನ ಲಾಭಾಂಶ ಪಡೆಯುತ್ತದೆ. ಜೊತೆಗೆ ಸಂಘದ ಸದಸ್ಯರ ಸಹಕಾರ ಪಡೆದು ಸಂಘದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ತಿಳಿಸಿದರು.

ಕೆ.ಎನ್.ಮಲ್ಲೇಶ್, ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅದ್ಯಕ್ಷ ಕೆ.ಎನ್. ಚಿನ್ನಸ್ವಾಮಿ, ಕೆಎಂ.ಶಿವಪ್ಪ ನಾಗನಾಯಕ, ಸುರೇಶ್, ರಾಜು, ನಿಜಲಿಂಗಪ್ಪ,ರಾಜೇಂದ್ರಪ್ರಸಾದ್ ಇದ್ದರು.

ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ 300 ಕೋಟಿ ರೂ.ಕೊಡಿ

ಹುಣಸೂರು, ಫೆ.6– ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ ಈ ಬಾರಿ ಬಜೆಟ್‌ನಲ್ಲಿ 300 ಕೋಟಿ ಅನುದಾನ ನೀಡುವಂತೆ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ತಾಲೂಕು ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣಚಾರಿ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಸಮಾಜದ ಮುಖಂಡ ಕೆ.ಪಿ.ನಂಜುಂಡಿ ರಾಜ್ಯಾದ್ಯಂತ ಪ್ರವಾಸ ಮಾಡಿ ವಿಶ್ವಕರ್ಮದ ಏಳಿಗೆಗೆ ಜಾಗೃತಿ ಮೂಡಿಸುವ ಮೂಲಕ ಅರಿವಿಗೆ ಕಾರಣರಾಗಿದ್ದಾರೆ. ಆದ್ದರಿಂದ ಸರಕಾರ ಎಲ್ಲಾ ಸಮುದಾಯಕ್ಕೆ ಆದ್ಯತೆ ನೀಡುವಂತೆ. ನಮ್ಮ ಜನಸಂಖ್ಯೆಯ ಆಧಾರದ ಮೇಲೆ ಅನುದಾನ ನೀಡಲಿ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಿಶ್ವಕರ್ಮ ಅಭಿವೃದ್ಧಿ ನಿಗಮದಿಂದ ಪ್ರತಿ ತಾಲೂಕಿನಲ್ಲಿ ಕೇವಲ ಐದು ಜನರಿಗೆ ಮಾತ್ರ ಸಾಲದ ಸೌಲಭ್ಯ ಸಿಗುತ್ತಿದ್ದು, ಅದು ಸಾಲದಾಗಿದೆ ಎಂದಿದ್ದಾರೆ.

ತಾಯಿ, ಮಕ್ಕಳ ಆಸ್ಪತ್ರೆಗೆ ಶಾಸಕರ ದಿಢೀರ್ ಭೇಟಿ

ನಂಜನಗೂಡು: ಶಾಸಕ ದರ್ಶನ್ ಧ್ರುವನಾರಾಯಣ್ ರವರು ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿ, ಸ್ವಚ್ಛತೆಗೆ ಆದ್ಯತೆ ನೀಡಿ ಸಾರ್ವಜನಿಕರಿಗೆ ಉತ್ತಮ ಚಿಕಿತ್ಸೆ ನೀಡುವಂತೆ ವೈದ್ಯಾಧಿಕಾರಿಗಳಿಗೆ ಸೂಚನೆ ನೀಡಿದರು.

ನಂತರ ಮಾತನಾಡಿದ ಅವರು ರಾತ್ರಿಯ ವೇಳೆಯಲ್ಲಿ ವೈದ್ಯರು ಲಭ್ಯವಿರುವುದಿಲ್ಲ ಮತ್ತು ದಾದಿಯರು ಹಾಗೂ ಸಿಬ್ಬಂದಿಗಳು ಸಾರ್ವಜನಿಕರಿಗೆ ಸ್ಪಂದಿಸುವುದಿಲ್ಲ ಎಂದು ಸಾರ್ವಜನಿಕರಿಂದ ವ್ಯಾಪಕ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ.

ಪರಿಶೀಲನೆ ವೇಳೆ ಆಸ್ಪತ್ರೆಯ ಶೌಚಾಲಯಗಳನ್ನು ನಿರ್ವಹಣೆ ಮಾಡದೇ ಇರುವುದರಿಂದ ಸ್ವಚ್ಛತೆಯಿಲ್ಲದೆ ಗಬ್ಬು ವಾಸನೆ ಬರುತ್ತಿತ್ತು, ಅಲ್ಲದೆ ಆಸ್ಪತ್ರೆಯಲ್ಲಿ ವಿತರಿಸಲಾಗುವ ಮಾತ್ರೆಗಳು ಮುಕ್ತಾಯದ ದಿನಕ್ಕೆ ಹತ್ತಿರವಾಗಿದ್ದರೂ ಸಹ ಅದನ್ನೇ ವಿತರಣೆ ಮಾಡಲಾಗುತ್ತಿತ್ತು, ಆದ್ದರಿಂದ ಮುಕ್ತಾಯದ ಒಂದು ತಿಂಗಳ ಅವಧಿಗೆ ಮುಂಚಿತವಾಗಿ ಮಾತ್ರೆಗಳನ್ನು ಬದಲಾಯಿಸಿ ಹೊಸ ಅವಧಿಯ ದಿನಾಂಕದ ಮಾತ್ರೆಗಳನ್ನು ವಿತರಿಸಬೇಕು ಎಂದು ಸೂಚನೆ ನೀಡಲಾಗಿದೆ.

ಜೊತೆಗೆ ರಾತ್ರಿಯ ಪಾಳಿಯಲ್ಲಿ ಕಡ್ಡಾಯವಾಗಿ ಒಬ್ಬ ಪ್ರಸೂತಿ ತಜ್ಞರು ಆಸ್ಪತ್ರೆಯಲ್ಲಿ ಲಭ್ಯವಿರಬೇಕು, ಮತ್ತು ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕು, ಕಡ್ಡಾಯವಾಗಿ ಆಸ್ಪತ್ರೆಯ ಆವರಣದಲ್ಲಿ ಮತ್ತು ಶೌಚಾಲಯಗಳನ್ನು ನಿರ್ವಹಣೆ ಮಾಡಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದು ವೈದ್ಯಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ, ಮುಂದಿನ ದಿನಗಳಲ್ಲಿ ಆಸ್ಪತ್ರೆಗೆ ಬೇಕಾಗುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಶ್ರಮಿಸಲಾಗುವುದು ಎಂದು ಹೇಳಿದರು.



ಏನಪ್ಪ ಅವಧಿ ಮುಗಿಯುತ್ತಾ ಬಂದಿರುವ ಔಷಧಿ ಕೊಟ್ಟಿದ್ದೀಯಲ್ಲಾ ಎಂದು ಪ್ರಶ್ನಿಸುತ್ತಿರುವ ಶಾಸಕ ದರ್ಶನ್

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಮುಖಂಡರಾದ ಕಳಲೆ ರಾಜೇಶ್, ಪ್ರಕಾಶ್, ಕೆ.ಎಂ.ಬಸವರಾಜು, ರವಿ ಸೇರಿದಂತೆ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಇಂಟರ್ನೆಟ್‌ನಲ್ಲೇ ಮುಳುಗಬೇಡಿ

ಪ್ರತಿಯೊಬ್ಬರೂ ತಮ್ಮದೇ ಆದ ಮಾದರಿಯನ್ನು ಹೊಂದಿದ್ದಾರೆ. ಕೆಲವರು ಬೆಳಗ್ಗೆ, ಕೆಲವರು ರಾತ್ರಿಯಲ್ಲಿ ಉತ್ತಮವಾಗಿ ಅಧ್ಯಯನ ಮಾಡುತ್ತಾರೆ. ನಿಮಗೆ ಯಾವುದು ಸರಿಹೊಂದುತ್ತದೆಂಯೋ ಅದನ್ನು ನಂಬಿರಿ. ಆದರೆ ಸಲಹೆಯನ್ನು ಸಹ ತೆಗೆದುಕೊಳ್ಳಿ, ಅದು ನಿಮಗೆ ಪ್ರಯೋಜನವನ್ನು ನೀಡಿದರೆ, ಅದನ್ನು ನಿಮ್ಮ ಜೀವನ ರಚನೆಗೆ ಸೇರಿಸಿಕೊಳ್ಳಿ ಎಂದರು.

ಪರೀಕ್ಷಾ ಪೆ ಚರ್ಚಾದಲ್ಲಿ ಕೆಲವು ವಿಷಯಗಳನ್ನು ಬದಲಾಯಿಸಿದ್ದೇನೆ, ನಾನು 'ಪರೀಕ್ಷಾ ಪೆ ಚರ್ಚಾ'ವನ್ನು ಪ್ರಾರಂಭಿಸಿದಾಗ, ಒಂದು ಮಾದರಿ ಇತ್ತು ಈಗ, ಕ್ರಮೇಣ, ನಾನು ಅದನ್ನು ಬದಲಾಯಿಸುತ್ತಿದ್ದೇನೆ. ಈ ಬಾರಿ, ನಾನು ಅದನ್ನು ವಿವಿಧ ರಾಜ್ಯಗಳಲ್ಲಿಯೂ ಮಾಡಿದ್ದೇನೆ. ಆದರೆ ಮೂಲ ಮಾದರಿಯನ್ನು ಕೈಬಿಡಲಿಲ್ಲ ಎಂದರು. ಬೆಳವಣಿಗೆಗೆ ಪ್ರಮುಖವಾದ ಅಧ್ಯಯನ, ವಿಶ್ರಾಂತಿ, ಕೌಶಲ್ಯ ಮತ್ತು ಹವ್ಯಾಸಗಳನ್ನು ಸಮತೋಲನಗೊಳಿಸಲು ಪ್ರಧಾನ ಮಂತ್ರಿಗಳು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಎರಡು ಕೌಶಲ್ಯಗಳಿವೆ: ಜೀವನ ಕೌಶಲ್ಯ ಮತ್ತು ವೃತ್ತಿಪರ ಕೌಶಲ್ಯಗಳು. ಎರಡೂ ಒಟ್ಟಿಗೆ ಇರುತ್ತವೆ ಎಂದು ನಾನು ಹೇಳುತ್ತೇನೆ. ಆದ್ದರಿಂದ, ಕೌಶಲ್ಯವು ಜ್ಞಾನದಿಂದ ಪ್ರಾರಂಭವಾಗುತ್ತದೆ. ಒಬ್ಬ ನಾಯಕ ಹುಟ್ಟುಹಬ್ಬದಂದು ನನಗೆ ಕರೆ ಮಾಡಿ, ನೀವು 75 ವರ್ಷಗಳನ್ನು ಪೂರ್ಣಗೊಳಿಸಿದ್ದೀರಿ, ಇನ್ನೂ 25 ವರ್ಷಗಳು ಉಳಿದಿವೆ ಎಂದು ಹೇಳಿದ್ದಾಗಿ ಮೋದಿ ನೆನಪಿಸಿಕೊಂಡರು. ಆದರೆ ನಾನು ಹಿಂದಿನದನ್ನು ಎಣಿಸುವುದಿಲ್ಲ. ಮುಂದೆ ಉಳಿದಿರುವ ಸಮಯವನ್ನು ಎಣಿಸುತ್ತೇನೆ. ನಿಮಗೂ ಅದನ್ನೇ ಹೇಳುತ್ತೇನೆ, ಹಿಂದಿನದನ್ನು ಯೋಚಿಸಬೇಡಿ. ನಿಮ್ಮ ಮುಂದೆ ಇರುವುದನ್ನು ಬದುಕಲು ಪ್ರಯತ್ನಿಸಿ ಎಂದು ಹೇಳಿದರು.

ಭಾರತ ಮುಡಿಗೆ ಯುವ ವಿಶ್ವಕಪ್ ಮುಕುಟ

ಬೊಬ್ಬಿರಿದು ಆಸರೆಯಾದರು. ತನ್ನ ಇನ್ನಿಂಗ್ಸ್ ಉದ್ದಕ್ಕೂ ಬೌಂಡರಿ ಹಾಗೂ ಸಿಕ್ಸರ್ ಸುರಿಮಳೆಯನ್ನೇ ಸುರಿಸಿದ ವೈಭವ್ ಸೂರ್ಯವಂಶಿ ಐಸಿಸಿ 50 ಓವರ್‌ಗಳ ಟೂರ್ನಿಗಳ ಫೈನಲ್‌ನಲ್ಲಿ ಅತಿ ಬೇಗನೆ ಶತಕ ಬಾರಿಸಿದ ದಾಖಲೆಯನ್ನು ತಮ್ಮ ಹೆಸರಿಗೆ ಬರೆದುಕೊಂಡರು. ಕೇವಲ 55 ಎಸೆತಗಳಿಗೆ ಶತಕವನ್ನು ಪೂರೈಸಿದ ವೈಭವ್ 80 ಎಸೆತಗಳಲ್ಲಿ 15 ಸಿಕ್ಸರ್ ಹಾಗೂ 15 ಬೌಂಡರಿಗಳನ್ನು ಬಾರಿಸಿ ಒಟ್ಟು 175 ರನ್ ಚಚ್ಚಿದರು. ವೈಭವ್ ಜತೆ ಸೇರಿ ಎರಡನೇ ವಿಕೆಟ್‌ಗೆ ಉತ್ತಮ ಜತೆಯಾಟವಾಡಿದ ನಾಯಕ ಆಯುಷ್ ಮ್ಹಾತ್ರೆ 53 ರನ್ ಬಾರಿಸಿದರು. ಇನ್ನುಳಿದಂತೆ ವೇದಾಂತ್ ತ್ರಿವೇದಿ 32, ವಿಹಾನ್ ಮಲ್ಹೋತ್ರ 30, ಅಭಿಜ್ಞಾನ್ ಕುಂದು 40, ಆರ್‌ಎಸ್ ಅಂಬರೀಶ್ 18, ಖಿಲಾನ್ ಪಟೇಲ್ 3, ಹೆನಿಲ್ ಪಟೇಲ್ 5, ಕನಿಷ್ಕ್ ಚೌಹಾಣ್ ಅಜೇಯ 37 ರನ್ ಹಾಗೂ ಯಾವುದೇ ಎಸೆತ ಎದುರಿಸದ ದೀಪೇಶ್ ದೇವೇಂದ್ರನ್ ಅಜೇಯರಾಗಿ ಉಳಿದರು.

ಇಂಗ್ಲೆಂಡ್ ಪರ ಜೇಮ್ಸ್ ಮಿಂಟೊ ಮೂರು ವಿಕೆಟ್, ಸೆಬಾಸ್ಟಿಯನ್ ಮಾರ್ಗನ್ ಮತ್ತು ಅಲೆಕ್ಸ್ ಗ್ರೀನ್ ತಲಾ ಎರಡು ವಿಕೆಟ್ ಹಾಗೂ ಮ್ಯಾನಿ ಲವ್ಸ್‌ಡೆನ್ ಒಂದು ವಿಕೆಟ್ ಪಡೆದರು.

ಇಂಗ್ಲೆಂಡ್ ಇನ್ನಿಂಗ್ಸ್: ತಂಡದ ಪರ ಆರಂಭಿಕರಾಗಿ ಕಣಕ್ಕಿಳಿದ ಜೋಸೆಫ್ ಮೂರ್ಸ್ 17 ರನ್‌ಗೆ ವಿಕೆಟ್ ಒಪ್ಪಿಸಿದ ಕಾರಣ ತಂಡ 19 ರನ್‌ಗೆ ತನ್ನ ಮೊದಲ ವಿಕೆಟ್ ಕಳೆದುಕೊಂಡು ಆರಂಭಿಕ ಆಘಾತ ಅನುಭವಿಸಿತು. ಹೀಗೆ ಆರಂಭದಲ್ಲೇ ಕುಸಿದ ತಂಡಕ್ಕೆ ಮತ್ತೋರ್ವ ಆರಂಭಿಕ ಆಟಗಾರ ಬೆನ್ ಡಾಕಿನ್ಸ್ ಹಾಗೂ ಮೂರನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಬೆನ್ ಮೇಯ್ಸ್ 74 ರನ್‌ಗಳ ಜತೆಯಾಟವನ್ನಾಡುವ ಮೂಲಕ ತುಸು ಸುಧಾರಣೆ ತಂದರು. ಬೆನ್ ಡಾಕಿನ್ಸ್ 66 ರನ್ ಬಾರಿಸಿದರೆ, ಬೆನ್ ಮೇಯ್ಸ್ 45 ರನ್ ಗಳಿಸಿದರು. ಥಾಮಸ್ 31 ರನ್ ಬಾರಿಸಿದ್ದಾಗ ವಿಕೆಟ್ ಒಪ್ಪಿಸಿದರು. ಈ ಮೂಲಕ ಇಂಗ್ಲೆಂಡ್ ಕೇವಲ 174 ರನ್‌ಗೆ 4 ವಿಕೆಟ್ ಕಳೆದುಕೊಂಡಿತು. ಬೆನ್ನಲ್ಲೇ ರಾಫಿ ಆಲ್ಬರ್ಟ್ ಡಕ್‌ಔಟ್, ಫರ್ಹಾನ್ ಅಹ್ಮದ್ 1 ಹಾಗೂ ಸೆಬಾಸ್ಟಿಯನ್ ಮಾರ್ಗನ್ ಡಕ್‌ಔಟ್ ಆದರು. ಅಲ್ಲಿಗೆ ಇಂಗ್ಲೆಂಡ್ 177 ರನ್‌ಗೆ 7 ವಿಕೆಟ್ ಕಳೆದುಕೊಂಡು ತೀರ ಸಂಕಷ್ಟಕ್ಕೆ ಸಿಲುಕಿತು. ಒಂದೆಡೆ ವಿಕೆಟ್ ಬೀಳುತ್ತಿದ್ದರೆ ಮತ್ತೊಂದೆಡೆ ಐದನೇ ಕ್ರಮಾಂಕದಲ್ಲಿ ಕಣಕ್ಕಿಳಿದಿದ್ದ ಕಾಲೆಬ್ ಫಾಲ್ಕನರ್ ಏಕಾಂಗಿ ಹೋರಾಟ ನಡೆಸಿ 67 ಎಸೆತಗಳಲ್ಲಿ 115 ರನ್ ಬಾರಿಸಿದರು. ಇನ್ನುಳಿದಂತೆ ಜೇಮ್ಸ್ ಮಿಂಟೊ 28, ಮ್ಯಾನ್ನಿ ಲಮ್ಸ್‌ಡೆನ್ 3 ರನ್ ಹಾಗೂ ಯಾವುದೇ ಎಸೆತ ಎದುರಿಸದ ಅಲೆಕ್ಸ್ ಗ್ರೀನ್ ಅಜೇಯರಾಗಿ ಉಳಿದರು.

ಭಾರತದ ಪರ ಆರ್‌ಎಸ್ ಅಂಬರೀಶ್ ಮೂರು ವಿಕೆಟ್, ದೀಪೇಶ್ ದೇವೇಂದ್ರನ್ ಎರಡು ವಿಕೆಟ್ ಹಾಗೂ ಕನಿಷ್ಕ್ ಚೌಹಾಣ್ ತಲಾ ಎರಡು ವಿಕೆಟ್ ಮತ್ತು ಖಿಲಾನ್ ಪಟೇಲ್ ಹಾಗೂ ನಾಯಕ ಆಯುಷ್ ಮ್ಹಾತ್ರೆ ಒಂದು ವಿಕೆಟ್ ಪಡೆದರು. ಭರ್ಜರಿ ಬ್ಯಾಟಿಂಗ್ ಮೂಲಕ ಫೈನಲ್ಸ್ ಪಂದ್ಯದಲ್ಲಿ ಶತಕ ಬಾರಿಸಿದ ವೈಭವ್ ಸೂರ್ಯವಂಶಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಡಿಕೆಶಿ ಸಿಎಂ ಆಗೇ ಆಗ್ತಾರೆ...

ಇದು ಪಕ್ಷದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಎಂದು ಎಚ್ಚರಿಸಿದ್ದಾರೆ. ಸಿದ್ದರಾಮಯ್ಯ ನವರು ತಮ್ಮ ಮಗನಿಗೆ ಶಿಸ್ತಿನಿಂದ ನಡೆದುಕೊಳ್ಳಲು ಹೇಳದಿದ್ದರೆ, ಮುಂದೆ ಯಾವ ಮುಖಂಡರಿಗೂ, ಕಾರ್ಯಕರ್ತರಿಗೂ ಶಿಸ್ತಿನ ಪಾಠ ಹೇಳಲು ಅರ್ಹತೆ ಇರುವುದಿಲ್ಲ. ಹೀಗಾಗಿ ಯತೀಂದ್ರ ಬಾಯಿ ಮುಚ್ಚಿಕೊಂಡಿರುವಂತೆ ಸಿದ್ದರಾಮಯ್ಯ ನವರು ಬುದ್ಧಿಮಾತು ಹೇಳಬೇಕು. ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ಎಲ್ಲಾ ಜಾತಿ, ವರ್ಗಗಳ ಬಲದಿಂದ ಪಕ್ಷ ಅಧಿಕಾರಕ್ಕೆ ಬಂದಿದೆ. ಇದನ್ನು ಅರ್ಥ ಮಾಡಿಕೊಳ್ಳದಿದ್ದರೆ ಮುಂದಿನ ಚುನಾವಣೆಯಲ್ಲಿ ಮತದಾರರೇ ಅರ್ಥ ಮಾಡಿಸುತ್ತಾರೆ ಎಂದು ತಿಳಿಸಿದ್ದಾರೆ.


ಯಾರು ಏನೇ ಹೇಳಿದರೂ ಅಷ್ಟೆ ಅವಶ್ಯಕತೆ ಇದ್ದಾಗ ಮಲ್ಲಿಕಾರ್ಜುನ್ ಖರ್ಗೆ, ರಾಹುಲ್ ಗಾಂಧಿ ಅವರು ನಾಯಕರನ್ನು ಕರೆಸಿ ಮಾತನಾಡುತ್ತಾರೆ. ಈ ವಿಷಯವಾಗಿ ಯಾರು ಏನೇ ಹೇಳಿದರು ಅಷ್ಟೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ ಕೂಡ ಯತೀಂದ್ರ ಹೇಳಿಕೆಗೆ ಬೇಸರಿಸಿದ್ದಾರೆ.

ವಾರ್ ಶುರು: ಅತ್ತ ವಿಪಕ್ಷ ನಾಯಕ ಆರ್.ಅಶೋಕ್, ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ನಡುವೆ ವಾರ್ ಶುರುವಾಗಿದೆ. ಇದನ್ನೆಲ್ಲಾ ನೋಡುತ್ತಿದ್ದರೆ ಅವರ ಡೆಲ್ಲಿ ಹೈಕಮಾಂಡ್ ಸತ್ತಿದೆ ಅನ್ನಿಸುತ್ತಿದೆ ಎಂದು ಛೇಡಿಸಿದ್ದಾರೆ.

ಇನ್ನು ಪರಿಷತ್‌ನ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ, ಕಾಂಗ್ರೆಸ್ ಹೈಕಮಾಂಡ್ ಒಬ್ಬರ ಮೇಲೆ ಒಬ್ಬರ ಎತ್ತಿಕಟ್ಟಿ ತಮಾಷೆ ನೋಡುತ್ತಿದೆ. ಒಟ್ಟಾರೆ ರಾಜ್ಯ ಹಾಳಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಎಲ್ಲವನ್ನೂ ಹೈಕಮಾಂಡ್ ತೀರ್ಮಾನಿಸುತ್ತೆ...

ಬೆಂಗಳೂರು, ಫೆ. 6(ಕೆಎಂಶಿ)– ಪಕ್ಷದ ಕಾರ್ಯಕರ್ತರಲ್ಲಿ ಒಬ್ಬೊಬ್ಬರಿಗೆ ಒಬ್ಬ ನಾಯಕ ಪ್ರಿಯವಾಗಿರುತ್ತಾನೆ, ಅವರೇ ಮುಖ್ಯಮಂತ್ರಿ ಆಗಬೇಕೆಂಬ ಅಭಿಲಾಷೆಯನ್ನೂ ವ್ಯಕ್ತಪಡಿಸುತ್ತಾರೆ. ಆದರೆ, ಎಲ್ಲವನ್ನೂ ತೀರ್ಮಾನಿಸುವುದು ಹೈಕಮಾಂಡ್ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ತಿಳಿಸಿದ್ದಾರೆ. ರಾಜ್ಯ ಪ್ರವಾಸದಲ್ಲಿರುವ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬೇಕೆಂಬುದು ಅವರ ಅಭಿಮಾನಿಗಳ ಆಸೆ. ಪರಮೇಶ್ವರ್ ಮುಖ್ಯಮಂತ್ರಿ ಆಗಬೇಕೆಂದು ಇನ್ನು ಕೆಲವರು ಹೇಳುತ್ತಾರೆ. ಹಾಗೆಂದಾಕ್ಷಣ ಆಗಲು ಸಾಧ್ಯವೇ. ಎಲ್ಲ ಹೈಕಮಾಂಡ್ ತೀರ್ಮಾನಿಸುತ್ತೆ. ಇಚ್ಛಿಸಿದಂತೆ ಎಲ್ಲವೂ ಆಗುವುದಿಲ್ಲ. ಯಾರು ಏನೇ ಹೇಳಿಕೆ ನೀಡಿದರೂ, ಕೊನೆಯ ನಿರ್ಧಾರ ಪಕ್ಷದ ಹೈಕಮಾಂಡ್ ನದು. ರಾಜ್ಯಕ್ಕೆ ಸ್ಥಿರ ಆಡಳಿತ ಬೇಕು, ಈಗ ಸಿದ್ದರಾಮಯ್ಯ ಸ್ಥಿರ ಆಡಳಿತ ನೀಡುತ್ತಿದ್ದಾರೆ ಎಂದರು.



ಮಸೀದಿಯಲ್ಲಿ ಆತ್ಮಾಹುತಿ ದಾಳಿ; 69 ಸಾವು

ನಡೆದಿರುವ ಈ ಸ್ಫೋಟವನ್ನು ಪೊಲೀಸರು ಆತ್ಮಹತ್ಯಾ ದಾಳಿಯೆಂದು ಶಂಕಿಸಿದ್ದಾರೆ ಎನ್ನಲಾಗಿದ್ದು, ದಾಳಿಯ ನಂತರ, ಇಡೀ ನಗರದಾದ್ಯಂತ ಎಚ್ಚರಿಕೆ ವಹಿಸಲಾಗಿದೆ. ಅದರಲ್ಲೂ, ಉಜ್ಬೇಕಿಸ್ತಾನ್ ಅಧ್ಯಕ್ಷ ಶವ್ಕತ್ ಮಿರ್ಜಿಯೋಯೆವ್ ಅವರ ಎರಡು ದಿನಗಳ ಭೇಟಿಯ ವೇಳೆಯಲ್ಲೇ ಈ ದಾಳಿ ನಡೆದಿರುವುದು ಗಮನಾರ್ಹವಾಗಿದೆ.

ಪ್ರಾರ್ಥನೆ ವೇಳೆ ನಡೆದ ಭೀಕರ ಸ್ಫೋಟ: ರಾಜಧಾನಿ ಇಸ್ಲಾಮಾಬಾದ್‌ನ ಪ್ರಮುಖ ಭಾಗದಲ್ಲಿರುವ ಇಮಾಂಬರ್ಗಾ ಎಂಬುದು ಶಿಯಾ ಮುಸ್ಲಿಮರು ಕರ್ಬಲಾ ದುರಂತವನ್ನು ಸ್ಮರಿಸಲು ಸೇರುವ ಪವಿತ್ರ ಸ್ಥಳವಾಗಿದ್ದು, ಅದರಂತೆ, ಇಂದಿನ ಶುಕ್ರವಾರದ ಮಧ್ಯಾಹ್ನದ ಪ್ರಾರ್ಥನೆಗಾಗಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಸಮಯದಲ್ಲೇ ಈ ಸ್ಫೋಟ ಸಂಭವಿಸಿದೆ.

ಆರು ತಿಂಗಳಲ್ಲಿ ಎರಡನೇ ದೊಡ್ಡ ದಾಳಿ: ನವೆಂಬರ್‌ನಲ್ಲಿ ಇಸ್ಲಾಮಾಬಾದ್ ನ್ಯಾಯಾಲಯ ಸಂಕೀರ್ಣದ ಬಳಿ ಕಾರು ಬಾಂಬ್ ಸ್ಫೋಟದಲ್ಲಿ 12 ಮಂದಿ ಸಾವನ್ನಪ್ಪಿದ್ದರು. ಆ ಘಟನೆ ಕೂಡ ಆತ್ಮಾಹುತಿ ದಾಳಿಯೇ ಆಗಿತ್ತು. ಕಳೆದ ಕೆಲವು ವರ್ಷಗಳಿಂದ ರಾಜಧಾನಿ ನಿರಂತರವಾಗಿ ಉಗ್ರರ ಗುರಿಯಾಗುತ್ತಿರುವುದು ಜನರಲ್ಲಿ ಆತಂಕ ಹೆಚ್ಚಿಸಿದೆ.

ಸಿಐಡಿ ದಾಳಿ, 13 ಮಂದಿ ಬಂಧನ

ವಿವಿಧ ಜಿಲ್ಲೆಗಳಲ್ಲಿ ನೈಜ ಬ್ಯಾಂಕ್ ಖಾತೆದಾರರನ್ನು ಪತ್ತೆ ಹಚ್ಚಿ ವಿಚಾರಣೆ ನಡೆಸಲಾಗಿದೆ. ಮೊದಲ ಹಂತದಲ್ಲಿ 158 ಮ್ಯೂಲ್ ಖಾತೆದಾರರ ವಿವರಗಳನ್ನು ಒದಗಿಸುವಂತೆ ಸೂಚಿಸಲಾಗಿದೆ. ಸೈಬರ್ ಅಪರಾಧ ದಿನೇ ದಿನೇ ಹೆಚ್ಚಾಗುತ್ತಿದೆ. ಅಮಾಯಕರ ಬ್ಯಾಂಕ್ ಖಾತೆಗಳಿಗೆ ಹಣ ನೀಡಿ, ಅವರಿಗೆ ತಿಳಿಯದೆ ಸೈಬರ್ ವಂಚಕರಿಗೆ ನೀಡುತ್ತಿರುವ ಬಗ್ಗೆ ಮುಂದಿನ ದಿನಗಳಲ್ಲಿ ಬಿಗಿ ಕಾರ್ಯಾಚರಣೆ ನಡೆಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಏನಿದು ಮ್ಯೂಲ್ ಅಕೌಂಟ್: ವಂಚನೆ ಮತ್ತು ಇತರ ಸೈಬರ್ ಅಪರಾಧಗಳಂತಹ ಕಾನೂನುಬಾಹಿರ ಚಟುವಟಿಕೆಗಳ ಮೂಲಕ ಪಡೆದ ಹಣವನ್ನು ಸಂಗ್ರಹಿಸಲು ಅಥವಾ ಹಣವನ್ನು ಕಳ್ಳಸಾಗಣೆ ಮಾಡಲು ಅಪರಾಧಿಗಳು ಬಳಸುವ ಬ್ಯಾಂಕ್ ಖಾತೆಗಳಿಗೆ ಮ್ಯೂಲ್ ಅಕೌಂಟ್ ಎನ್ನುತ್ತಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರದ ಲೂಟಿಗೆ ಅಬಕಾರಿ 6000 ಕೋಟಿ ಸೇರ್ಪಡೆ

ಬೆಂಗಳೂರು, ಫೆ. 6(ಕೆಎಂಶಿ)– ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಮುಖವಾಡವನ್ನು ಅಧಿವೇಶನದಲ್ಲಿ ಕಳಚಿ ಹಾಕುವಲ್ಲಿ ಯಶಸ್ವಿಯಾಗಿದ್ದೇವೆ ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ತಿಳಿಸಿದ್ದಾರೆ.



ಅಧಿಕಾರಕ್ಕೆ ಬಂದ ದಿನದಿಂದ ಹಗರಣಗಳ ಸುಳಿಯಲ್ಲೇ ಸರ್ಕಾರ ಸಿಲುಕಿದೆ. ಅಬಕಾರಿ ಇಲಾಖೆಯಲ್ಲಿ ಆರು ಸಾವಿರ ಕೋಟಿ ರೂ.ಗೂ ಅಧಿಕ ಮೊತ್ತದ ಲೂಟಿ ಹಗರಣಗಳ ಪಟ್ಟಿಗೆ ಹೊಸ ಸೇರ್ಪಡೆಯಾಗಿದೆ ಎಂದರು. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಯಾವುದೇ ಅಭಿವೃದ್ಧಿ ಕಾರ್ಯ ಮಾಡಿಲ್ಲ. ಜತೆಗೆ ಖಜಾನೆ ಖಾಲಿಯಾಗಿದೆ. ವಿಬಿ–ಜಿ–ರಾಮ್–ಜಿ ಯೋಜನೆಯ ತನ್ನ ಪಾಲಿನ ಶೇಕಡಾ 40 ಹಣ ಭರಿಸುವ ಸ್ಥಿತಿಯಲ್ಲೂ ರಾಜ್ಯ ಸರ್ಕಾರ ಇಲ್ಲ ಎಂದು ಟೀಕಿಸಿದ್ದಾರೆ.

'ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು' ಎಂಬಂತೆ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ವಿಬಿ–ಜಿ–ರಾಮ್–ಜಿ ಕಾಯ್ದೆ ವಿರುದ್ಧ ತಕರಾರು ತೆಗೆದಿದ್ದಾರೆ. ವಾಸ್ತವ ಸಂಗತಿ ಮರೆ ಮಾಚಿ, ಇಲ್ಲ ಸಲ್ಲದ ಆರೋಪ ಮಾಡಿ ಕೇಂದ್ರದ ವಿರುದ್ಧ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ. ಇದಕ್ಕಾಗಿ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಕೋಟ್ಯಾಂತರ ರೂ. ವೆಚ್ಚ ಮಾಡಿ ಮಾಧ್ಯಮಗಳಿಗೆ ಜಾಹಿರಾತು ಬಿಡುಗಡೆ ಮಾಡಲಾಗಿದೆ.

ಹಣದ ಕೊರತೆ ಎದುರಿಸುತ್ತಿದ್ದರೂ ಜನರ ತೆರಿಗೆ ಹಣ ಈ ರೀತಿ ರಾಜಕೀಯ ತೆವಲುಗಳಿಗೆ ಪೋಲು ಮಾಡಲಾಗುತ್ತಿದೆ.

ಮನರೇಗಾ ಯೋಜನೆಯನ್ನು ತೋಚಿದಂತೆ ದುರ್ಬಳಕೆ ಮಾಡಿ ಕೋಟಿಗಟ್ಟಲೇ ಹಣ ಲೂಟಿ ಮಾಡಲಾಗುತ್ತಿತ್ತು. ಹೊಸ ಕಾಯ್ದೆ ಇದಕ್ಕೆ ತೆರೆ ಎಳೆದಿದೆ. ಆಧುನಿಕತೆ ಸ್ಪರ್ಶದ ಜೊತೆಗೆ ಕಟ್ಟುನಿಟ್ಟಿನ ಹೊಸ ಕಾನೂನು ರೂಪಿಸಲಾಗಿದೆ. ಮಹಾತ್ಮಾ ಗಾಂಧಿ ಆಶಯದಂತೆ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯಡಿ ಯೋಜನೆ ವಿನ್ಯಾಸಗೊಳಿಸಲಾಗಿದೆ. ಲೂಟಿಗೆ ಅವಕಾಶ ತಪ್ಪಿ ಹೋಯಿತು. ಅಲ್ಲದೆ, ಶೇಕಡಾ 40ರಷ್ಟು ಹಣ ಭರಿಸಬೇಕೆಂಬ ಸಂಕಟದಿಂದ ಇಲ್ಲ ಸಲ್ಲದ ಆರೋಪ ಮಾಡುತ್ತಿದ್ದಾರೆ.

ಕಳೆದ ಎರಡೂವರೆ ವರ್ಷಗಳ ಆಡಳಿತದಲ್ಲಿ ಹಗರಣಗಳೇ ಈ ಸರ್ಕಾರದ ಸಾಧನೆ. ರಾಜ್ಯಪಾಲರ ಜೊತೆ ಕಾಲು ಕೆರೆದು ಜಗಳ ಮಾಡುವುದು. ಕೇಂದ್ರದ ವಿರುದ್ಧ ನಿರ್ಣಯ ಮಂಡಿಸುವ ನೆಪದಲ್ಲಿ ರಾಜ್ಯದ ಜನತೆಯ ದಿಕ್ಕು ತಪ್ಪಿಸುವ ಷಡ್ಯಂತ್ರ ರೂಪಿಸಲಾಗಿತ್ತು

3500 ಕಿಲೋ ಮೀಟರ್‌ವರೆಗೆ ನಿಖರ ದಾಳಿ ಸಾಮರ್ಥ್ಯ: ಅಗ್ನಿ–3 ಪರಮಾಣು ಕ್ಷಿಪಣಿ ಯಶಸ್ವಿ ಪರೀಕ್ಷೆ!

ನವದೆಹಲಿ: ಭಾರತವು ರಕ್ಷಣಾ ಸಾಮರ್ಥ್ಯಗಳನ್ನು ಮತ್ತಷ್ಟು ಬಲಪಡಿಸಲು ಮುಂದಾಗಿದ್ದು, ಅಗ್ನಿ–3 ಮಧ್ಯಂತರ ಶ್ರೇಣಿಯ ಬ್ಯಾಲಿಸ್ಟಿಕ್ ಕ್ಷಿಪಣಿ ಪರೀಕ್ಷೆ ಯಶಸ್ವಿಯಾಗಿದೆ.

ಒಡಿಶಾದ ಚಂಡಿಪುರದಲ್ಲಿರುವ ಸಮಗ್ರ ಪರೀಕ್ಷಾ ಶ್ರೇಣಿಯಿಂದ ಫೆ.6ರಂದು ಕ್ಷಿಪಣಿಯು ಯೋಜಿಸಿದಂತೆ ತನ್ನ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಪೂರೈಸಿದೆ.



ಅಗ್ನಿ–3 ಪರಮಾಣು ಸಾಮರ್ಥ್ಯದ ಮಧ್ಯಂತರ ಶ್ರೇಣಿಯ ಬ್ಯಾಲಿಸ್ಟಿಕ್ ಕ್ಷಿಪಣಿಯಾಗಿದ್ದು, ಸುಮಾರು 3,000 ರಿಂದ 3,500 ಕಿಲೋಮೀಟರ್‌ಗಳ ವ್ಯಾಪ್ತಿಯನ್ನು ಹೊಂದಿದೆ. ಇದು ಭಾರತವು ಶತ್ರು ದೇಶದೊಳಗಿನ ರಕ್ಷಣಾ ಸ್ಥಳಗಳನ್ನು ಗುರಿಯಾಗಿಸಲು ಅನುವು ಮಾಡಿಕೊಡುತ್ತದೆ.

ಯಶಸ್ವಿ ಪರೀಕ್ಷೆಯು ಕ್ಷಿಪಣಿ ವ್ಯವಸ್ಥೆಯ ವಿಶ್ವಾಸಾರ್ಹತೆ ಮತ್ತು ಸಿದ್ಧತೆಯನ್ನು ಮೌಲ್ಯೀಕರಿಸಿದೆ ಎಂದು ರಕ್ಷಣಾ ಅಧಿಕಾರಿಗಳು ತಿಳಿಸಿದ್ದಾರೆ.

ಕೆಲವು ದಿನಗಳ ಹಿಂದೆ ಅಗ್ನಿ–5 ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ಒಡಿಶಾದ ಚಂಡಿಪುರದ ಇಂಟಿಗ್ರೇಟೆಡ್ ಟೆಸ್ಟ್ ರೇಂಜ್‌ನಿಂದ ಸ್ಟ್ರಾಟೆಜಿಕ್ ಫೋರ್ಸಸ್ ಕಮಾಂಡ್‌ನ ಮೇಲ್ವಿಚಾರಣೆಯಲ್ಲಿಯೂ ಪರೀಕ್ಷಿಸಲಾಯಿತು. ಇದರ ಪ್ರಮುಖ ವೈಶಿಷ್ಟ್ಯವೆಂದರೆ ಅದರ ಮಧ್ಯಮ–ಶ್ರೇಣಿಯ ಬ್ಯಾಲಿಸ್ಟಿಕ್ ಕ್ಷಿಪಣಿ. ಇದರ ವ್ಯಾಪ್ತಿಯು 5,000 ಕಿಲೋಮೀಟರ್ ದೂರದಲ್ಲಿರುವ ಗುರಿಗಳನ್ನು ಹೊಡೆಯುವ ಸಾಮರ್ಥ್ಯ ಹೊಂದಿದೆ.

ಕೇಂದ್ರವನ್ನು ವಿರೋಧಿಸಿ

ವಿಬಿ–ಜಿ–ರಾಮ್–ಜಿ ಜಾರಿಗೊಳಿಸಿದ್ದು, ಮಹಾತ್ಮಾಗಾಂಧಿ ಹೆಸರು ತೆಗೆಯಲಾಗಿದೆ. ಆಹಾರ ಉತ್ಪಾದನೆಯಲ್ಲಿ ಭಾರತ ಸ್ವಾವಲಂಬನೆ ಸಾಧಿಸಿದೆ. ಕಾಂಗ್ರೆಸ್ ಪ್ರಣಾಳಿಕೆಯ ಭರವಸೆಗಳಲ್ಲಿ ಬಹಳಷ್ಟು ಈಡೇರಿಸಲಾಗಿದೆ. ಅವುಗಳಲ್ಲಿ ಕೃಷಿ ಭಾಗ್ಯ ಯೋಜನೆ ಪ್ರಮುಖವಾಗಿದೆ.

ಬಿಜೆಪಿ ಅಧಿಕಾರಾವಧಿಯಲ್ಲಿ ಯೋಜನೆ ಸ್ಥಗಿತಗೊಂಡಿತ್ತು. ನಮ್ಮ ಸರ್ಕಾರ ಮತ್ತೆ ಕೃಷಿ ಭಾಗ್ಯ ಯೋಜನೆ ಮರುಸ್ಥಾಪಿಸಿದೆ. ಸುಮಾರು 200 ಕೋಟಿ ರೂ. ಅನುದಾನ ನೀಡಲಾಗಿದೆ.

ಗ್ಯಾರಂಟಿ ಯೋಜನೆಗಳಲ್ಲಿ ಮಹಿಳೆಯರಿಗಾಗಿ ಶಕ್ತಿ, ಗೃಹಜ್ಯೋತಿ ಹಾಗೂ ಗೃಹಲಕ್ಷ್ಮಿ ಯೋಜನೆ ಅತ್ಯಂತ ಪ್ರಮುಖವಾಗಿವೆ. ಅನ್ನಭಾಗ್ಯ ಯೋಜನೆಯಿಂದ ಬಡವರು ಉಳಿತಾಯದಲ್ಲಿ ಹೂಡಿಕೆ ಮಾಡಬಹುದಾಗಿದೆ, ಎಲ್ಲರಿಗೂ ಸಮಾನ ಅವಕಾಶ ನೀಡುವ ಉದ್ದೇಶದಿಂದ ಜನಪರ ಯೋಜನೆಗಳನ್ನು ಜಾರಿಗೊಳಿಸಲಾಗಿದೆ ಎಂದರು.

ಅಭಿನಂದನೆ...



ಮೈಸೂರು ಜಿಲ್ಲಾ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣಾ ಸಹಕಾರ ಸಂಘ (ಹಾಪ್‌ಕಾಮ್ಸ್) ನೂತನ ನಿರ್ದೇಶಕರಾಗಿ ಆಯ್ಕೆಯಾಗಿರುವ ಬಿ.ಪಿ.ಬೋರೇಗೌಡ ಅವರನ್ನು ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಪಡುವಾರಹಳ್ಳಿ ಎಂ ರಾಮಕೃಷ್ಣ, ಕೆ.ಗಿರೀಶ್, ಜಿಲ್ಲಾ ಒಕ್ಕಲಿಗರ ಸಂಘದ ಖಜಾಂಚಿ ಆರ್. ಲೋಕೇಶ್, ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ಮಾಜಿ ನಿರ್ದೇಶಕ ವಿ.ಮಧು, ವಕೀಲ ಸಿದ್ದಲಿಂಗೇಗೌಡ ಅಭಿನಂದಿಸಿದರು.

ಉದ್ಯಮಿಯಾಗಲು ಬಯಸುವವರಿಗೆ ಆತ್ಮವಿಶ್ವಾಸ ಬಹಳ ಮುಖ್ಯ

ಆರೋಹಣ ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಸಚಿವೆ ಎಂಕೆ.ಸವಿತಾ ಸಲಹೆ



ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಶುಕ್ರವಾರ ನಡೆದ ಆರೋಹಣ ಕಾರ್ಯಕ್ರಮವನ್ನು ಶಾಸಕ ಕೆ.ಹರೀಶ್ ಗೌಡ ಉದ್ಘಾಟಿಸಿದರು.

ಮೈಸೂರು,ಫೆ.6(ಜಿಎ)–ಉದ್ಯಮಿಗಳಾಗಲು ಬಯಸುವವರಿಗೆ ಮೊದಲು ಆತ್ಮವಿಶ್ವಾಸ ಬಹಳ ಮುಖ್ಯ. ನಮಗೆ ನಮ್ಮ ಮೇಲೆ ವಿಶ್ವಾಸ ಇಲ್ಲದೇ ಹೋದರೆ ಜೀವನದಲ್ಲಿ ಯಾವುದನ್ನು ಸಾಧಿಸಲು ಆಗುವುದಿಲ್ಲ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ಅಭಿಪ್ರಾಯಪಟ್ಟರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಶುಕ್ರವಾರ ಕಾಲೇಜಿನ ವಾಣಿಜ್ಯ ಶಾಸ್ತ್ರ ಮತ್ತು ನಿರ್ವಹಣಾ ವಿಭಾಗದಿಂದ ಆಯೋಜಿಸಿದ್ದ ಆರೋಹಣ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ನಮ್ಮ ಬಳಿ ನೂರಾರು ಕೋಟಿ ಹಣ ಇರಬಹುದು. ಅಷ್ಟೇ ಪ್ರಮಾಣದ ಆಸ್ತಿ ಇರಬಹುದು. ಆದರೆ ನಮಗೆ ನಾವು ಯಶಸ್ವಿಯಾಗುತ್ತೇವೆ ಎನ್ನುವ ಆತ್ಮವಿಶ್ವಾಸ ಇಲ್ಲದೇ ಹೋದರೆ ಬೆಳವಣಿಗೆಯಲ್ಲಿ ಹಿಂದೆ ಬೀಳಬೇಕಾಗುತ್ತದೆ. ಸಾಧನೆಯಲ್ಲಿ ತಳ ಸೇರಬೇಕಾಗುತ್ತದೆ. ಆತ್ಮವಿಶ್ವಾಸ ಹಾಗೂ ಧೈರ್ಯವನ್ನು ಕಳೆದುಕೊಂಡ ಅನೇಕ ಉದ್ಯಮಿಗಳು ಏನಾದರೂ ಎನ್ನುವ ವಿಚಾರ ಇತ್ತೀಚಿನ ವರ್ಷ ಹಾಗೂ ಕೆಲ ದಿನಗಳ ಹಿಂದೆಯೇ ನಮ್ಮೆಲ್ಲರಿಗೂ ತಿಳಿದಿದೆ. ಆದ್ದರಿಂದ ಉದ್ಯಮಿಗಳಾಗುವವರು ಆತ್ಮವಿಶ್ವಾಸ ಕಳೆದುಕೊಳ್ಳಬಾರದು. ಅಂತಿಮ ಕ್ಷಣದವರೆಗೂ ಆಶಾ, ಭರವಸೆಯನ್ನು ಹೊಂದಿರಬೇಕು. ಆಗ ಮಾತ್ರ ಯಾವುದಾದರೂ ಹೊಯಿಂದ ಸ್ವಲ್ಪವಾದರೂ ಬೆಳಕು ಕಾಣಿಸಿಕೊಂಡು ಮಾರ್ಗದರ್ಶನ ಮಾಡುತ್ತದೆ ಎಂದು ತಿಳಿಸಿದರು.

ಉದ್ಯಮ ಕ್ಷೇತ್ರದಲ್ಲಿ ಯಶಸ್ವಿಯಾಗ ಬೇಕಾದರೆ ಪ್ರಾದೇಶಿಕತೆ ಭೌಗೋಳಿಕ, ಆರ್ಥಿಕ, ಸಾಮಾಜಿಕ ಕ್ಷೇತ್ರದ ಅರಿವು ಬಹಳ ಅವಶ್ಯವಾಗಿರುತ್ತದೆ. ಯಾವುದಾದರೊಂದು ಉದ್ಯಮವನ್ನು ಸ್ಥಾಪನೆ ಮಾಡಲು ಹೊರಡುವ ನವೋದ್ಯಮಿಗಳಿಗೆ, ಯುವ ಸಮೂಹಕ್ಕೆ ತಾವು ಆಯ್ಕೆ ಮಾಡಿಕೊಂಡಿರುವ ಕ್ಷೇತ್ರದ ಆಳ-ಅರಿವನ್ನು ಪ್ರಾಥಮಿಕವಾಗಿ ತಿಳಿದುಕೊಂಡಿರಲೇಬೇಕು. ಉದ್ಯಮದ ಹಿತಾಸಕ್ತಿಗಳು ಪ್ರದೇಶದಿಂದ ಪ್ರದೇಶಕ್ಕೆ ಬೇರೆಯಾಗಿರುತ್ತದೆ. ಮಂಡ್ಯದಲ್ಲಿ ಕಬ್ಬನ್ನು ಅತಿ ಹೆಚ್ಚಾಗಿ ಬೆಳೆಯುತ್ತಾರೆ. ಉದ್ಯಮಿಗಳು ಕಬ್ಬಿನ ಉತ್ಪಾದನೆಗಳನ್ನು ತಯಾರು ಮಾಡುವ ಉದ್ಯಮಗಳನ್ನು ಸ್ಥಾಪನೆ ಮಾಡಬೇಕೇ ಹೊರತು. ಅಲ್ಲಿ ಕಬ್ಬಿಣ ಕಾರ್ಖಾನೆ, ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡಿದರೆ ಯಶಸ್ಸು ಕಾಣುವುದಿಲ್ಲ. ಇದರೊಂದಿಗೆ ಸ್ಥಳೀಯ ಹವಾಮಾನ, ಮಣ್ಣಿನ ಮಾದರಿ, ಪ್ರಕೃತಿಯ ರಚನೆಗಳು ಕೂಡಾ ಉದ್ಯಮಕ್ಕೆ ಪೂರಕವಾಗಿ ಇರಬೇಕಾಗುತ್ತದೆ. ಇವುಗಳನ್ನು ಅತ್ಯಾವಶ್ಯಕವಾಗಿ ಗಮನದಲ್ಲಿ ಇಟ್ಟುಕೊಳ್ಳಬೇಕು ಎಂದು ಸಲಹೆಯನ್ನು ನೀಡಿದರು.

ನವೋದ್ಯಮಿಗಳು ಸ್ಟಾರ್ಟ್ ಅಪ್ ಶುರು ಮಾಡುವವರು ತಾವು ಉದ್ಯಮ ಶುರು ಮಾಡುವ ಸ್ಥಳವನ್ನು ಕೂಲಂಕಷವಾಗಿ ಅಧ್ಯಯನ ಮಾಡಬೇಕು. ರಾಜಧಾನಿ ಬೆಂಗಳೂರಿನಲ್ಲಿ ಆಹಾರಸಿ ವ್ಯಾಪಾರಿ ಚಟುವಟಿಕೆ ಇರುತ್ತದೆ. ಅಲ್ಲಿ ಅದಕ್ಕೆ ತಕ್ಕನಾಗಿ ಉದ್ಯಮಗಳನ್ನು ರೂಪಿಸಬಹುದು. ಆದರೆ ಬೆಂಗಳೂರಿನ ಮಾದರಿಯನ್ನು ಮೈಸೂರಿನಲ್ಲಿ ಅನುಷ್ಠಾನ ಮಾಡಲು ಸಾಧ್ಯವಿಲ್ಲ. ಏಕೆಂದರೆ ಇಲ್ಲಿ ರಾತ್ರಿ ಹತ್ತು ಗಂಟೆಯಾಗುವ ಹೊತ್ತಿಗೆ ವ್ಯಾಪಾರಿ ಚಟುವಟಿಕೆಗಳು ಸ್ಥಗಿತಗೊಂಡಿರುತ್ತವೆ. ಆದ್ದರಿಂದ ಇಂತಹ ವಿಚಾರಗಳ ಕಡೆಯೂ ಗಮನ ಹರಿಸುವುದು ಅಗತ್ಯ ಎಂದರು.

ಇತ್ತೀಚಿನ ದಿನಗಳಲ್ಲಿ ವಾಣಿಜ್ಯ ಚಟುವಟಿಕೆಗಳು ಬಹಳ ಪ್ರಗತಿಯನ್ನು ಕಂಡಿವೆ. ಹಳ್ಳಿಗಳಲ್ಲಿ ಈ ಹಿಂದೆ ಒಂದೋ ಎರಡೋ ಸಣ್ಣ-ಪುಟ್ಟ ಅಂಗಡಿಗಳು ಇರುತ್ತಿದ್ದವು. ಆದರೆ ಈಗ ಬೀದಿಗೊಂದು ಅಂಗಡಿಗಳು ತಲೆ ಎತ್ತಿವೆ. ಅಲ್ಲಿ ಎಲ್ಲ ತರಹನಾದ ಪದಾರ್ಥಗಳನ್ನು ಮಾರಾಟ ಮಾಡಲಾಗುತ್ತಿದೆ. ಅಂದರೆ ಹಳ್ಳಿಗಳ ಕೂಡಾ ವಾಣಿಜ್ಯ ಮಳಿಗೆಗಳಲ್ಲಿ ತಮ್ಮನ್ನು ತೆರೆದುಕೊಂಡಿವೆ ಎನ್ನುವ ವಿಚಾರ ಇದರಿಂದ ಗೊತ್ತಾಗುತ್ತದೆ. ಆಗಾಗಿ ಈ ನಿಟ್ಟಿನಲ್ಲಿ ವಾಣಿಜ್ಯ ಶಾಸ್ತ್ರ ಮತ್ತು ನಿರ್ವಹಣಾ ವಿದ್ಯಾರ್ಥಿಗಳು ಅಧ್ಯಯನ ಕೈಗೊಂಡು, ಮುಂದೆ ಯಾವ ರೀತಿಯ ಚಟುವಟಿಕೆಗಳನ್ನು ಪರಿಚಯ ಮಾಡಬೇಕು ಎನ್ನುವುದರ ಕುರಿತು ಅವಿಷ್ಕಾರ ಮಾಡಬೇಕು. ತನ್ಮೂಲಕ ಉದ್ಯಮ ಕ್ಷೇತ್ರದಲ್ಲಿ ಅವಕಾಶಗಳನ್ನು ವಿಪುಲವಾಗಿ ಸೃಷ್ಟಿಸಿಕೊಂಡು ಜೀವನದಲ್ಲಿ ಮೇಲೆ ಬರಬೇಕು ಎಂದು ತಿಳಿಸಿದರು.

ಶಾಸಕ ಕೆ.ಹರೀಶ ಗೌಡ ಮಾತನಾಡಿ, ಉದ್ಯೋಗ ದೊರೆಯುತ್ತದೆ ಎಂದು ಕೊಂಡು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಬಾರದು. ಬದಲಿಗೆ ಜೀವನವನ್ನು ಉತ್ತಮವಾಗಿ ರೂಪಿಸಿಕೊಳ್ಳಲು ಶಿಕ್ಷಣ ಅತಿ ಅಗತ್ಯ ಎನ್ನುವ ಅಂಶವನ್ನು ಮನದಟ್ಟು ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಪೂರಬದ ಮಲ್ಲಿಕಾರ್ಜುನ, ಎಸ್‌ಜಿಐಎನ ಎಜಿಎಂ ಬಿ.ವಿ. ವಿಶ್ವಾಸ್, ಕಾಲೇಜಿನ ಪ್ರಾಂಶುಪಾಲ ಡಾ.ರೇಷ್ಮಾ ವಾಣಿಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ವಿ.ಗಂಗಾಧರ ಸ್ವಾಮಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭಾರತೀ ಟೀಚರ್(ಕ) + ಮಾಯಾಬಿಂಬುಮ್(ತ)	1+3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರಕ್ತಸಹುರಿದೋಲ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮರ್ದಾನಿ-3 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ವಿತ್ ಲವ್ (ತ)	4 ಪ್ರದರ್ಶನಗಳು
ಸಂಗಂ	
ಕರಿಕಾಡ (ಕ) + ಜೆ.ಸಿ.(ಕ)	2+2 ಪ್ರದರ್ಶನಗಳು
ಲಿಡೋ	
ಕರಗ (ಕ) + ಶಿವಲೀಲಾ (ಕ)	3+1 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾವುತ (ಕ)	4 ಪ್ರದರ್ಶನಗಳು

ಶ್ರೀವಿದ್ಯಾನಂದ ಸ್ವಾಮಿಗಳು ಎಂಬ ನಾಮ ಅನುಗ್ರಹಿಸಿದ ದಿನದ ಅಂಗವಾಗಿ

ವಿವಿಧ ಸಾಮಾಜಿಕ ಸೇವಾ ಕಾರ್ಯಕ್ರಮ



ಶ್ರೀ ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಅವರಿಂದ ಶ್ರೀ ಬಾಲ ಮಂಜುನಾಥಸ್ವಾಮಿಗಳಿಗೆ ಶ್ರೀ ವಿದ್ಯಾನಂದ ಸ್ವಾಮಿಗಳು ಎಂಬ ನಾಮವನ್ನು ಅನುಗ್ರಹಿಸಿದ ಸ್ಮರಣಾರ್ಥ ವಿವಿಧ ಸಾಮಾಜಿಕ ಸೇವಾ ಕಾರ್ಯ ಕಾರ್ಯಕ್ರಮ ನಡೆಸಲಾಯಿತು.

ಮೈಸೂರು,ಫೆ.6(ಜಿಎ)–ಶ್ರೀ ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಅವರಿಂದ ಶ್ರೀ ಬಾಲ ಮಂಜುನಾಥಸ್ವಾಮಿಗಳಿಗೆ ಶ್ರೀ ವಿದ್ಯಾನಂದ ಸ್ವಾಮಿಗಳು ಎಂಬ ನಾಮವನ್ನು ಅನುಗ್ರಹಿಸಿದ ಪುಣ್ಯ ಕಾರ್ಯಕ್ರಮದ ಸ್ಮರಣಾರ್ಥ ವಿವಿಧ ಸಾಮಾಜಿಕ ಸೇವಾ ಕಾರ್ಯಗಳ ಮೂಲಕ ಕನ್ನಡಾಂಬೆ ರಕ್ಷಣಾ ವೇದಿಕೆಯಿಂದ ಕಾರ್ಯಕ್ರಮ ನಡೆಸಲಾಯಿತು.

ಮೈಸೂರಿನ ಹೂಟಗಳ್ಳಿಯಲ್ಲಿರುವ ಕನ್ನಡಾಂಬೆ ರಕ್ಷಣಾ ವೇದಿಕೆ ಕಚೇರಿ ಎದುರು ನಡೆದ ಕಾರ್ಯಕ್ರಮದಲ್ಲಿ ವಿವಿಧ ಸರ್ಕಾರಿ ಶಾಲೆಗಳ 500ಕ್ಕೂ ಹೆಚ್ಚು ಮಕ್ಕಳಿಗೆ ನೋಟ್ ಬುಕ್ ವಿತರಣೆ, ಎರಡು ವೃದ್ಧಾಶ್ರಮಗಳಿಗೆ ಆಹಾರ, ದಿನಸಿ ಕಿಟ್‌ಗಳ ವಿತರಣೆ, ಉಚಿತ ಆರೋಗ್ಯ ಮತ್ತು ಕಣ್ಣು ತಪಾಸಣಾ ಶಿಬಿರಗಳು ಮತ್ತು ಅನ್ನಸಂತರ್ಪಣೆ ಕಾರ್ಯಕ್ರಮವೂ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಸಾಹಿತಿ ಜಯಪ್ಪ ಹೊನ್ನಾಳಿ ಮಾತನಾಡಿ, ಅಭಿದಾನ ಪ್ರಧಾನ ಪಡೆದ ಸುಂದರ ಸ್ಮೃತಿ ಮಧುರ ಕ್ಷಣದ ದ್ಯೋತಕವಾಗಿ ಇದು ಅರ್ಥಪೂರ್ಣ ಕಾರ್ಯಕ್ರಮ, ಸಮಾಜಕ್ಕೆ ಉಪಕಾರಿಯಾಗುವ ಮಾದರಿ ಕಾರ್ಯಕ್ರಮ. ಸಮಾಜಕ್ಕೆ ಉತ್ತಮ ಸಂದೇಶ ನೀಡಿದೆ. ಪ್ರಜ್ಞೆಯೆ ಪರಮಾತ್ಮ ಎನ್ನುವ ಕಾಲದಲ್ಲಿ ನಾವಿದ್ದೇವೆ. ಸಂತರು ಎಂದರೆ ಇಡೀ ಸಮಾಜವೇ ತನ್ನದೆಂದು ಕೊಂಡವರು, ಲೋಕ ಸಂಸಾರಿ, ಕತ್ತಲೆಯಿಂದ ಬೆಳಕಿನೆಡೆಗೆ ಕರೆದುಕೊಂಡು ಹೋಗುವವರು, ಶೃಂಗೇರಿ ಶಾರದಾ ಪೀಠವು 1200 ವರ್ಷಗಳ ಹಳೆಯ ಪ್ರಾಚೀನ ಮಠವಾಗಿದ್ದು, ಆದಿ ಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಪೀಠಗಳಲ್ಲಿ ದಕ್ಷಿಣ ದಿಕ್ಕಿನದು ಇದಾಗಿದೆ. ಆದಿ ಶಂಕರಾಚಾರ್ಯರು ಇಲ್ಲಿಯೇ 12 ವರ್ಷಗಳ ಕಾಲ ವಾಸಿಸಿ, ಅದ್ವೈತ ವೇದಾಂತವನ್ನು ಪ್ರಚಾರ ಮಾಡಿದರು. ಇಂತಹ ಪ್ರಾಚೀನ ಇತಿಹಾಸವುಳ್ಳ ಮಠದ ಗುರುಗಳಾದ ಶ್ರೀ ವಿಧುಶೇಖರ ಭಾರತೀ ಅವರು ಶ್ರೀ ವಿದ್ಯಾಚೌಡೇಶ್ವರಿ ಅಮ್ಮನವರ ದೇವಾಲಯದ ಶ್ರೀಗಳಾದ ಶ್ರೀ ಬಾಲಮಂಜುನಾಥ ಸ್ವಾಮಿಗಳಿಗೆ ಶ್ರೀ ವಿದ್ಯಾನಂದ ಸ್ವಾಮಿಗಳು ಎಂಬ ನಾಮಕರಣ ಮಾಡಿದ ಹಿನ್ನಲೆಯಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆ ಇಂತಹ ಸಮಾಜಮುಖಿ ಕಾರ್ಯಕ್ರಮ ನಡೆಸಿರುವುದು ಸ್ವಾಗತಾರ್ಹ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ರಘುರಾಮ್ ವಾಜಪೇಯಿ, ವೇದಿಕೆ ಅಧ್ಯಕ್ಷ ಬಿ.ಬಿ.ರಾಜಶೇಖರ್, ಪೊಲೀಸ್ ಸೊಸೈಟಿ ಅಧ್ಯಕ್ಷ ಎಸ್.ರವಿ, ಹೂಟಗಳ್ಳಿ ಚಿಕ್ಕಣ್ಣ, ಲಲಿತಾ ನಾಗೇಶ್, ರವಿಗೌಡ, ಹರೀಶ್ ಯಾದವ್, ಕರೀಗೌಡ, ಮಹಿಳಾ ಘಟಕದ ಅಧ್ಯಕ್ಷರಾದ ತಾರ, ಸಿಂಧುವಳ್ಳಿ ಶಿವಕುಮಾರ್, ಕಿಕ್ಕೇರಿ ಕಿರಣ, ಮಂಜು ತೇಜೂರ್, ಹುಣಸೂರು ಪರಮೇಶ್, ಲೂಯೀಸ್, ಹೊನ್ನೇಗೌಡ, ರಶ್ಮೀಸಿಂಗ್, ಸೌಭಾಗ್ಯ, ವಿಷ್ಣು, ಶಿವಲಿಂಗಯ್ಯ, ಪುಟ್ಟಸ್ವಾಮಿ, ಜಯಲಕ್ಷ್ಮಿ, ಹರೀಶ್, ವತ್ಸಲ, ಮುಖ್ಯ ಶಿಕ್ಷಕರಾದ ಶಿವಪ್ಪ, ಸತೀಶ್, ಮಧು ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ಮಹಾತ್ಮ ಗಾಂಧಿ ಸಿದ್ಧಾಂತ, ಆದರ್ಶಗಳ ಹತ್ಯೆಗೆ ಮುಂದಾಗಿದೆ



ಮೈಸೂರು, ಫೆ.6(ಎಂಕೆ)– ಬಿಜೆಪಿಯಿಂದ ಮಹಾತ್ಮ ಗಾಂಧೀಜಿಯವರ ಸಿದ್ಧಾಂತ ಮತ್ತು ಆದರ್ಶಗಳ ಹತ್ಯೆ ಮಾಡಲಾಗುತ್ತಿದೆ ಎಂದು ಕರ್ನಾಟಕ ಪ್ರದೇಶ ಕುರುಬ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಕಿಡಿ ಕಾರಿದ್ದಾರೆ.

ಮಹಾತ್ಮರನ್ನೇ ಬಂಡವಾಳ ಮಾಡಿಕೊಂಡ ನುಂಗಪ್ಪಗಳು ಎಂಬ ಜಾಹಿರಾತು ಪ್ರಕಟಿಸಿರುವ ಬಿಜೆಪಿ, ಮಹಾತ್ಮರಿಗೆ ಮತ್ತೊಮ್ಮೆ ಅಪಮಾನ ಮಾಡಿದೆ. ಅಂದು ಗೋಡ್ಸೆ ಮೂಲಕ ಗಾಂಧಿ ಹತ್ಯೆ ನಡೆಯಿತು. ಇಂದು ಬಿಜೆಪಿಯಿಂದ ಗಾಂಧಿ ಸಿದ್ಧಾಂತ ಮತ್ತು ಆದರ್ಶಗಳ ಹತ್ಯೆ ನಡೆಯುತ್ತಿದೆ ಎಂದು ದೂರಿದ್ದಾರೆ. ವಿಶ್ವಕ್ಕೆ ಅಹಿಂಸೆ ಸಂದೇಶ ಸಾರಿದ ಮಹಾತ್ಮಗಾಂಧಿ ಅವರು, ಎಂದಿಗೂ ಸುಳ್ಳಿನ ಮಾರ್ಗ ಅನುಸರಿಸಲಿಲ್ಲ. ಮಹಾತ್ಮ ಗಾಂಧಿಯವರ ಬಗ್ಗೆ ಅರಿವಿಲ್ಲದ ಬಿಜೆಪಿ, ಅವರನ್ನು ಹಿಂಸೆಯ ಪ್ರತಿಪಾದಕರನ್ನಾಗಿ ತೋರಿಸಿ ಜಾಹೀರಾತು ನೀಡಿದೆ. ದೇಶಭಕ್ತರು ಇದರ ವಿರುದ್ಧ ಎಚ್ಚೆತ್ತು, ಗಾಂಧಿ ತತ್ವ ಆದರ್ಶಗಳನ್ನು ರಕ್ಷಣೆ ಮಾಡಬೇಕಿದೆ ಎಂದು ಪತ್ರಿಕಾ ಪ್ರಕಟಣೆ ಮೂಲಕ ಕರೆ ನೀಡಿದ್ದಾರೆ.

ಆನ್‌ಲೈನ್ ತರಗತಿ, ಎಐ ತಂತ್ರಜ್ಞಾನ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತರುತ್ತಿದೆ



ಮೈಸೂರಿನ ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಓಂಕಾರಮಲ್ ಸೋಮಾನಿ ಶಿಕ್ಷಣ ಮಹಾವಿದ್ಯಾಲಯದ 2023–25ನೇ ಸಾಲಿನ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭ ನಡೆಯಿತು.

ಮೈಸೂರು, ಫೆ.6(ಎಂಟಿವೈ)– ಪ್ರಸ್ತುತ ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿದ್ದು, ಡಿಜಿಟಲ್ ಶಿಕ್ಷಣ, ಆನ್‌ಲೈನ್ ತರಗತಿ, ಕೃತಕ ಬುದ್ಧಿಮತ್ತೆಯು (ಎಐ) ಶಿಕ್ಷಣ ಕ್ಷೇತ್ರವನ್ನು ಬದಲಾಯಿಸುತ್ತಿವೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅಭಿಪ್ರಾಯಪಟ್ಟಿದ್ದಾರೆ..

ಮೈಸೂರಿನ ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಓಂಕಾರಮಲ್ ಸೋಮಾನಿ ಶಿಕ್ಷಣ ಮಹಾವಿದ್ಯಾಲಯದ 2023–25ನೇ ಸಾಲಿನ ವಿದ್ಯಾರ್ಥಿಗಳ ಪದವಿ ಪ್ರದಾನ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದ ಅವರು, ಯಾವುದೇ ತಂತ್ರಜ್ಞಾನವೂ ಒಬ್ಬ ಸಂವೇದನಾಶೀಲ ಶಿಕ್ಷಕನ ಸ್ಥಾನ ತುಂಬಲು ಸಾಧ್ಯವಿಲ್ಲ. ಯಂತ್ರಗಳು ಮಾಹಿತಿ ನೀಡಬಹುದು. ಆದರೆ ಮೌಲ್ಯಗಳನ್ನು ಕಲಿಸುವ ಶಕ್ತಿ ಶಿಕ್ಷಕರಿಗೆ ಮಾತ್ರ ಇರುತ್ತದೆ. ಬಿ.ಇಡಿ ಕೇವಲ ಪದವಿ ಅಲ್ಲ. ಪರಿವರ್ತನೆಯ ಪ್ರಕ್ರಿಯೆ. ಒಬ್ಬ ಶಿಕ್ಷಕ ಸಮಾಜದ ದಿಕ್ಕನ್ನೇ ಬದಲಾಯಿಸುವ ಶಕ್ತಿ ಹೊಂದಿರುತ್ತಾನೆ. ಶಿಕ್ಷಕ ಒಂದು ಜೀವಂತ ಮಾದರಿ. ವಿದ್ಯಾರ್ಥಿಗಳು ಪುಸ್ತಕಕ್ಕಿಂತ ಹೆಚ್ಚು ಶಿಕ್ಷಕರ ಜೀವನದಿಂದ ಕಲಿಯುತ್ತಾರೆ. ನಿಮ್ಮ ಮಾತು, ನಡವಳಿಕೆ, ನಿಮ್ಮ ಮೌಲ್ಯಗಳು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅಚ್ಚಳಿಯದ ಗುರುತು ಬಿಡುತ್ತವೆ. ಪದವಿ ಪಡೆದ ವಿದ್ಯಾರ್ಥಿಗಳ ಜವಾಬ್ದಾರಿ ಇಲ್ಲಿಂದ ಆರಂಭವಾಗುತ್ತದೆ. ಸಮಾಜದಲ್ಲಿ ಶಿಕ್ಷಕರಿಗೆ ಅನೇಕ ಸವಾಲುಗಳಿರುತ್ತವೆ. ವಿಭಿನ್ನ ಹಿನ್ನೆಲೆಯ ವಿದ್ಯಾರ್ಥಿಗಳು, ವಿಭಿನ್ನ ಕಲಿಕಾ ಸಾಮರ್ಥ್ಯಗಳು, ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳು ಇವೆಲ್ಲದರ ಮಧ್ಯೆ ನೀವೊಂದು ಬೆಳಕಿನ ದೀಪವಾಗಬೇಕು ಎಂದು ಶುಭ ಕೋರಿದರು.

ಸಂಸ್ಥೆಯ ಅಧ್ಯಕ್ಷ ಡಾ.ಎಂ.ಪುಟ್ಟ ಸ್ವಾಮಿ, ಮುಖ್ಯ ಆಡಳಿತಾಧಿಕಾರಿ ಪಿ.ಗೀತಾಂಜಲಿ, ಪ್ರಾಂಶುಪಾಲರಾದ ಡಾ.ಉಷಾ ಆರ್.ಜಿ ಮಾತನಾಡಿದರು. ಕಾರ್ಯಕ್ರಮ ಸಂಯೋಜಕ ರಾಜೀವ್ ಶರ್ಮ, ಸಹ ಪ್ರಾಧ್ಯಾಪಕ ಸಂಜಯ್ ಬಗಡೇಕರ್, ಕೆ.ಆರ್.ಪವಿತ್ರ ಹಾಜರಿದ್ದರು. ಸಹ ಪ್ರಾಧ್ಯಾಪಕಿ ಡಾ. ವಿನುತಾ ಎಂ ಸ್ವಾಗತಿಸಿದರು. ರಾಘವಿ ಹೆಚ್.ವಿ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ಸಂಗೀತ ಪಿ ನಿರೂಪಿಸಿದರು. ಧನಲಕ್ಷ್ಮಿ ಎಂ.ಕೆ. ವಂದಿಸಿದರು.

ಫೆ.13ಕ್ಕೆ 'ಮಗ್ಗಿಪುಸ್ತಕ' ಚಿತ್ರ ಬಿಡುಗಡೆ

ಮೈಸೂರು, ಫೆ.6(ಎಂಟಿವೈ)–ಮೊಬೈಲ್ ಬಳಕೆಯಿಂದಾಗುವ ದುಷ್ಪರಿಣಾಮ, ಅದರ ಸದ್ಬಳಕೆ ಕುರಿತಂತೆ ಸಂದೇಶ ಸಾರುವ, ಜೊತೆಗೆ ಕುಟುಂಬ ಸಮೇತ ನೋಡಬಹುದಾದ ಸದಭಿರುಚಿಯ 'ಮಗ್ಗಿ ಪುಸ್ತಕ' ಕನ್ನಡ ಚಲನಚಿತ್ರ ಫೆ.13ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ ಎಂದು ನಿರ್ದೇಶಕ ಹರಿಹರಾಸನಂ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಂಜನ್ ಕಾಸರಗೋಡು, ರಾನ್ವಿ ಶೇಖರ್, ಮೈಸೂರು ಆನಂದ್, ಯತಿರಾಜ್, ಕೃಷ್ಣ ಮಹೇಶ್, ಇನ್ನಿತರರು ತಾರಾಗಣದಲ್ಲಿದ್ದಾರೆ. ಒಟ್ಟು 7 ಹಾಡುಗಳಿವೆ. ತಾವೇ ರಚಿಸಿದ್ದ ಕಾದಂಬರಿ ಆಧಾರಿತ ಚಿತ್ರವಾಗಿದೆ. ಕನ್ನಡ ಸಿನಿಪ್ರಿಯರಿಗೆ ಉತ್ತಮ ಮನರಂಜನೆ ನೀಡಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ರಂಜನ್ ಕಾಸರಗೋಡು, ರಾನ್ವಿ ಶೇಖರ್, ಮೈಸೂರು ಆನಂದ್, ಚಿನ್ನಸ್ವಾಮಿ, ಈಶ್ವರಿ ಮಂಜು, ಯತಿರಾಜ್, ಕೃಷ್ಣ ಮಹೇಶ್ ಇದ್ದರು.

ಆರ್ಟ್ ಆಫ್ ಲಿವಿಂಗ್‌ನಲ್ಲಿ ಸುದರ್ಶನ ಕ್ರಿಯೆ ಶಿಬಿರ

ಮೈಸೂರು, ಫೆ.6–ರವಿಶಂಕರ್ ಗುರೂಜಿ ಅವರ ಆರ್ಟ್ ಆಫ್ ಲಿವಿಂಗ್ ಸಂಸ್ಥೆ ವತಿಯಿಂದ ಫೆ.11ರಿಂದ 14ರವರೆಗೆ ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಫೌಂಡೇಷನ್‌ನ ಆಶ್ರಮದಲ್ಲಿ ಸುದರ್ಶನ ಕ್ರಿಯೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ ಹಾಗೂ ಸುದರ್ಶನ ಕ್ರಿಯೆ ಕಲಿಸಲಾಗುತ್ತದೆ. ಶಿಬಿರವು ಬೆಳಗ್ಗೆ 6ರಿಂದ 8.30ರವರೆಗೆ ಹಾಗೂ ಸಂಜೆ 6ರಿಂದ 8.30ರವರೆಗೆ ನಡೆಯಲಿದೆ. ಮಾಹಿತಿಗೆ ಮೊ. ಸಂಖ್ಯೆ 9945161303, 9620947215 ಮೂಲಕ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ತಮಿಳುನಾಡಿನಲ್ಲಿ ಅಪಾರ ಸಂಖ್ಯೆಯ ಕಾಗೆ ಸಾವು; ಹಕ್ಕಿ ಜ್ವರದ ಆತಂಕ

ತಮಿಳುನಾಡು: ರಾಜ್ಯದ ವಿವಿಧ ಭಾಗಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಕಾಗೆಗಳು ಸಾವನ್ನಪ್ಪಿದ್ದು, ಹಕ್ಕಿಜ್ವರ ಹರಡುವ ಆತಂಕ ಸೃಷ್ಟಿಯಾಗಿದೆ. ಈ ಹಿನ್ನೆಲೆಯಲ್ಲಿ ತಮಿಳುನಾಡು ಸರ್ಕಾರವು ಶುಕ್ರವಾರ ಹೈ ಅಲರ್ಟ್ ಘೋಷಿಸಿದೆ. ಜೈವಿಕ ಭದ್ರತಾ ಆತಂಕ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪಶುಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಇಲಾಖೆ ರಾಜ್ಯಾದ್ಯಂತ ಕೋಳಿ ಸಾಕಣೆದಾರರು ಮತ್ತು ಕಾಡು ಪಕ್ಷಿಗಳ ನಿರ್ವಾಹಕರಿಗೆ ಕಠಿಣ ಮುನ್ನೆಚ್ಚರಿಕೆ ಕ್ರಮಗಳನ್ನು ಕಡ್ಡಾಯಗೊಳಿಸುವಂತೆ ಸೂಚನೆ ನೀಡಿದೆ.

ಸಾರ್ವಜನಿಕ ಆರೋಗ್ಯ ಮತ್ತು ತಡೆಗಟ್ಟುವ ಔಷಧ ನಿರ್ದೇಶನಾಲಯವು(ಡಿಪಿಎಚ್) ಪ್ರತ್ಯೇಕ ಸಂವಹನವನ್ನು ಬಿಡುಗಡೆ ಮಾಡಿ, ಕಟ್ಟುನಿಟ್ಟಾದ ಸುರಕ್ಷತಾ ಪ್ರೋಟೋಕಾಲ್‌ಗಳನ್ನು ಅನುಸರಿಸಲು ಸಾರ್ವಜನಿಕರಿಗೆ ಮನವಿ ಮಾಡಿದೆ. ತಮಿಳುನಾಡಿನಲ್ಲಿ ಹಕ್ಕಿ ಜ್ವರ ಹರಡುವಿಕೆಯ ಕುರಿತು ಕೇಂದ್ರ ಸರ್ಕಾರದ ಸುತ್ತೋಲೆಯ ಆಧಾರದ ಮೇಲೆ ನಾವು ಸಲಹೆ ನೀಡಿದ್ದೇವೆ. ಕೆಮ್ಮು, ಶೀತ, ಜ್ವರ ಅಥವಾ ಉಸಿರಾಟದ ತೊಂದರೆಗಳು ಸೇರಿದಂತೆ ಜ್ವರದ ಲಕ್ಷಣಗಳು ಕಂಡುಬಂದರೆ ತಕ್ಷಣ ವೈದ್ಯಕೀಯ ಸಹಾಯ ಪಡೆಯುವಂತೆ ಸೂಚಿಸಲಾಗಿದೆ ಎಂದು ಡಾ.ಎ.ಸೋಮಸುಂದರಂ ಪಿಟಿಐಗೆ ತಿಳಿಸಿದ್ದಾರೆ.

ಫೆ.14 ಶ್ರೀ ಹನುಮಾನ್ ಚಾಲೀಸ್ ಪಾರಾಯಣ ಮಹಾಯಜ್ಞ

ಶ್ರೀಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಮಹಾಯಜ್ಞದ ಭಿತ್ತಿಪತ್ರ ಬಿಡುಗಡೆ



ಮೈಸೂರಿನ ಅವಧೂತ ದತ್ತಪೀಠದ ವತಿಯಿಂದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ನೇತೃತ್ವದಲ್ಲಿ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯಲಿರುವ ಶ್ರೀ ಹನುಮಾನ್ ಚಾಲೀಸ್ ಪಾರಾಯಣ ಮಹಾಯಜ್ಞದ ಭಿತ್ತಿಪತ್ರವನ್ನು ಶ್ರೀ ಗಣಪತಿ ಸಚ್ಚಿದಾನಂದ ಆಶ್ರದ ಕಿರಿಯ ಶ್ರೀಗಳಾದ ಶ್ರೀದತ್ತವಿಜಯಾನಂದ ಸ್ವಾಮೀಜಿ ಮತ್ತು ಶಾಸಕ ಟಿ.ಎಸ್.ಶ್ರೀವತ್ಸ ಊಟಿ ರಸ್ತೆಯಲ್ಲಿರುವ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ ಆವರಣದಲ್ಲಿ ಬಿಡುಗಡೆ ಮಾಡಿದರು.

ಮೈಸೂರು,ಫೆ.6(ಜಿಎ)–ಮೈಸೂರಿನ ಅವಧೂತ ದತ್ತಪೀಠದ ವತಿಯಿಂದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ನೇತೃತ್ವದಲ್ಲಿ ಫೆ.14ರಂದು ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯಲಿರುವ ಶ್ರೀ ಹನುಮಾನ್ ಚಾಲೀಸ್ ಪಾರಾಯಣ ಮಹಾಯಜ್ಞದ ಭಿತ್ತಿಪತ್ರವನ್ನು ಶ್ರೀ ಗಣಪತಿ ಸಚ್ಚಿದಾನಂದ ಆಶ್ರದ ಕಿರಿಯ ಶ್ರೀಗಳಾದ ಶ್ರೀದತ್ತವಿಜಯಾನಂದ ಸ್ವಾಮೀಜಿ ಮತ್ತು ಶಾಸಕ ಟಿ.ಎಸ್.ಶ್ರೀವತ್ಸ ಊಟಿ ರಸ್ತೆಯಲ್ಲಿರುವ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ ಆವರಣದಲ್ಲಿ ಬಿಡುಗಡೆ ಮಾಡಿದರು,

ಈ ವೇಳೆ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮಾತನಾಡಿ, ಹನುಮಾನ್ ಚಾಲೀಸ್ ಪಠಣದಿಂದ ಮನುಷ್ಯನ ಆಯಸ್ಸು, ಆರೋಗ್ಯ ವೃದ್ಧಿಸುವುದರೊಂದಿಗೆ ಆಂಜನೇಯನ ಶಕ್ತಿಯಿಂದ ಇಡೀ ಭೂಮಂಡಲವೇ ರಕ್ಷಣೆಯಾಗುತ್ತದೆ. ರಾಮ ಸೀತೆಯನ್ನು ಒಂದು ಮಾಡಿದ ಹನುಮ ಶಕ್ತಿ ಅಪಾರವಾದುದು ಎಂದರು.

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಫೆ.14ರಂದು ಲಕ್ಷಾಂತರ ಮಂದಿಯಿಂದ ಶ್ರೀ ಹನುಮಾನ್ ಚಾಲೀಸ ಪಾರಾಯಣ ಮಹಾಯಜ್ಞ ನಡೆಯಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸದ್ಭಕ್ತರು ಪಾಲ್ಗೊಳ್ಳಿ ಎಂದು ಕರೆ ನೀಡಿ, ಅಂದು ಪ್ರತಿಯೊಬ್ಬರಿಗೂ ಅನ್ನಪ್ರಸಾದ ಹನುಮ ರಕ್ಷೆಯನ್ನು ನೀಡಲಾಗುವುದು ಮೈಸೂರಿನ ಆಸ್ತಿಕ ಬಂಧುಗಳು ಭಾಗವಹಿಸಿ ಯಶಸ್ವಿಗೊಳಿಸಿ ಎಂದರು,

ನಂತರ ಕಿರಿಯ ಶ್ರೀಗಳಾದ ಶ್ರೀದತ್ತವಿಜಯಾನಂದ ಸ್ವಾಮೀಜಿ ಮಾತನಾಡಿ, ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ವಿಶ್ವದೆಲ್ಲಡೆ ಆಂಜನೇಯನ ಮೂರ್ತಿ, ಆಶ್ರಮಗಳು, ಭಕ್ತವೃಂದ ಸ್ಥಾಪಿಸಿದ್ದಾರೆ. ಆದರೂ ಅವರಿಗೆ ಮೈಸೂರಿನ ಬಗ್ಗೆ ಅಪಾರವಾದ ಭಕ್ತಿ ಅಭಿಮಾನವಿದೆ ಎಂದರೆ ಗುರುಗಳ ತಾಯಿಯವರು ಆಸೆಯಂತೆ ಮೈಸೂರಿನಲ್ಲಿಯೇ ಕಾರ್ಯಸಿದ್ಧಿ ಆಂಜನೇಯನ ಶಕ್ತಿ ಕೇಂದ್ರ ಸ್ಥಾಪಿಸಿ ಮತ್ತು ಮೈಸೂರಿನ ಆಸ್ತಿಕ ಬಂಧುಗಳೊಂದಿಗೆ ಜಾತಿಭೇದವಿಲ್ಲದೆ ಧಾರ್ಮಿಕ ಚಟುವಟಿಕೆಗಳನ್ನು ನಿರಂತರವಾಗಿ ಆಯೋಜಿಸಬೇಕು ಎನ್ನುವುದು. ಹನುಮಾನ್ ಚಾಲೀಸ್ ಪಾರಾಯಣದಲ್ಲಿ ಗಿನ್ನೀಸ್ ದಾಖಲೆಯೂ ಆಗಿದೆ. ಪ್ರತಿಯೊಬ್ಬರು ಮನೆ ಮನೆಯಲ್ಲಿ ಹನುಮಾನ್ ಚಾಲೀಸ್ ಪಾರಾಯಣ ಮಾಡಿ. ಸಾಮೂಹಿಕವಾಗಿ ಪಠಿಸಿ ಭಗವಂತ ಕೃಪೆಗೆ ಪಾತ್ರರಾಗಬಹುದು ಎಂದರು

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಅಂತರಾಷ್ಟ್ರೀಯ ಮಟ್ಟದಲ್ಲಿ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಹನುಮಾನ್ ಚಾಲೀಸ್ ಪಾರಾಯಣ ಮತ್ತು ವಿದೇಶದಲ್ಲೂ ಕಾರ್ಯಸಿದ್ಧಿ ಆಂಜನೇಯ ಭವ್ಯ ಮೂರ್ತಿಯನ್ನು ಸ್ಥಾಪಿಸುವ ಮೂಲಕ ಹಿಂದೂ ಧರ್ಮದ ಶಕ್ತಿಯನ್ನು ವ್ಯಾಪಕವಾಗಿ ಪ್ರಚುರಪಡಿಸಿದ್ದಾರೆ, ಮೈಸೂರಿನ ನಾಗರೀಕರಿಗೆ ಕೋವಿಡ್ ಸಂಕಷ್ಟ ಕಾಲದಲ್ಲೂ ಸಹ ಪ್ರತಿದಿನ 10ಸಾವಿರ ಆಹಾರ ಪೊಟ್ಟಣಗಳು ಮತ್ತು ಆರೋಗ್ಯ ರಕ್ಷಾ ಸಾಮಗ್ರಿಗಳನ್ನ ವಿತರಿಸಿ ನೆರವಾಗಿದ್ದಾರೆ, ಮೈಸೂರಿನ ಪೌರಕಾರ್ಮಿಕ ಕಾಲೋನಿಯಲ್ಲಿ 16 ದೇವಸ್ಥಾನಗಳ ಜೀರ್ಣೋದ್ಧಾರ ಮಾಡಿ ಪೌರಕಾರ್ಮಿಕರಿಗೂ ಧಾರ್ಮಿಕ ಚಟುವಟಿಕೆ ಪೂಜಾ ಕ್ರಮಗಳನ್ನ ತಿಳಿಸಿಕೊಟ್ಟು ಸಾಮಾಜಿಕ ಸಮಾನತೆಯ ಸಂದೇಶ ಸಾರಿದ್ದಾರೆ. ಮೈಸೂರಿನ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಹನುಮಾನ್ ಚಾಲೀಸ್ ಪಾರಾಯಣ ಮಹಾಯಜ್ಞದಲ್ಲಿ ಭಾಗವಹಿಸಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್ ಕುಮಾರ್, ಕೆ.ಆರ್.ಸತ್ಯನಾರಾಯಣ, ನಜರ್ ಬಾದ್ ನಟರಾಜ್, ಜೀವದಾರ ಗಿರೀಶ್, ವಿಕಾಸ್ ಶಾಸ್ತ್ರಿ, ಅಜಯ್ ಶಾಸ್ತ್ರಿ, ವಿಕ್ರಂ ಅಯ್ಯಂಗಾರ್, ರಾಕೇಶ್ ಭಟ್, ಡಾ.ಲಕ್ಷ್ಮಿ, ಜಗದೀಶ್, ಪ್ರಕಾಶ್ ಪ್ರಿಯದರ್ಶಿ, ರಂಗನಾಥ್, ಜಯಸಿಂಹ, ಜತ್ತಿ ಪ್ರಸಾದ್, ಎಸ್.ಎನ್. ರಾಜೇಶ್, ಮಹೇಶ್ ಕಾಮತ್ ಮತ್ತಿತರು ಉಪಸ್ಥಿತರಿದ್ದರು.

ತೆರಿಗೆ ಇಲಾಖೆ ನೀಡುವ ಶೋಕಾಸ್ ನೋಟಿಸ್ ಬಗ್ಗೆ ನಿರ್ಲಕ್ಷ್ಯ ಸಲ್ಲದು

ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ಆಯುಕ್ತ ಬಾಲಸುಬ್ರಹ್ಮಣ್ಯ ಸಲಹೆ

- ನಿಗದಿತ ಸಮಯದಲ್ಲಿ ಸ್ಪಷ್ಟನೆ ನೀಡಿ
- ಸೂಕ್ತ ದಾಖಲಾತಿಯೊಂದಿಗೆ ಮೇಲ್ಮನವಿ ಸಲ್ಲಿಸಿ
- ನಿಮ್ಮ ಹಕ್ಕನ್ನು ನೀವೇ ರಕ್ಷಿಸಿಕೊಳ್ಳಿ
- ತೆರಿಗೆ ವ್ಯವಸ್ಥೆ ಬಲಪಡಿಸಬೇಕು



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ಭಾರತೀಯ ತೆರಿಗೆ ಸಲಹೆಗಾರರ ಸಂಘ ಆಯೋಜಿಸಿದ್ದ ಮೈಸೂರು ವಲಯದ ಮೊದಲ ತೆರಿಗೆದಾರರ ಸಮ್ಮೇಳನವನ್ನು ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ಆಯುಕ್ತ ಬಾಲಸುಬ್ರಹ್ಮಣ್ಯ ಉದ್ಘಾಟಿಸಿದರು.

ಮೈಸೂರು, ಫೆ.6(ಬಿಎಲ್ ಯು)– ತೆರಿಗೆ ಪಾವತಿ ಸಂಬಂಧ ಜಿಎಸ್ ಟಿ ಹಾಗೂ ಆದಾಯ ತೆರಿಗೆ ಇಲಾಖೆ ನೀಡುವ ಶೋಕಾಸ್ ನೋಟಿಸ್ ಅನ್ನು ಗಂಭೀರವಾಗಿ ಪರಿಗಣಿಸಬೇಕೇ ಹೊರತು, ನಿರ್ಲಕ್ಷ್ಯ ತೋರಬಾರದು ಎಂದು ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ಆಯುಕ್ತ ಬಾಲಸುಬ್ರಹ್ಮಣ್ಯ ಸಲಹೆ ನೀಡಿದ್ದಾರೆ.

ಮೈಸೂರಿನ ವಿಜಯನಗರದ ಖಾಸಗಿ ಹೋಟೆಲ್ ನಲ್ಲಿ ಇಂದು ಭಾರತೀಯ ತೆರಿಗೆ ಸಲಹೆಗಾರರ ಸಂಘ ಆಯೋಜಿಸಿದ್ದ ಮೈಸೂರು ವಲಯದ ಮೊದಲ ತೆರಿಗೆದಾರರ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಶೋಕಾಸ್ ನೋಟಿಸ್‌ಗಳಿಗೆ ಪ್ರತಿಕ್ರಿಯಿಸುವಾಗ ಮತ್ತು ಜಿಎಸ್‌ಟಿ ಮೇಲ್ಮನವಿ ವಿಚಾರಣೆ ವೇಳೆ ತೆರಿಗೆದಾರರು ತಮ್ಮ ಜವಾಬ್ದಾರಿ ಅರಿಯಬೇಕು ಎಂದು ಕಿವಿಮಾತು ಹೇಳಿದರು.

ಕೆಲವು ಸ್ಪಷ್ಟೀಕರಣ ಕೋರಿ ತೆರಿಗೆ ಇಲಾಖೆ ಶೋಕಾಸ್ ನೋಟಿಸ್ ಜಾರಿ ಮಾಡುತ್ತದೆ. ಇದನ್ನು ತೆರಿಗೆದಾರರು ಗಂಭೀರವಾಗಿ ಪರಿಗಣಿಸಬೇಕು. ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ತೋರಬಾರದು. ನಿಗದಿತ ದಿನಾಂಕದೊಳಗೆ ಸ್ಪಷ್ಟೀಕರಣ ನೀಡಬೇಕು.

ಶೋಕಾಸ್ ನೋಟಿಸ್‌ಗೆ ಉತ್ತರ ನೀಡುವ ಸಂದರ್ಭದಲ್ಲಿ ಕಾನೂನು ಸಮರ್ಥನೆ ಹಾಗೂ ಸೂಕ್ತ ದಾಖಲಾತಿಗಳೊಂದಿಗೆ ಪ್ರತಿಕ್ರಿಯೆ ನೀಡಬೇಕು. ನೀವು ನೀಡುವ ತಾರ್ಕಿಕ ಉತ್ತರ ನಿಮ್ಮ ಹಕ್ಕುಗಳನ್ನು ರಕ್ಷಿಸುತ್ತದೆ. ಇದರಿಂದ ತೆರಿಗೆ ಇಲಾಖೆಯ ಅಧಿಕಾರಿಗಳು ನ್ಯಾಯಯುತ ತೀರ್ಮಾನ ಕೈಗೊಳ್ಳಲು ಸಹಕಾರಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಪಾರದರ್ಶಕತೆ ಹಾಗೂ ಪ್ರಾಮಾಣಿಕತೆ ಅತ್ಯವಶ್ಯವಾಗಿದ್ದು, ಯಾವುದೇ ಕಾರಣಕ್ಕೂ ಅಪೂರ್ಣವಾದ ಮಾಹಿತಿಯನ್ನು ನೀಡಬಾರದು. ಈ ಬಗ್ಗೆ ಅಗತ್ಯವಿದ್ದರೆ ವೃತ್ತಿಪರರ ಮಾರ್ಗದರ್ಶನ ಪಡೆಯಬೇಕು. ತೆರಿಗೆ ಇಲಾಖೆಯ ಅಧಿಕಾರಿಗಳಿಗೆ ನೀವು ನೀಡುವ ಸಹಕಾರ ತ್ವರಿತ ಪರಿಹಾರ ಒದಗಿಸುತ್ತದೆ. ಅಷ್ಟೆ ಅಲ್ಲದೆ ಅನಗತ್ಯವಾಗಿ ಮೊಕದ್ದಮೆಯಿಂದ ಪಾರಾಗಬಹುದು ಎಂದು ಹೇಳಿದರು.

ಮೇಲ್ಮನವಿ ಸಲ್ಲಿಸುವ ಸಂದರ್ಭದಲ್ಲಿ ತೆರಿಗೆದಾರರು ನಿರ್ದಿಷ್ಟ ಪುರಾವೆಗಳೊಂದಿಗೆ ಸಲ್ಲಿಸಬೇಕು. ಮೇಲ್ಮನವಿ ಸಲ್ಲಿಕೆ ವಿಳಂಬವಾಗಬಾರದು ಎಂದು ತಿಳಿಸಿದರು.

ತೆರಿಗೆದಾರರು ಜವಾಬ್ದಾರಿಯಿಂದ ವರ್ತಿಸಿದಾಗ ಹಾಗೂ ಅಧಿಕಾರಿಗಳು ನ್ಯಾಯಯುತವಾಗಿ ವರ್ತಿಸಿದಾಗ ಮಾತ್ರ ತೆರಿಗೆ ವ್ಯವಸ್ಥೆಯನ್ನು ಸುಲಭವಾಗಿ ಬಲಪಡಿಸಬಹುದು ಎಂದು ಬಾಲಸುಬ್ರಹ್ಮಣ್ಯ ಹೇಳಿದರು.

ಭಾರತೀಯ ತೆರಿಗೆ ಸಲಹೆಗಾರರ ಸಂಘದ ಅಧ್ಯಕ್ಷ ಎಸ್.ನಂಜುಂಡ ಪ್ರಸಾದ್, ಪ್ರಧಾನ ಕಾರ್ಯದರ್ಶಿ ಮುಕುಂದ್, ಜಂಟಿ ಕಾರ್ಯದರ್ಶಿ ಕೆ.ಅನಿಲ್, ದಕ್ಷಿಣ ವಲಯ ಅಧ್ಯಕ್ಷ ಡಿ.ಎಂ.ಬಟ್ಟದ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.